ಗೌರಿ ಲಂಕೇಶರ

ಲಂಕೇಶ್

ಫೆಬ್ರವರಿ 21, 2007 ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಬೆಲೆ ರೂ. 10/-



ಕ್ವಾಟ್ರು
ಮ್ಮ್ಗೆ
ಫುಲ್
ಾಟಲ್
ಅವರ್ಗೆ'

'ನಾನ್ಯಾಕೆ ರಾಜೀನಾಮೆ ಕೊಡ್ಲಿ'

ಸಂಸದರೆಂಬ 28 ಮಂದಿ ನಾಮರ್ದರು

ದಾವಣಗೆರೆ:
ಸಂಗೀತಾ ಆತ್ಮಹತ್ಯೆ ಯತ್ನ

ಸತ್ಯವೇನು?

ಪುತ್ತೂರು:

ಕಳಚಿದ ಚೆಡ್ಡಿಗಳ ಮುಖವಾಡ

ಬಳ್ಳಾರಿ:

ಗಣಿ ಲೂಟಿಗೆ ಮತ್ತೆ ಜೀವ



ಭೂಗತ ಜಗತ್ತಿನ ನಂಟು!


ಕಾವೇರಿ ಅತ್ಯಂತ ಪ್ರಿಯ, ಆದರೆ ವಿದೇಶೀಯರು ಅದಕ್ಕಿಂತ ಪ್ರಿಯ!



ಕಾವೇರಿ ತೀರ್ಪಿನಿಂದ ಕರ್ನಾಟಕಕ್ಕೆ ಅತ್ಯಂತ ಅನ್ಯಾಯವಾಗಿದೆ. ಅದಕ್ಕೆ ವಿರೋಧ ಈಗ ಮೊದಲಷ್ಟಿಲ್ಲವಾದರೂ ಕರ್ನಾಟಕದ ಜನತೆ ಬೀದಿಗಿಳಿದು ಹೋರಾಡುತ್ತಿದ್ದಾರೆ. ಬೆಂಗಳೂರನ್ನೂ ಒಳಗೊಂಡಂತೆ ಬಹುಪಾಲು ಕಡೆ ತಮಿಳರು ಈ ಹೋರಾಟದಲ್ಲಿ ಕನ್ನಡಿಗರಿಗೆ ಹೆಗಲಿಗೆ ಹೆಗಲಾಗಿ ಧುಮುಕಿದ್ದಾರೆ. ಹೀಗಾಗಿಯೇ ಎರಡು ಭಾಷಿಕ ಸಮುದಾಯದಲ್ಲಿರುವ ದುರಭಿಮಾನಿಗಳಿಗೆ ಶಾಂತಿಗೆ ಹುಳಿ ಹಿಂಡುವ ಅವಕಾಶ ದೊರೆತಿಲ್ಲ. ಆಶ್ಚರಮಟ್ಟಿಗೆ ಈ ಬಾರಿಯ ಹೋರಾಟ ಆರೋಗ್ಯಪೂರ್ಣವಾಗಿ ಸಾಗುತ್ತಿದೆ. ಆದರೆ ಕಾವೇರಿ ಹೋರಾಟಕ್ಕೂ ಈಗ ಉದಾರೀಕರಣದ ಮತ್ತು ಜಾಗತೀಕರಣದ ಸೋಂಕು ಹತ್ತಿದೆ.

ಉದಾರೀಕರಣದ ಮತ್ತು ಜಾಗತೀಕರಣದ ಈ ಕಾಲಘಟ್ಟದಲ್ಲಿ ನಾಗರಿಕರೆಂದರೆ ವಿದೇಶಿ ಬಂಡವಾಳ ತರುವವರು. ಆದ್ದರಿಂದ ಸರ್ಕಾರದಲ್ಲಿ ಮತ್ತು ಸಮಾಜದಲ್ಲಿ ಈಗ ಸ್ಥಳೀಯರಿಗಿಂತ ಅವರಿಗೇ ಮೊದಲ ಮನ್ನಣೆ. ಸವಲತ್ತುಗಳು ಮತ್ತು ಸೌಲಭ್ಯಗಳು ಸ್ಥಳೀಯರಿಗೆ ಇದ್ದರೂ ಸರಿ, ಇಲ್ಲದಿದ್ದರೂ ಸರಿ ಆದರೆ ಇದರಲ್ಲಿ ವಿದೇಶಿಯರಿಗೆ ಮಾತ್ರ ಯಾವುದೇ ತೊಂದರೆ ಆಗಬಾರದೆಂಬುದೇ ಸರ್ಕಾರದ ನೀತಿ.

ಈಗ ಕಾವೇರಿ ತೀರ್ಪಿನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿ ಜನ ಬೀದಿಗೆ ಬದ್ದು ಹೋರಾಟ ಮಾಡುತ್ತಿದ್ದಾರೆ. ಅದರ ಭಾಗವಾಗಿಯೇ ಫೆಬ್ರವರಿ 8ರಂದು ಕರ್ನಾಟಕ ಬಂದ್ ಕರೆಯನ್ನೂ ನೀಡಲಾಗಿತ್ತು. ಆದರೆ ಫೆಬ್ರವರಿ 8 ರಿಂದ 11 ರವರೆಗೆ ಬೆಂಗಳೂರಿನಲ್ಲಿ ಏರ್ ಶೋ ನಡೆಯುವುದರಿಂದ ಮತ್ತು ಇದಕ್ಕೆ ವಿದೇಶದಿಂದ ಸಾವಿರಾರು ಪ್ರವಾಸಿಗರು ಮತ್ತು ಬಂಡವಾಳ ಹೂಡಿಕೆದಾರರು ಬರುವುದರಿಂದ ಬಂದ್ ಅನ್ನು ಮುಂದೂಡಲು ಬಂದ್‌ನ ಮುಂಚೂಣಿಯಲ್ಲಿ ಇರಬೇಕಾಗಿದ್ದ



ಸಾಕ್ಷಾತ್ ಮುಖ್ಯಮಂತ್ರಿಯೇ ಚಳವಳಿಗಾರರನ್ನು ಕೋರಿಕೊಂಡರು. "ತಮಿಳುನಾಡಿಗೆ ಒಂದು ತೊಟ್ಟು ನೀರೂ ಬಿಡುವುದಿಲ್ಲ, ಬೇಕಿದ್ದರೆ ರಕ್ತ ಹರಿಸುತ್ತೇವೆ" ಎಂದೆಲ್ಲಾ ಘೋಷಣೆ ಕೂಗುತ್ತಿದ್ದ ಚಳವಳಿಗಾರರೂ ನಮ್ಮ ನಾಡಿನ ನೆಲ ಮತ್ತು ಜಲಕ್ಕೆ ಹೆಚ್ಚಿನ ಕಂಟಕವಾಗಿರುವ ಈ ವಿದೇಶಿ ಬಂಡವಾಳದ ಹೂಡಿಕೆದಾರರಿಗೆ ತೊಂದರೆ ಯಾಗಬಾರದೆಂದು ಬಂದ್ ದಿನಾಂಕವನ್ನೇ ಮುಂದಕ್ಕೆ ಹಾಕಿಬಿಟ್ಟರು. ಈಗ ಬಂದ್ ಫೆಬ್ರವರಿ ಹನ್ನೆರಡಕ್ಕೆ..

ಕಾವೇರಿ ತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿದ್ದರೂ 270 ಟಿಎಂಸಿಯಾದರೂ ದಕ್ಕುತ್ತಿದೆ. ಆದರೆ ಈ ವಿದೇಶಿ ಬಂಡವಾಳಿಗರಿಗೆ ತಕ್ಕ ಹಾಗೆ ನಾಡಿನ ನಗರ ಮತ್ತು ಕೃಷಿ ನೀತಿಯನ್ನು ಪುನರ್ ರಚಿಸುತ್ತಿರುವುದರಿಂದ ಈ 270 ಟಿಎಂಸಿಗಳು ಈ ನೆಲದ ಮಕ್ಕಳಿಗೆ ದಕ್ಕುವುದಿಲ್ಲ. ನ್ಯಾಯಾಧೀಕರಣದ ವಿರುದ್ಧ ಎಷ್ಟು ಹೋರಾಟ ನಡೆಸಲಾಗುತ್ತಿದೆಯೋ ಅದರ ಎರಡು ಪಟ್ಟು ಹೋರಾಟ 270 ಟಿಎಂಸಿಗಳನ್ನು ನಮಗೇ ದಕ್ಕಿಸಿಕೊಳ್ಳಲು ಈ ವಿದೇಶಿ ಬಂಡವಾಳದ ವಿರುದ್ಧ ಹೋರಾಡಬೇಕು. ಆದರೆ ಸಾಮಾನ್ಯ ಜನರಿಗೆ ನ್ಯಾಯಾಧೀಕರಣದಿಂದಾದ ಅನ್ಯಾಯ ಗೊತ್ತಾಗುತ್ತದೆ. ಈ ವಿದೇಶಿ ಬಂಡವಾಳದ ಅಧಿಕರಣದಿಂದಾಗುತ್ತಿರುವ ಅನ್ಯಾಯ ತಿಳಿದವರೆಷ್ಟು? ತಿಳಿದೂ ಅದರೊಡನೆ ರಾಜಿಯಾದ ವರೆಷ್ಟು?

ಚಾರ್ವಾಕ

- ಶಿವಸುಂದರ್-


ಹಿಂದೂ ತಮಿಳರ ಮತ್ತು ಹಿಂದೂ ಕನ್ನಡಿಗರ ನಡುವೆ

ಚಡ್ಡಿಗಳು ಯಾರ ಪರ?

ಕಾವೇರಿ ತೀರ್ಪಿನ ಬಗ್ಗೆ ತಮಿಳುನಾಡಿನ ಎಲ್ಲಾ ಪಕ್ಷಗಳು ಹರ್ಷವನ್ನು ಮತ್ತು ಕರ್ನಾಟಕದ ಎಲ್ಲಾ ಪಕ್ಷಗಳು ದುಃಖವನ್ನು ಪ್ರಕಟಿಸಿವೆ. ಆದರೆ ಪೀಕಲಾಟ ಇರುವುದು ರಾಷ್ಟ್ರೀಯವೆಂದು ಕರೆಸಿಕೊಳ್ಳಲ್ಪಡುವ ಪಕ್ಷಗಳಿಗೆ. ಕರ್ನಾಟಕ ಕಾಂಗ್ರೆಸ್ ತೀರ್ಪನ್ನು ವಿರೋಧಿಸಿದರೆ ತಮಿಳುನಾಡು ಕಾಂಗ್ರೆಸ್ ತೀರ್ಪನ್ನು ಸ್ವಾಗತಿಸುತ್ತದೆ. ಬಿಜೆಪಿಯದೂ ಇದೇ ಪರಿಸ್ಥಿತಿ. ಇನ್ನು ಕಮ್ಯುನಿಸ್ಟರು ಏನು ಮಾಡುತ್ತಾರೆ ನೋಡಬೇಕು. ಇವೆಲ್ಲಾ ಚುನಾವಣಾ ಪಕ್ಷಗಳು. ಓಟಿನ ಆಸೆಯಿಂದಾಗಿ ಮತ್ತು ವಾಸ್ತವವಾಗಿ ಅವು ರಾಷ್ಟ್ರೀಯ ಪಕ್ಷಗಳಾದರೂ ಯಾವ ಪಕ್ಷಕ್ಕೂ ಒಂದು ರಾಷ್ಟ್ರೀಯ ಜಲ ನೀತಿಯೇ ಇಲ್ಲದಿರುವುದರಿಂದ ಅವು ಹೀಗೆ ಇರಲು ಸಾಧ್ಯ. ಆದರೆ ಸಾಂಸ್ಕೃತಿಕ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಇಡೀ ಭಾರತವನ್ನೇ ಹಿಂದೂ ರಾಷ್ಟ್ರವನ್ನಾಗಿ ಕಟ್ಟಬೇಕೆಂದಿರುವ ಚಡ್ಡಿಗಳದ್ದು ಏನು ನಿಲುವು? ಹಿಂದೂ-ಹಿಂದೂ ಒಂದು ಎನ್ನುವ ಸಂಘಪರಿವಾರ ಈಗ ಹಿಂದೂ ಕನ್ನಡಿಗರು ಮತ್ತು ಹಿಂದೂ ತಮಿಳರು ನದಿ ನೀರಿನ ಹಂಚಿಕೆ ವಿಷಯದಲ್ಲಿ ಎರಡಾಗಿರುವುದರ ಬಗ್ಗೆ ಏನನ್ನುತ್ತಾರೆ? ನದಿ ನೀರಿನ ಹಂಚಿಕೆ ಧಾರ್ಮಿಕ ಉನ್ಮಾದದ ವಿಷಯವಲ್ಲವಾದ್ದರಿಂದ ಅದನ್ನು ಹೇಗೆ ಬಗೆಹರಿಸುತ್ತಾರೆ? ಯಾರಿಗೆ ನ್ಯಾಯ ಮತ್ತು ಯಾರಿಗೆ ಅನ್ಯಾಯ ಎಂದು ಹೇಗೆ ತೀರ್ಮಾನಿಸುತ್ತಾರೆ? ಯಾವ ರಾಜ್ಯದಲ್ಲಿ ಎಷ್ಟು ದೇವಸ್ಥಾನಗಳಿವೆ ಎಂಬುದನ್ನು ಮಾನದಂಡವಾಗಿಸುತ್ತಾರೆಯೇ?



ಕಾವೇರಿ ತೀರ್ಪಿನ ಬಗ್ಗೆ ತನ್ನ ನಿಲುವೇನೆಂಬುದನ್ನು ಮತ್ತು ಅದಕ್ಕೆ ಅನುಸರಿಸುವ ಮಾನದಂಡಗಳೇನೆಂಬು ದನ್ನೂ ದಯವಿಟ್ಟು ಸಂಘಪರಿವಾರ ಕನ್ನಡಿಗರಿಗೆ ತಿಳಿಸುವರೇ?



ಕೊನೆ ಮಾತು

1000 ಕೋಟಿ ಬಂಡವಾಳ, ಆದರೆ 1000 ಉದ್ಯೋಗವೂ ಇಲ್ಲ!!

ಈಗ ಎಲ್ಲೆಲ್ಲೂ ವಿಶೇಷ ಆರ್ಥಿಕ ವಲಯದ್ದೇ ಮಾತಲ್ಲವೇ? ಆದರಿಂದ ರೈತರು ತಮ್ಮ ಜೀವನಾಸರೆ ಕಳೆದುಕೊಳ್ಳುತ್ತಾರೆಂದರೆ ಅದಕ್ಕೆ ಪ್ರತಿಯಾಗಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗುತ್ತದೆ ಎಂಬ ಪ್ರತಿವಾದವನ್ನು ಅದರ ಸಮರ್ಥಕರು ಹೂಡುತ್ತಾರೆ. ಆದರೆ ಈಗ ಎಲ್ಲೆಲ್ಲೂ ಕಾರ್ಮಿಕರನ್ನು ಕಡಿಮೆ ಮಾಡುತ್ತಿರುವ ಯುಗ. ತಮ್ಮ ಬಂಡವಾಳ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲು ಭಾರತದಂತಹ ಚೀಪ್ ರೇಟ್ ಕೂಲಿ ಸಿಗುವ ಕಡೆ ಬಂಡವಾಳ ಧಾವಿಸುತ್ತಿರುವ ಯುಗ. ಹೀಗಾಗಿ ವಿಶೇಷ ಆರ್ಥಿಕ ವಲಯಕ್ಕೆ 1 ಲಕ್ಷ ಕೋಟಿ ಬಂಡವಾಳ ಬರುತ್ತಿದ್ದರೂ ಅದು ಎಷ್ಟು ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿರುತ್ತದೆ ಎಂಬುದು ಪ್ರಸ್ತುತ ಪ್ರಶ್ನೆ.


ಇತ್ತೀಚೆಗೆ ಕಾರ್ಖಾನೆಗಳ ಉದ್ಯೋಗ ಸೃಷ್ಟಿ ಸಾಮರ್ಥ್ಯದ ಬಗ್ಗೆ ಒಂದು ಅಧ್ಯಯನ ನಡೆಯಿತು. ಅದರ ಕೆಲವು ಶೋಧನೆಗಳು ಹೀಗೆ ಹೇಳುತ್ತವೆ:

- 515 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಇರುವುದು ಕೇವಲ 80 ಉದ್ಯೋಗಗಳು.
- 10 ಎಂಟಿಯಂತಹ ಬೃಹತ್ ತೈಲ ಪರಿಶೋಧನಾಗಾರ ಸೃಷ್ಟಿಸಿರುವ ಉದ್ಯೋಗ ಕೇವಲ 800.
- ವಾರ್ಷಿಕ 4.5 ಮಿಲಿಯನ್ ಟನ್ ಸಾಮರ್ಥ್ಯ ಹೊಂದಿರುವ ಉಕ್ಕುಸ್ಥಾವರ ಸೃಷ್ಟಿಸುವ ಉದ್ಯೋಗ ಕೇವಲ 1800.
- ಮಿಗಿಲಾಗಿ ಈ ಎಲ್ಲಾ ಎಸ್.ಈ.ಜೆಡ್‌ಗಳಲ್ಲಿ ಬರುತ್ತಿರುವ ಕಂಪನಿಗಳಲ್ಲಿ ಶೇ.೫೫ರಷ್ಟು ಐ.ಟಿ. ಕಂಪನಿಗಳೆ. ಅಂದರೆ 1 ಲಕ್ಷ ಬಂಡವಾಳ ಎಷ್ಟು ಉದ್ಯೋಗ ಸೃಷ್ಟಿಸುತ್ತದೆ?

ವಾರದ ಘೋಷಣೆ

"ಇಂದು ನಾವು ದಂಡಕಾರಣ್ಯದಲ್ಲಿ ನಡೆಸುತ್ತಿರುವ ಹೋರಾಟದ ಸಾರಾಂಶ ಇಷ್ಟೆ: ವಿನಮ್ರವಾಗಿದ್ದುಕೊಂಡು ಅಥವಾ ಶಾಂತಿಯುತ ಹೋರಾಟ ಮಾರ್ಗಗಳಿಗೇ ಅಂತಿಮವಾಗಿ ಬದ್ಧವಾಗಿದ್ದುಕೊಂಡು ಗುಲಾಮಗಿರಿಯ ಮತ್ತು ಸತತ ಅಪಮಾನದ ಬದುಕನ್ನು ಬದುಕುವುದು ಮತ್ತು ಹಸಿವಿನಿಂದ ಸಾಯುವುದು..ಅಥವಾ ಮನುಷ್ಯರಾಗಿ ಬದುಕುವ ಉದ್ದೇಶದಿಂದ ಬಂದೂಕನ್ನು ಕೈಗೆತ್ತಿಕೊಂಡು ಎಲ್ಲಾ ಬಗೆಯ ದಮನಗಳಿಗೆ ಮೂಲವಾಗಿರುವ ವ್ಯವಸ್ಥೆಯನ್ನು ಮೂಲೋತ್ಪಾಟನೆಗೊಳಿಸುವುದು.. ಇವೆರಡರ ನಡುವಿನ ಆಯ್ಕೆಯಲ್ಲಿ ಜನ ಎರಡನೇ ಆಯ್ಕೆ ಮಾಡಿಕೊಂಡಿದ್ದಾರೆ."

- ಗಣಪತಿ, ಕಾರ್ಯದರ್ಶಿ, ಸಿಪಿಐ (ಮಾವೋವಾದಿ). ಸ್ವತಂತ್ರ ನಾಗರಿಕರ ತಂಡವೊಂದು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ



ವಾರದ ವಿವೇಕ

"ಇದು ಇಬ್ಬರು ರೈತರ ನಡುವಿನ ಸಮಸ್ಯೆ, ಇಬ್ಬರು ಭಾಷಿಕರ ನಡುವಿನ ಸಮಸ್ಯೆ ಅಲ್ಲವೇ ಅಲ್ಲ. ಇದನ್ನು ರೈತರೇ ಕೂತು ಮಾತಾಡಿ ಬಗೆಹರಿಸಿಕೊಳ್ಳಬೇಕು. ವಾಸ್ತವ ಸಮಸ್ಯೆ ಉದ್ಭವ ವಾಗುವುದು ಸಂಕಷ್ಟದ ಕಾಲದಲ್ಲಿ. ಈ ಸಮಸ್ಯೆಯ ಸಂಪೂರ್ಣ ಅರಿವಿರುವ ರೈತರೇ ಅದರ ಪರಿಹಾರ ವನ್ನು ಯೋಚಿಸಬಲ್ಲರು. ನೀರು ಸಾಲದೆ ಹೋದಾಗ ಇಬ್ಬರೂ ಕೂತುಕೊಂಡು ಯಾವ ಬೆಳೆ ಬೆಳೆದರೆ ಒಳ್ಳೆಯದೆಂಬುದನ್ನು ತೀರ್ಮಾನಿಸು ವುದೇ ವಿವೇಕ.."

- ಯು. ಆರ್. ಅನಂತಮೂರ್ತಿ

No Comments

"ಅಂಬಿಯನ್ನು ಗೆಲ್ಸಿ ತಪ್ಪು ಮಾಡ್ಬಿಟ್ವಿ...."

- ಮಂಡ್ಯದ ರೈತ

"ಕಾವೇರಿ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ."

- ಪೇಜಾವರ ಸ್ವಾ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಚೆರ್ನೋಬಿಲ್ ದುರಂತ ಭಾರತದಲ್ಲಿ ನಡೆಯುದ

- ಡಾ. ಎಂ. ಸಿ. ಅಬಾನಿ, ಸರ್ಕಾರಿ ವಿಜ

"ಕೆಆರ್‌ಎಸ್‌ಅನ್ನು ವಶಪಡಿಸಿಕೊಳ್ಳೋಣ. ನಾ ಎಂಜಿನಿಯರ್‌ಗಳನ್ನು ಕರೆತಂದು ನಾವೇ ಅಣೆಕ ಕಟ್ಟೋಣ."

- ಮಾದೇಗ

"ಎಲ್ಲಾ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗ ನೌಕರರನ್ನು ಮುಂದಿನ ಎರಡು ಮೂರು ತಿಂಗ ಖಾಯಂಗೊಳಿಸಲಾಗುವುದು."

- ಚನ್ನಿ

ವಾರದ ಹತಾಶೆ

"ವಿವಿಧ ಆಶಯಗಳುಳ್ಳ 17 ವಿವಿಧ ಪಕ್ಷಗ ಒಟ್ಟಾಗಿ ಸರ್ಕಾರ ರಚಿಸಲು ಸಾಧ್ಯವಾಗುವುದಾದ ಬೇರೆಬೇರೆ ಸಂತಮುನಿಗಳು ಒಟ್ಟಾಗಿರಲು ಸಾಧ್ಯವಾ ವುದಿಲ್ಲ. ಪಂಥವಾದಿ ಸಂತರಿಗಿಂತ ದೊಡ್ಡ ಆತಂ ವಾದಿಗಳು ಮತ್ತೊಬ್ಬರಿಲ್ಲ."

- ಮುನಿಶ್ರೀ ತರುಣ ಸಾಗ

ವಾರದ ಅವಿವೇಕ

"ಪ್ರಸಕ್ತ ಸಾಲಿನಿಂದ ಮಾನಸ ಸರೋವರ ಯಾತ್ರೆ ಹೋಗುವ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್‌ನ ಶೇ.10ರಷ್ಟು ಮೀಸಲಾತಿಯನ್ನು ನಿಗದಿಪಡಿಸಲಾ ವುದು. ಇದರಿಂದ ಅವರಲ್ಲಿ ದೇಶಭಕ್ತಿ ಉದ್ದೀ ನಗೊಳ್ಳುತ್ತದೆ."

- ಡಿ. ಹೆಚ್. ಶಂಕರಮೂರ್ತಿ
ಉನ್ನತ ಶಿಕ್ಷಣ ಸಚಿ

ವಾರದ ವಿಪರ್ಯಾಸ

"ಅಣುಶಕ್ತಿಯೆಂಬುದು ಕಳೆದ 50 ವರ್ಷಗಳಿಂ ಇದ್ದರೂ ಅದು ಭಾರತದ ಶೇ.3 ರಷ್ಟು ವಿದ್ಯುತ್ತ ಮಾತ್ರ ಪೂರೈಸುತ್ತಿದೆ. ಆದರೆ ಪರ್ಯಾಯ ಇಂಧ ಮೂಲಗಳ ಬಗ್ಗೆ ಇತ್ತೀಚೆಗಷ್ಟೆ ಕೆಲಸ ಶುರುವಾ ದ್ದರೂ ಅದೀಗಾಗಲೇ ದೇಶದ ಶೇ.6 ರ ವಿದ್ಯುತ್ತನ್ನು ಪೂರೈಸುತ್ತಿದೆ. ಆದರೂ ವೈಜ್ಞಾ ಸಂಶೋಧನೆಯ ಬಜೆಟ್ಟಿನಲ್ಲಿ ಅಣುಶಕ್ತಿಗೆ ಸಿ ಪಾಲು, ಪರ್ಯಾಯ ಇಂಧನಕ್ಕೆ ಕನಿಷ್ಟ ಪಾಲು

- ಎಸ್.ಕೆ.ಚೋಪ್ರ, ಕಾರ್ಯದರ್ಶಿ
ಪರ್ಯಾಯ ಇಂಧನ ಮೂಲ ಇಲಾ

ವಾರದ ಅಪಹಾಸ್ಯ

ಕಾವೇರಿ ತೀರ್ಪಿನಿಂದ ಕರ್ನಾಟಕಕ್ಕೆ ಆದ ಅನ್ಯಾಯ ಬಗ್ಗೆ ಹೇಗೆ ಪ್ರತಿಕ್ರಿಯಿಸಬೇಕು ಎಂದು ಕೇಳಿದ ಕೆಲವು ಸಾಫ್ಟ್‌ವೇರ್ ಇಂಜಿನಿಯರ್ ಮತ್ತು ಹೈಟೆ ಕಲಾವಿದೆಯರು ಈ ರೀತಿ ಸಲಹೆ ಕೊಟ್ಟಿದ್ದಾರೆ

- ಮನೆಯಲ್ಲಿ ಕ್ಯಾಕ್ಟಸ್ ಗಿಡಬೆಳೆಸಿ ಅದಕ್ಕೆ ಕಾವೇ ಎಂದು ಹೆಸರಿಡಿ.
- ವಾರದಲ್ಲಿ ಒಂದು ದಿನ ಬಟ್ಟೆ ಒಗೆಯದೆ ಮ ಸ್ನಾನ ಮಾಡದೆ ನೀರು ಉಳಿಸಿ ಮತ್ತು ಸ ನೀರಿನ ಮಿತವ್ಯಯ ಹೇಗೆ ಎಂದು ಚರ್ಚಿಸಿ?....

ವಾರದ ಸತ್ಯ



"ಈಗ ನೇಪಾಳ ತೆರಾಯ್ ಪ್ರಾಂತ್ಯದ ಆಗುತ್ತಿರುವ ಗಲಭೆ ಮೂಲ ಇರುವು ಭಾರತದ ಗೋರಖ್‌ಪ ದಲ್ಲಿ. ಅಲ್ಲಿ ಇತ್ತೀಚೆಗೆ ನಡೆದ ಆರೆಸ್ಸೆಸ್ ಸಮ್ಮೇ ನದಲ್ಲಿ ನೇಪಾಳವನ್ನು ಹಿಂದೂ ರಾಷ್ಟ್ರವನ್ನಾಗಿಯ ಮತ್ತು ರಾಜಸತ್ತೆಯನ್ನಾಗಿಯೂ ಉಳಿಸಿಕೊಳ್ಳ ಹಾಗೂ ಅಶಾಂತಿ ಎಬ್ಬಿಸಲು ತೀರ್ಮಾನಿಸಲಾಯಿ ಆ ಸಭೆಯಲ್ಲಿ ರಾಜನಿಷ್ಠ ಸೇನಾಧಿಕಾರಿ ಭರ ಕೇಸರಿ ಮತ್ತು ಈಗ ಮದೇಶಿ ಹೋರಾಟದ ಮು ನಾಗಿರುವ ಉಪೇಂದ್ರ ಯಾದವ್ ಭಾಗವಹಿಸಿದ್ದ ಆ ಸಭೆ ಮುಗಿದ ಎರಡು ವಾರಗಳಲ್ಲಿ ಮದ ಚಳವಳಿ ಮತ್ತು ಗಲಭೆಗಳು ಪ್ರಾರಂಭವಾದವ

- ಪ್ರಚಂಡ, ನೇಪಾಳ ಮಾವೋವಾದಿ ಪ
ಕಾರ್ಯದ

ಕಾವೇರಿ ಕುಟುಂಬದ ನಾವು ಕಲಿಯಬೇಕಾದ್ದು

ಕಂಡಹಾಗೆ



ಸುಮಾರು ನಾಲ್ಕು ವರ್ಷಗಳ ಹಿಂದೆ ಇದೇ ಕಾವೇರಿ ಸಮಸ್ಯೆ ಉಲ್ಬಣಗೊಂಡಾಗ ಅಂದಿನ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಬೆಂಗಳೂರಿನಿಂದ ಮಂಡ್ಯದ ತನಕ ಪಾದಯಾತ್ರೆ ಮಾಡುವುದಾಗಿ ಘೋಷಿಸಿದರು. ಅವರ ಈ ಪಾದಯಾತ್ರೆ ಕುರಿತಂತೆ ಅವರ ಮಾಧ್ಯಮ ಸಲಹೆಗಾರ ಮತ್ತು ನನ್ನ ಬಹಳ ವರ್ಷಗಳ ಮಿತ್ರ ದಿನೇಶ್ ಫೋನ್ ಮಾಡಿ "ಗೌರಿ, ರಾಜ್ಯದ ಹಿರಿಯ ಸಾಹಿತಿಗಳು, ಬುದ್ಧಿಜೀವಿಗಳು, ಎಲ್ಲರೂ ಈ ಪಾದ ಯಾತ್ರೆಯಲ್ಲಿ ಸಾಂಕೇತಿಕವಾಗಿ ಭಾಗವಹಿಸುತ್ತಿದ್ದಾರೆ, ನೀನೂ ಬಾ" ಅಂದ.

ಆಗ ನಾನು "ಖಂಡಿತವಾಗಿಯೂ ಬರುತ್ತೇನೆ, ಆದರೆ ಒಂದು ಷರತ್ತಿನ ಮೇಲೆ. ಪಾದಯಾತ್ರೆ ಪ್ರಾರಂಭಿಸುವ ಮುನ್ನ ಎಸ್.ಎಂ. ಕೃಷ್ಣ ತಮ್ಮ ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿ" ಅಂದೆ.

"ಯಾಕೆ?" ದಿನೇಶ್ ಪ್ರಶ್ನೆ.

"ಯಾಕೆ ಅಂದ್ರೆ, ಅಧಿಕಾರದಲ್ಲಿರುವವರು ಜನರ ಪರವಾಗಿ ಹೋರಾಟ ಮಾಡಬೇಕೆಂದರೆ ತಮ್ಮ ಅಧಿಕಾರ ಸ್ಥಾನಕ್ಕೆ ರಾಜೀನಾಮೆ ನೀಡಿದರೆ ಮಾತ್ರ ಅದಕ್ಕೆ ಅರ್ಥ ಬರುತ್ತೆ. ಇವತ್ತು ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಮತ್ತು ಪ್ರಭುತ್ವ ಬೇರೆ ಬೇರೆ ಆಗಿರುವಾಗ ಜನಸೇವೆಗೆ ಅಧಿಕಾರ ಎಂಬುದು ಅರ್ಥ ಹೀನವಾಗಿದೆ. ಆದ್ದರಿಂದ ಒಂದೋ, ಅಧಿಕಾರದಲ್ಲಿರಬೇಕು. ಇಲ್ಲಾ ಜನರೊಂದಿಗಿರಬೇಕು" ಎಂದು ಉತ್ತರಿಸಿದೆ.

ಕೃಷ್ಣರವರು ತಮ್ಮ ಪಾದಯಾತ್ರೆಯನ್ನು 'ಯಶಸ್ವಿ'ಯಾಗಿ ಮುಗಿಸಿದರು. ಆದರೆ ಅದು ಎಂತಹ 'ಯಶಸ್ಸು' ಆಗಿತ್ತೆಂದರೆ ಅದರಿಂದ ಕರ್ನಾಟಕಕ್ಕೆ ಕಾವೇರಿ ನೀರೂ ಬರಲಿಲ್ಲ, ಕೃಷ್ಣರಿಗೆ ಅಧಿಕಾರವೂ ಸಿಗಲಿಲ್ಲ.

ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ಕೃಷ್ಣರಂತಹ ರಾಜಕಾರಣಿಗಳು ತಮ್ಮ ರಾಜಕೀಯದ ದುರುದ್ದೇಶಕ್ಕಾಗಿ ಕಾವೇರಿ ನೀರಿನ ಸಮಸ್ಯೆಯನ್ನು ಉಪಯೋಗಿಸಿಕೊಂಡರೆ ಅದರಿಂದ ಜನರಿಗೆ ಕಿಂಚಿತ್ತೂ ಪ್ರಯೋಜನವಿಲ್ಲ, ಬದಲಾಗಿ ಇಂತಹ ಸಮಸ್ಯೆಗಳನ್ನು ಹೇಗೆ ಯಾರಿಗೂ ಅನ್ಯಾಯವಾಗದಂತೆ ಬಗೆಹರಿಸಬೇಕೆಂಬುದು ನಿಜವಾದ ನಾಯಕರ ಕಾಳಜಿ ಆಗಬೇಕು. ಅದು ನಮ್ಮ ನಾಯಕರಿಂದ ಅಸಾಧ್ಯ ಎನಿಸುತ್ತದೆ.


ಕಾವೇರಿ ಮಾತ್ರವಲ್ಲ, ನಮ್ಮ ದೇಶದ ಇತರೆ ನದಿಗಳ ನೀರಿನ ಹಂಚಿಕೆ ಸೇರಿದಂತೆ ಜಗತ್ತಿನ ಹಲವಾರು ನದಿಗಳನ್ನು ಕುರಿತು ವಾದ-ವಿವಾದಗಳು ನಡೆದಿವೆ. ಇದರ ಬಗ್ಗೆ ಅಧ್ಯಯನ ಮಾಡಿದಾಗ ಹಲವಾರು ಆಶ್ಚರ್ಯಕರ ಸಂಗತಿಗಳು ನನ್ನ ಗಮನಕ್ಕೆ ಬಂದು, ಅವುಗಳಲ್ಲಿ ಹಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಕ್ರಿಪೂರ್ವ 2,500ರಲ್ಲೇ ಸುಮೇರಿಯಾ ಎಂಬ ಪುರಾತನ ನಾಗರೀಕತೆಯ ಸಂದರ್ಭದಲ್ಲೇ ಲಗಾಶ್ ಮತ್ತು ಉಮ್ಮ ಎಂಬ ಎರಡು ರಾಜ್ಯಗಳ ನಡುವೆ ಟಗ್ರಿಸ್ ನದಿಯ ನೀರಿನ ಹಂಚಿಕೆ ಬಗ್ಗೆ ಗಲಾಟೆಗಳಾಗಿ, ನೀರನ್ನು ಕುರಿತು ಜಗತ್ತಿನ ಪ್ರಪ್ರಥಮ ಒಪ್ಪಂದ ಆ ಎರಡೂ ರಾಜ್ಯಗಳ ನಡುವೆ ಏರ್ಪಟ್ಟಿತ್ತು.

ಇದಕ್ಕಿಂತಲೂ ಅಚ್ಚರಿ ಮೂಡಿಸುವ ಸಂಗತಿ ಯಾವುದೆಂದರೆ, ಪರಂಪರಾಗತ ವೈರಿಗಳಾದ ಯಹೂದಿಯರ ಇಸ್ರೇಲ್ ಮತ್ತು ಅರಬ್ಬರ ಜೋರ್ಡಾನ್ ನಡುವೆ ನೀರಿನ ಹಂಚಿಕೆ ಕುರಿತು ಏರ್ಪಟ್ಟಿರುವ ಒಪ್ಪಂದ.

1994ರಲ್ಲಿ ಎರಡೂ ದೇಶಗಳ ನಡುವೆ ಶಾಂತಿ ಸಂಧಾನ ನಡೆದಾಗ ಅದಕ್ಕೆ ದೊಡ್ಡ ತೊಡಕಾದದ್ದು ಎಷ್ಟು ಭೂಮಿ ಯಾರಿಗೆ ಸೇರಬೇಕು, ಯಾರ ಗಡಿ ಎಲ್ಲಿಯತನಕ ಇರಬೇಕು ಎಂಬುದು ಮಾತ್ರವಲ್ಲ, ಅವುಗಳೊಂದಿಗೆ ಅತಿ ಮುಖ್ಯವಾಗಿ ಚರ್ಚೆಯಾಗಿದ್ದು ನೀರಿನ ಬಗ್ಗೆ. ಕೊನೆಗೂ ಇವೆರಡು ದೇಶಗಳು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಅಲ್ಲಿ ಈಗಿರುವ ವ್ಯವಸ್ಥೆ ಎಂತಹದ್ದು ಗೊತ್ತೆ?

ಜೋರ್ಡಾನ್‌ನ ಬಹಳಷ್ಟು ಭೂಪ್ರದೇಶ ಸಮತಟ್ಟಾಗಿರುವುದರಿಂದ ಅದು ತನಗೆ ಬೇಕಿರುವ ನೀರನ್ನು ಇಸ್ರೇಲಿನ ಕೆರೆಗಳಲ್ಲಿ ಸಂಗ್ರಹಿಸಿಡುತ್ತದೆ. ಹಾಗೆಯೇ ಕಡಿಮೆ ಭೂಪ್ರದೇಶವನ್ನು ಹೊಂದಿರುವ ಇಸ್ರೇಲ್ ತನ್ನ ಕೃಷಿಗೆಂದು ಜೋರ್ಡಾನ್‌ನ ಗದ್ದೆ ಮತ್ತು ಕೊಳವೆಬಾವಿಗಳನ್ನು ಗುತ್ತಿಗೆ ಮೇಲೆ ಪಡೆಯುತ್ತದೆ.

ಪರಸ್ಪರ ವೈರಿ ದೇಶಗಳಾಗಿದ್ದ ಜೋರ್ಡಾನ್ ಮತ್ತು ಇಸ್ರೇಲ್ ನಡುವೆಯೇ ಇಂತಹ ಒಂದು ಒಪ್ಪಂದ



ಆಗಿರುವಾಗ ಹಲವಾರು ಸಾಮ್ಯತೆಗಳನ್ನು ಹೊಂದಿರುವ, ಸಹಸ್ರಾರು ವರ್ಷಗಳ ಕಾಲ ಜೊತೆಯಾಗಿ ಬಾಳಿರುವ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಇದೇಕೆ ಸಾಧ್ಯವಾಗುತ್ತಿಲ್ಲ.

ಇದನ್ನು ಸಾಧ್ಯವಾಗಿಸಲು 'ಕಾವೇರಿ ಕುಟುಂಬ' ಎಂಬ ಸಂಘಟನೆ ಪ್ರಯತ್ನಿಸಿರುವುದು ಪ್ರಶಂಸಾರ್ಹ. ಏಕೆಂದರೆ, ಈ ಕಾವೇರಿ ಕುಟುಂಬ ತನ್ನ ಕಾರ್ಯವನ್ನು ಪ್ರಾರಂಭಿಸುವ ಮುನ್ನ ಕನ್ನಡಿಗ ರೈತರ ಬಗ್ಗೆ ತಮಿಳುನಾಡಿನ ರೈತರಲ್ಲಿ, ಮತ್ತು ತಮಿಳುನಾಡಿನ ರೈತರ ಬಗ್ಗೆ ಕನ್ನಡಿಗ ರೈತರಲ್ಲಿ ಅಪಾರ ಪೂರ್ವಗ್ರಹಗಳಿದ್ದವು. ಉದಾಹರಣೆಗೆ ತಮಿಳು ರೈತ ವರ್ಷಕ್ಕೆ ಮೂರು ಬೆಳೆ ಬೆಳೆಯುವುದರಿಂದಲೇ ಅವರಿಗೆ ಅಷ್ಟೊಂದು ನೀರು ಬೇಕಾಗುತ್ತದೆ ಎಂದೇ ಕನ್ನಡಿಗ ರೈತರು ನಂಬಿದ್ದರು. ಆದರೆ ಕಾವೇರಿ ಕುಟುಂಬದ ನೆರವಿನಿಂದ ಇದು ಸುಳ್ಳು ಎಂಬುದು ಕನ್ನಡಿಗರಿಗೆ ಮನವರಿಕೆ ಆಯಿತು.

ಹಾಗೆಯೇ ಕನ್ನಡಿಗರು ತಮ್ಮ ಡ್ಯಾಮ್‌ಗಳಲ್ಲಿ ನೀರನ್ನು ಶೇಖರಿಸಿಟ್ಟುಕೊಂಡು ಬೇಕೆಂತಲೇ ನೀರನ್ನು ನೀಡುತ್ತಿಲ್ಲ ಎಂದು ತಮಿಳು ರೈತರು ನಂಬಿದ್ದರು. ಆದರೆ ಅವರನ್ನು ಕರೆದುಕೊಂಡು ಬಂದು ಇಲ್ಲಿನ ನೀರಿಲ್ಲದ ಡ್ಯಾಮ್‌ಗಳನ್ನು ತೋರಿಸಿದಾಗ ಕನ್ನಡಿಗರು ಸುಳ್ಳು ಹೇಳುತ್ತಿಲ್ಲ ಎಂದು ತಮಿಳರಿಗೆ ಮನವರಿಕೆ ಆಯಿತು.

ಪ್ರತಿ ಬಾರಿ ಕಾವೇರಿ ಸಮಸ್ಯೆ ಉದ್ಭವಿಸಿದಾಗ ಅಪ್ಪ "ಇದನ್ನು ಭಾಷೆ ಅಥವಾ ರಾಜ್ಯದ ಗಡಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡಬಾರದು. ಬದಲಿಗೆ ಎರಡೂ ಕಡೆ ಇರುವವರು ರೈತರು; ಆದ್ದರಿಂದ ಭಾಷೆ, ಗಡಿ ಎಂಬುದನ್ನೆಲ್ಲ ಮೀರಿ ಜನರ ಹಿತದೃಷ್ಟಿಯನ್ನಿಟ್ಟುಕೊಂಡು ನೋಡಬೇಕು. ಅಷ್ಟೇ ಅಲ್ಲ, ಯಾವ ನದಿಯ ನೀರಿನ ಬಗ್ಗೆ ಎಲ್ಲರೂ ಕಚ್ಚಾಡುತ್ತಿದ್ದಾರೊ, ಆ ನದಿಯೇ ನಿಧಾನವಾಗಿ ಸತ್ತು ಹೋಗುತ್ತಿದೆ. ಆದ್ದರಿಂದ ದೂರದೃಷ್ಟಿ ಇಟ್ಟುಕೊಂಡು ಆ ನದಿಯನ್ನು ಹೇಗೆ ಜೀವಂತವಾಗಿ ಇಡಬಹುದೆಂಬುದೂ ಎಲ್ಲರ ಕಾಳಜಿ ಆಗಬೇಕು" ಎಂದೇ ಹೇಳುತ್ತಿದ್ದರು.

ಆದರೆ ಇವತ್ತು ಕಾವೇರಿ ನೀರಿನ ಹಂಚಿಕೆಯ ವಿಷಯ ನಿಷ್ಪ್ರಯೋಜಕ ಪಾದಯಾತ್ರೆಗಳಿಗೆ, ಟಿವಿ ಕ್ಯಾಮೆರಾಗಳ ಮುಂದೆ ನಡೆಯುವ ಪ್ರತಿಭಟನೆಗಳಿಗೆ, ಬಂದಿಗೆ, ಕತ್ತೆ ಕುರಿಗಳ ಮೆರವಣಿಗೆಗೆ ಸೀಮಿತವಾಗಿರುವುದು ದುರಂತ.

ಇನ್ನು ಕಾವೇರಿ ಟ್ರಿಬ್ಯುನಲ್ ನೀಡಿರುವ ಅಂತಿಮ ತೀರ್ಪಿನ ಬಗ್ಗೆ ಹೇಳುವುದಾದರೆ ಅದರಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ ಮಾತ್ರವಲ್ಲ, ತೀರ್ಪು ವೈಜ್ಞಾನಿಕವಾಗಿಯೂ, ತಾರ್ಕಿಕವಾಗಿಯೂ ಅಸಮರ್ಥವಾಗಿದೆ.

ಯಾವುದೇ ನದಿ ನೀರಿನ ಹಂಚಿಕೆಯ ಸಮಸ್ಯೆಯಲ್ಲಿ ಪ್ರಥಮವಾಗಿ ಗಣನೆಗೆ ತೆಗೆದುಕೊಳ್ಳಬೇಕಿರುವುದು ಯಾರಿಗೆ ಎಷ್ಟು ನೀರು ಎಂಬುದನ್ನಲ್ಲ, ಬದಲಾಗಿ ಆ ನೀರಿನಿಂದ ಸಿಗುವ ಲಾಭದ ಹಂಚಿಕೆ ಸರಿಯಾಗಿ ಆಗುತ್ತಿದೆಯೇ ಎಂಬುದು. ಈ ಅಂಶ ಟ್ರಿಬ್ಯುನಲ್‌ನ ತೀರ್ಪಿನಲ್ಲಿ ಕಂಡುಬರುವುದೇ ಇಲ್ಲ. ಅದರಲ್ಲೂ ಇವತ್ತು ಭಾರತದ ಬೇರೆ ನದಿ ಕಣಿವೆಗಳಿಗಿಂತ ಕಾವೇರಿ ನದಿ ಕಣಿವೆ ಅತಿಯಾಗಿ ಅಭಿವೃದ್ಧಿ ಹೊಂದಿರುವುದರಿಂದ, ಲಕ್ಷಾಂತರ ಜನರ ಬದುಕು ಅದನ್ನು ಅವಲಂಬಿಸಿರುವುದರಿಂದ ಆ ನದಿಯ ನೀರನ್ನು ವೈಜ್ಞಾನಿಕವಾಗಿಯೂ, ಸಮರ್ಥವಾಗಿಯೂ, ನ್ಯಾಯಯುತವಾಗಿಯೂ ಬಳಸಲಾಗುತ್ತಿದೆಯೇ ಎಂಬುದು ಇವತ್ತು ಮುಖ್ಯವಾಗಬೇಕಿದೆ.

ಉದಾಹರಣೆಗೆ ಕಾವೇರಿಯ ಜಲಾನಯನ ಪ್ರದೇಶವಾದ ಕರ್ನಾಟಕದಲ್ಲಿನ ಅಂತರ್ಜಲ ತಮಿಳುನಾಡಿಗಿಂತಲೂ ಕಡಿಮೆ ಇದೆ. ಒಂದು ಅಂದಾಜಿನ ಪ್ರಕಾರ ತಮಿಳುನಾಡಿನಲ್ಲಿ 434 TMC ಅಡಿಯಷ್ಟು ಅಂತರ್ಜಲವಿದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಟ್ರಿಬ್ಯುನಲ್ ಕರ್ನಾಟಕ ಎಷ್ಟು ಕಾವೇರಿ ನೀರನ್ನು ಬಳಸಬಹುದು ಎಂದಿದೆಯೋ ಹೊರತು, ಆ ಅಂತರ್ಜಲವನ್ನು ತಮಿಳುನಾಡು ಉಪಯೋಗಿಸಿಕೊಂಡು ಕರ್ನಾಟಕಕ್ಕೆ ಹೆಚ್ಚು ನೀರು ಸಿಗುವಂತೆ ಮಾಡಿಲ್ಲ. ಅಷ್ಟೇ ಅಲ್ಲ, ಕರ್ನಾಟಕದ ಮೇಲೆ ನೀರನ್ನು ಕುರಿತು ನಿರ್ಬಂಧಗಳನ್ನು ಹೇರಿರುವ ಟ್ರಿಬ್ಯುನಲ್ ತಮಿಳುನಾಡು ಯಾವುದೇ ನಿರ್ಬಂಧಗಳಿಲ್ಲದೆ ಅಂತರ್ಜಲವನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳಿದೆ. ಇದು ಅನ್ಯಾಯವಲ್ಲದೆ ಇನ್ನೇನು?

ಇವತ್ತು ಕೊಳವೆಬಾವಿಗಳಿಂದಾಗಿ ಅಂತರ್ಜಲ ಕುಗ್ಗುತ್ತಿದೆ ಎನ್ನುವವರಿದ್ದಾರೆ. ಆದರೆ ಕಾವೇರಿ ನದಿಯೂ ಹೇಗೆ ಮಳೆಯನ್ನೇ ಅವಲಂಬಿಸಿದೆಯೋ, ಕೊಳವೆಬಾವಿಗಳೂ ಮಳೆಯನ್ನೇ ಆಶ್ರಯಿಸಿವೆ. ನಮ್ಮ ದೇಶದ ಶೇ. 90ರಷ್ಟು ಹಳ್ಳಿಗಳ ಕುಡಿಯುವ ನೀರು ಕೊಳವೆಬಾವಿಗಳಿಂದ ಪೂರೈಕೆ ಆಗುತ್ತಿರುವಾಗ, ಸಾಕಷ್ಟು ತೋಟಗಳೂ ಇಂತಹ ಬಾವಿಗಳನ್ನೇ ಅವಲಂಬಿಸಿರುವಾಗ, ತಮಿಳುನಾಡಿನಲ್ಲಿ ಸಾಕಷ್ಟು ಅಂತರ್ಜಲವಿರುವಾಗ ಅದನ್ನೂ ಟ್ರಿಬ್ಯುನಲ್ ಗಣನೆಗೆ ತೆಗೆದುಕೊಂಡಿದ್ದರೆ ಕರ್ನಾಟಕಕ್ಕೆ ಅನ್ಯಾಯವಾಗುತ್ತಿರಲಿಲ್ಲ.

ಎಲ್ಲರಿಗೂ ಗೊತ್ತಿರುವಂತೆ ತಮಿಳುನಾಡಿನ ರೈತರು ಬಹಳಷ್ಟು ನೀರನ್ನು ಬೇಡುವ ಭತ್ತವನ್ನು ವರ್ಷಕ್ಕೆರಡು ಬಾರಿ ಬೆಳೆಯುತ್ತಾರೆ. ಈಗ ಟ್ರಿಬ್ಯುನಲ್ ಕೂಡ ಅವರ ಈ ಎರಡು ಬೆಳೆ ಬೆಳೆಯುವುದಕ್ಕೆ ಬೇಕಾದಷ್ಟು ನೀರನ್ನು ನೀಡಿದೆ. ಅಂದರೆ ನೀರನ್ನು ಮಿತವಾಗಿ ಮತ್ತು ಸಮರ್ಥವಾಗಿ ಉಪಯೋಗಿಸುವುದಕ್ಕೆ ಪ್ರೋತ್ಸಾಹ ನೀಡುವ ಬದಲಾಗಿ ನೀರನ್ನು ಪೋಲು ಮಾಡುವ, ಅಸಮರ್ಥವಾಗಿ ಉಪಯೋಗಿಸುವ ಜನರಿಗೇ ಪ್ರೋತ್ಸಾಹ ನೀಡಿದೆ. ಇದೂ ಕರ್ನಾಟಕಕ್ಕೆ ಆಗಿರುವ ಅನ್ಯಾಯ.

ಇನ್ನೊಂದು ಅಂಶ ಯಾವುದೆಂದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ಭತ್ತವನ್ನು ಹೊಸ ರೀತಿಯಲ್ಲಿ ಬೆಳೆಯುವ ಪದ್ಧತಿ ಬಂದಿದ್ದು ಈ ಪದ್ಧತಿಯಲ್ಲಿ ಶೇ 50ರಷ್ಟು ಕಡಿಮೆ ನೀರು ಬಳಕೆಯಾಗುತ್ತದಲ್ಲದೆ ಶೇ.50ರಷ್ಟು ಹೆಚ್ಚು ಉತ್ಪತ್ತಿಯನ್ನೂ ನೀಡುತ್ತದೆ. ತಮಿಳು ರೈತರು ಈ ಹೊಸ ಪದ್ಧತಿಯನ್ನು ಅನುಸರಿಸಿದರೆ, ಕರ್ನಾಟಕಕ್ಕೆ ಹೆಚ್ಚು ನೀರು ಉಳಿಯುತ್ತಿತ್ತು, ಇದನ್ನೂ ಮಾಡದೆ ಕರ್ನಾಟಕಕ್ಕೆ ಅನ್ಯಾಯವೆಸಗಿದ್ದಾರೆ.

ಆದರೆ ಟ್ರಿಬ್ಯುನಲ್‌ನಿಂದ ಆಗದಿದ್ದನ್ನು ಎರಡೂ ರಾಜ್ಯಗಳ ರೈತರು, ಜನನಾಯಕರು ಮತ್ತು ಕಾವೇರಿ ಕುಟುಂಬದವರು ಮಾಡಬೇಕಿದೆ. ಅದು ಹೇಗೆ ಸಾಧ್ಯ? ಒಂದು ಉದಾಹರಣೆ ಕೊಡಬಲ್ಲೆ. ಸುಭಾಷ್ ಪಾಳೇಕರ್‌ರವರ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವ ಬನ್ನೂರು ಕೃಷ್ಣಪ್ಪ ಕೂಡ ತಮ್ಮ ಗದ್ದೆಯಲ್ಲಿ ಭತ್ತ ಬೆಳೆಯುತ್ತಾರೆ. ಅವರಿಗೆ ಹೇರಳವಾಗಿ ನೀರು ಲಭ್ಯವಿದ್ದರೂ ಅವರು ಅದಷ್ಟು ಕಡಿಮೆ ನೀರು ಉಪಯೋಗಿಸಿ ಸಾಕಷ್ಟು ಭತ್ತ ಬೆಳೆಯುತ್ತಾರೆ. ಇದನ್ನು ನೋಡಿದ ತಮಿಳುನಾಡಿನ ರೈತರು "ಇದೇ ಪದ್ಧತಿಯನ್ನು ನಾವೂ ಅಳವಡಿಸಿದರೆ ಕಾವೇರಿಯಲ್ಲಿ ಸಾಕಷ್ಟು ನೀರು ಉಳಿತಾಯವಾಗಿ ನಾವಿಬ್ಬರೂ ಹೀಗೆ ಕಿತ್ತಾಡುವ ಪ್ರಮೇಯವೇ ಬರುವುದಿಲ್ಲ" ಎಂದು ಉದ್ಗಾರವೆತ್ತಿದರಂತೆ....

-ಗೌರಿ ಲಂಕೇಶ್

ಹೀಗಾ ಭಯಾನಕ ಹತ್ಯೆ ಮತ್ತು ಅದರ ಸುತ್ತ ತಳುಕುಕೊಳ್ಳುವ ಕಬ್ಬಿಣದ ಅದಿರಿನ ಕಳ್ಳಸಾಗಾಣಿಕೆಯನ್ನು ಹೊಸಪೇಟೆ ಪೊಲೀಸರು ವ್ಯವಸ್ಥಿತವಾಗಿ ಮುಚ್ಚಿಬಿಟ್ಟರೆ?

ಕೊಲೆಯಾದವನು ಹೊಸಪೇಟೆಯ ಆರ್‌ಟಿಓ ಟೋಕನ್ ಏಜೆಂಟ್ ಅಶೋಕ್ ಬಾವಿಕಟ್ಟಿ. ಫೆಬ್ರವರಿ 2ರ ಶುಕ್ರವಾರ ರಾತ್ರಿ 10 ಗಂಟೆಗೆ ಆತನ ಕಚೇರಿಯ ಹಿಂಭಾಗದಲ್ಲೇ ಆತನನ್ನು ಇರಿದು ಕೊಂದವನು ಸಾರಿಗೆ ಇಲಾಖೆಯ ಜಂಟಿ ಕಮೀಷನರ್ ಅಯ್ಯಪ್ಪನವರ ಕಾರಿನ ಡ್ರೈವರ್

ಗಣಿ ಸಂಪತ್ತನ್ನು ರಾಷ್ಟ್ರೀಕರಣ ಮಾಡುವಂತೆ ಕೇಂದ್ರಕ್ಕೆ ಮನವಿ ಕೊಟ್ಟ ಮುಖ್ಯಮಂತ್ರಿ, ಗಣಿ ಸಂಪತ್ತಿನ ಲೂಟಿಯನ್ನು ನಿಲ್ಲಿಸಿಯೇ ತೀರುತ್ತೇನೆಂದು ಶಪಥಗೈದ ಓರ್ವ ಮುಖ್ಯ ಮಂತ್ರಿಗೆ ಈಗ ಸದ್ದಿಲ್ಲದೇ ಶುರುವಾದ ಅಕ್ರಮ ಗಣಿಗಾರಿಕೆ ಗೊತ್ತಿಲ್ಲವೆಂದೇನಲ್ಲ. ಚೆನ್ನಾಗಿ ಗೊತ್ತಿದೆ ಮತ್ತು ಅದು ಮುಖ್ಯಮಂತ್ರಿಯ ಹರಕತ್ತಿಗೆಂದೇ ಶುರುವಾಗಿದೆ. ಆ ಕಾರಣಕ್ಕೇ ಗಣಿ ಲೂಟಿಯ ವಿರುದ್ಧ ಬಾಯಿ ಬಡಕೊಂಡಿದ್ದ ಮಂತ್ರಿ ಚೆನ್ನಿಗಪ್ಪನೂ ಉಸಿರೆತ್ತಿಲ್ಲ.

ಕಾನೂನಿನ ಪ್ರಕಾರ ಹತ್ತು ಚಕ್ರಗಳ ಲಾರಿಯೊಂದು 16 ಟನ್ನಿಗಿಂತಲೂ ಹೆಚ್ಚಿಗೆ ಸರಕು ಹೊರುವಂತಿಲ್ಲ. ಆರು ಚಕ್ರಗಳ ಲಾರಿಗೆ ಕಡ್ಡಾಯವಾಗಿ ಹತ್ತು ಟನ್ನಿಗಿಂತಲೂ ಹೆಚ್ಚಿಗೆ ಸರಕು ತುಂಬುವಂತಿಲ್ಲ. ನಿಯಮ ಮೀರಿ ಅಧಿಕ ಭಾರ ಹೊರಿಸಿದರೆ ಪ್ರತಿ ಟನ್ನಿಗೂ ತಲಾ ಒಂದು ಸಾವಿರ ರೂಪಾಯಿ ದಂಡ ತೆರಬೇಕು ಮತ್ತು ಅಧಿಕವಾಗಿ ಇನ್ನೆರಡು ಸಾವಿರ ರೂಪಾಯಿ ಶುಲ್ಕ ಕಟ್ಟಬೇಕು. ಇದು ಕಾನೂನು. ಅದಿರುಗಳ್ಳರ ಹರಕತ್ತೆಂದರೆ ಕಾನೂನಿನಂತೆ ಹತ್ತು ಟನ್ನೋ

ಇಂಥ ಏಜೆಂಟರಲ್ಲಿ ಅತ್ಯಂತ ಕುಖ್ಯಾತನೇ ಹೊಸಪೇಟೆಯ ಧನಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂಪೆನಿಯ ಮಾಲೀಕ ಅಶೋಕ್ ಬಾವಿಕಟ್ಟಿ. ಈತನಷ್ಟೇ ಅಲ್ಲದೇ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ, ಹೊಸಪೇಟೆಯ ಮಂಜುನಾಥ ಕ್ಯಾರಿಯರ್ಸ್ ಮಾಲೀಕ ಕೆ.ಎಸ್. ಮಣಿ, ಸಪ್ತಗಿರಿ ಟ್ರೇಡರ್ಸ್‌ ಆರ್ಮುಗಂ, ಲಾರಿ ಮಾಲೀಕರ ಮತ್ತೊಂದು ಬಣದ ಮುಖಂಡ ಚೆನ್ನಾರೆಡ್ಡಿ ಮುಂತಾದವರೂ ಟೋಕನ್ ಏಜೆಂಟರಾಗಿ ಕಾರ್ಯ ನಿರ್ವಹಿಸುತ್ತಾರೆ. ಲಾರಿಯೊಂದರ ಟೋಕನ್ನಿಗೆಂದು ಪಡೆದ ಹನ್ನೆರಡು ಸಾವಿರ ರೂಪಾಯಿಯಲ್ಲಿ ತನ್ನ ಕಮೀಷನ್ ಎರಡು ಸಾವಿರವನ್ನು ಮುರಿದುಕೊಂಡು ಮಿಕ್ಕ ಹತ್ತು ಸಾವಿರವನ್ನು ಓವರ್ ಲೋಡಿಂಗ್ ದಂಧೆಯ ಕಿಂಗ್‌ಪಿನ್‌ಗಳಾದ ವೆಂಕಟೇಶ್ ಮೆಳ್ಳಿಗೇರಿ ಮತ್ತು ಶ್ರೀನಿವಾಸಪ್ಪನವರಿಗೆ ತಲುಪಿಸಬೇಕು. ಅದನ್ನೂ ಹೊಸಪೇಟೆಯ ಆರ್‌ಟಿಓ ಕಚೇರಿಯ ಖತರ್‌ನಾಕ್ ಡ್ರೈವರ್ ಕೃಷ್ಣಮೂರ್ತಿಯ ಮೂಲಕವೇ ಕೊಡಬೇಕು!


ಟೋಕನ್ ದಂಧೆಯ ಕಿಂಗ್‌ಪಿನ್‌ಗಳಾದ ಮೆಳ್ಳಿಗೇರಿ ಮತ್ತು ಶ್ರೀನಿವಾಸಪ್ಪ ಎಂಬ ಆರ್‌ಟಿಓ ಇನ್ಸಪೆಕ್ಟರ್‌ಗಳು ತಮ್ಮ ಇಡೀ ದಂಧೆಗೆ ಇಂಥಾದ್ದೊಂದು ರಕ್ಷಾಕವಚ

ಮುಖ್ಯಮಂತ್ರಿಗೆ 100 ಕೋಟಿಯ ಕಪ್ಪ?

ನಿಂತ ಗಣಿಲೂಟಿಗೆ ಮತ್ತೆ ಜೀವ

ನಾಗರಾಜನ ಮಗ ಚೇತನ್. ಇಬ್ಬರೂ ಮಾಡುತ್ತಿದ್ದದ್ದು ಮೈನ್ಸ್ ಓವರ್‌ಲೋಡಿಂಗ್ ದಂಧೆ. ಅಂದರೆ ಬಳ್ಳಾರಿ, ಹೊಸಪೇಟೆ, ಸೊಂಡೂರು ಸುತ್ತಮುತ್ತಲ ಕಳ್ಳಗಣಿಗಳಿಂದ ಕದ್ದು ಸಾಗಿಸುವ ಕಬ್ಬಿಣದ ಅದಿರಿನ ಕಳ್ಳಪಾಲನ್ನು ವಸೂಲಿ ಮಾಡಿ ಅದನ್ನು ಸಾರಿಗೆ ಅಧಿಕಾರಿಗಳಿಗೆ ತಲುಪಿಸಿ ಅದರಲ್ಲಿ ಕಮೀಷನ್ ಗಿಟ್ಟಿಸುವ ಕಾಯಕ!

ಇದು ಒಬ್ಬನನ್ನು ಮತ್ತೊಬ್ಬ ಕೊಲ್ಲುವ ಮಟ್ಟಕ್ಕೆ ಹೋಗುತ್ತದೆಯೆಂದರೆ ಅದರ ಲಾಭ ಇನ್ನೆಷ್ಟಿರಬೇಡ? ಹಕೀಕತ್ತೆಂದರೆ ಜನಾರ್ದನ ರೆಡ್ಡಿಯ ಸೀಡಿಯಿಂದಾಗಿ ನಿಂತು ಹೋಗಿದ್ದ ಅಕ್ರಮ ಗಣಿಗಾರಿಕೆ ಮತ್ತೆ ಶುರುವಾಗಿದ್ದು ಯಾವತ್ತಿನಿಂದ? ಹೀಗೆ ಸದ್ದಿಲ್ಲದೇ ಶುರುವಾದ ಅಕ್ರಮ ಗಣಿಗಾರಿಕೆಯ ಬಗ್ಗೆ ವಿರೋಧಿ ಕಾಂಗ್ರೆಸ್ ಧುರೀಣರೇಕೆ ಸೊಲ್ಲೆತ್ತಿಲ್ಲ? ನಿಂತೇ ಹೋಗಿದ್ದ ಅದಿರು ಕಳ್ಳಸಾಗಾಣಿಕೆಯನ್ನು ಯಾವ ಕಾರಣಕ್ಕೆ, ಯಾರ ಆದೇಶದ ಮೇರೆಗೆ ಮತ್ತು ಏಕೆ ಪುನರಾರಂಭಿಸಲಾಗಿದೆ? ಈ ಬಗ್ಗೆ ಯಾವ ಪತ್ರಿಕೆಗಳೂ ಏಕೆ ಸುದ್ದಿ ಮಾಡುತ್ತಿಲ್ಲ?


ಅಶೋಕ್ ಬಾವೀಕಟ್ಟಿ

ಹೋಗಲಿ, ಈ ಕಾರಣಕ್ಕೇ ಭಯಾನಕ ಹತ್ಯೆಯೊಂದು ಸಂಭವಿಸಿದ ಮೇಲೂ ಸರ್ಕಾರ ಇಡೀ ಕೊಲೆ ಪ್ರಕರಣವನ್ನೇ ತಿಪ್ಪೆಸಾರಿಸಿ ದಿಕ್ಕುತಪ್ಪಿಸುತ್ತಿರುವುದೇಕೆ?

ಏಕೆಂದರೆ ಮತ್ತೆ ಅಕ್ರಮ ಗಣಿಗಾರಿಕೆ ಶುರುವಾಗಿರುವುದಕ್ಕೇ ಆರ್‌ಟಿಓ ಟೋಕನ್ ಏಜೆಂಟ್ ಅಶೋಕನ ಕೊಲೆಯಾಗಿದೆ!


ಕೊಲೆಯಾದ ಅಶೋಕ್ ಬಾವೀಕಟ್ಟಿ

ಒಂದು ಮೂಲದ ಪ್ರಕಾರ ಮತ್ತೆ ತಲೆ ಎತ್ತಿದ ಗಣಿ ಲೂಟಿಯ ಹಿಂದೆ ನೂರು ಕೋಟಿ ರೂಪಾಯಿಗಳ ಕರಾಮತ್ತಿದೆ!

ಮುಖ್ಯಮಂತ್ರಿ ಕುಮಾರಸ್ವಾಮಿಯ ಪರಮಾಪ್ತ ಕೂಡ್ಲಿಗಿಯ ಶಾಸಕ ಅನಿಲ್‌ಲಾಡ್ ಇದರ ಕಾರಣಪುರುಷನಾದರೆ, ಆತನ ಹಿಂದೆ ಗಣಿದೈತ್ಯ ಬಲ್ಡೋಟಾ ಮತ್ತು ಎಸ್.ವಿ. ಮಿನರಲ್ಸ್ ಮಾಲೀಕ ಆನಂದ್‌ಸಿಂಗ್‌ನಂಥ ಅದಿರುಕಳ್ಳರ ಹಿಂದೇ ಇದೆ!

ಸದ್ಯ ಆಯ್ದ ಕೆಲವೇ ಗಣಿಕಳ್ಳರಿಗಷ್ಟೇ ಮೈನ್ಸ್ ತೆಗೆಯುವ ಅವಕಾಶ ಕಲ್ಪಿಸಿರುವುದು, ಯಾವ ಗಣಿ ಧಣಿ ಕಪ್ಪ ಕೊಡಲಿಲ್ಲವೋ ಆತನಿಗೆ ಅದಿರು ತೆಗೆಯುವ ಅವಕಾಶವಿಲ್ಲದಿರುವುದು ಮತ್ತು ಈ ಕಾರಣಕ್ಕೇ ನಿಂತುಹೋಗಿದ್ದ ಮೈನ್ಸ್ ಓವರ್‌ಲೋಡಿಂಗ್ ದಂಧೆ ಮತ್ತೆ ಶುರುವಾಗಿ ಅದರ ಕಳ್ಳಪಾಲಿನ ಹಂಚಿಕೆಯಲ್ಲಿ ಆರ್‌ಟಿಓ ಏಜೆಂಟ್ ಅಶೋಕ್ ಕೊಲೆಯಾಗಿರುವುದು ಎಂಬುದು ಎಲ್ಲರಿಗೂ ಗೊತ್ತಿದೆಯಾದರೂ ಪೊಲೀಸರು ಮಾತ್ರ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಡಕಾಡುತ್ತಿದ್ದಾರೆ.

ಕಳೆದ ಆರು ತಿಂಗಳಿಂದ ನಿಂತಿದ್ದ ಕಳ್ಳ ಗಣಿಗಾರಿಕೆ ಮತ್ತೆ ಶುರುವಾಗಿದ್ದು ಇದೇ ಫೆಬ್ರವರಿ ಒಂದರಿಂದ. ಅದರ ಜೊತೆಗೇ ಹುಟ್ಟಿಕೊಂಡಿದ್ದು ಓವರ್‌ಲೋಡಿಂಗ್ ದಂಧೆ. ಅಕ್ರಮ ಗಣಿಗಾರಿಕೆ ಮತ್ತು ಓವರ್‌ಲೋಡಿಂಗ್ ದಂಧೆಗಳೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದಿದ್ದರೇನೇ ಮತ್ತೊಂದಕ್ಕೆ ಜೀವ.

ಈ ಓವರ್‌ಲೋಡಿಂಗ್ ದಂಧೆಯನ್ನು ಆ ಕಾಲದಿಂದಲೂ ನಿಭಾಯಿಸುತ್ತಿರುವುದು ಖದೀಮ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳೆ. ಈ ಪೈಕಿ ಕೊಪ್ಪಳದ ಆರ್‌ಟಿಓ ಇನ್ಸ್‌ಪೆಕ್ಟರ್ ವೆಂಕಟೇಶ್ ಮೆಳ್ಳಿಗೇರಿ ಇದರ ಮೂಲಪುರುಷನಾದರೆ, ಆತನಿಗೆ ಬಲಗೈ ಬಂಟನಂತಿರುವ ಶ್ರೀನಿವಾಸಪ್ಪ ಸದ್ಯ ಹೊಸಪೇಟೆ ಆರ್‌ಟಿಓ ಕಚೇರಿಯಲ್ಲಿ ಮೋಟಾರು ವಾಹನ ಪರೀಕ್ಷಕ. ಇಡೀ ಅಕ್ರಮ ಗಣಿಗಾರಿಕೆಯ ಹೆಬ್ಬಾಗಿಲಿನಂತಿರುವ ಈ ಎರಡು ಆರ್‌ಟಿಓ ಕಚೇರಿಗಳನ್ನೇ ಕೇಂದ್ರವಾಗಿಟ್ಟುಕೊಂಡು ನಡೆಯುವುದು ಓವರ್‌ಲೋಡಿಂಗ್ ದಂಧೆ.

ಹದಿನಾರು ಟನ್ನೋ ತುಂಬಿಸಿಕೊಂಡರೆ ಲಾರಿ ಬಾಡಿಗೆಯೂ ಗಿಟ್ಟದು. ಒಂದಕ್ಕೆ ಬದಲಾಗಿ ಮೂರು ಟ್ರಿಪ್ಪು ಸಾಗಿಸಬೇಕು. ಅದಕ್ಕೆಂದೇ ಆಯಾ ಆರ್‌ಟಿಓ ಕಚೇರಿಗಳ ಇನ್ಸ್‌ಪೆಕ್ಟರುಗಳಿಗೆ ಲಾರಿಯೊಂದಕ್ಕೆ ಇಂತಿಷ್ಟೆಂದು ಲಂಚ ತಿನ್ನಿಸುವ ವ್ಯವಸ್ಥೆಯಿದೆ. ಅದೇ ಟೋಕನ್ ಸಿಸ್ಟಂ.

ಅಂದರೆ ತಿಂಗಳಿಗೆ ಒಮ್ಮೆ ಟೋಕನ್ ಪಡೆದುಕೊಂಡರೆ ಸಾಕು. ಆ ತಿಂಗಳು ಪೂರ್ತಿ ಆತ ಲಾರಿಯಲ್ಲಿ ಅದೆಷ್ಟೇ ಓವರ್‌ಲೋಡ್ ಮಾಡಿ ಅದಿರು ಸಾಗಿಸಿದರೂ ರಾಜ್ಯದ ಯಾವುದೇ ಆರ್‌ಟಿಓ ಅಧಿಕಾರಿಗಳು ಆ ಲಾರಿಯನ್ನು ಮುಟ್ಟುವುದಿಲ್ಲ. ಟೋಕನ್ ತೋರಿಸಿದ ತಕ್ಷಣವೇ ಸೆಲ್ಯೂಟ್ ಹೊಡೆದು ಕಳಿಸುತ್ತಾರೆ. ಇಂಥ ಒಂದು ಟೋಕನ್ನಿನ ಬೆಲೆ ಮಂಗಳೂರಿಗಾದರೆ ತಿಂಗಳಿಗೆ ಹನ್ನೆರಡು ಸಾವಿರ, ಕಾರವಾರ-ಗೋವಾ ಬಂದರುಗಳಿಗೆ ತಿಂಗಳಿಗೆ ಆರೂವರೆ ಸಾವಿರ.


ವೆಂಕಟೇಶ್

ಈ ಥರದ ಟೋಕನ್ನುಗಳನ್ನು ಯಾವುದೇ ಆರ್‌ಟಿಓ ಅಧಿಕಾರಿ ತನ್ನ ಕೈಯಾರೇ ಕೊಡುವುದಿಲ್ಲ. ಬದಲಾಗಿ ಅದಕ್ಕೆಂದೇ ಏಜೆಂಟರನ್ನು ನೇಮಿಸಿಕೊಳ್ಳುತ್ತಾನೆ. ಮೊದಮೊದಲು ಹೆದ್ದಾರಿಯ ಆಯಾ ಡಾಬಾಗಳಲ್ಲಿ ಈ ಥರದ ಟೋಕನ್ನು ವಿತರಣೆಯಾಗುತ್ತಿತ್ತು. ಕೊಪ್ಪಳದ ಎಸ್ಪಿಯಾಗಿದ್ದ ರವಿ ಮತ್ತಿತರ ಪೊಲೀಸರು ಈ ಥರದ ಡಾಬಾ ಏಜೆಂಟರ ಮೇಲೆ ದಾಳಿ ಶುರು ಹಚ್ಚಿಕೊಂಡಿದ್ದೇ ಆರ್‌ಟಿಓ ಅಧಿಕಾರಿಗಳೇ ನೇರವಾಗಿ ಅದಿರುಗಳ್ಳರ ಜೊತೆ ಡೀಲು ಕುದುರಿಸಿದರು. ಅದಕ್ಕೆ ಟ್ರಾನ್ಸ್‌ಪೋರ್ಟ್ ಕಂಪೆನಿಗಳೂ ಕೈಜೋಡಿಸಿದವು.


ಅನಿಲ್ ಲಾಡ್

ಯಾರೇ ಅದಿರುಗಳ್ಳನೊಬ್ಬ ತಿಂಗಳಿಗೊಂದಾವರ್ತಿ ಇಂತಿಷ್ಟೆಂದು ದುಡ್ಡು ಕೊಟ್ಟು ಮೊದಲೇ ಟೋಕನ್ ಖರೀದಿಸುವುದು ಶುರುವಾಯಿತು. ಅವರಿಗೆ ಟೋಕನ್ ಮಾರಿ ಬಂದ ದುಡ್ಡಲ್ಲಿ ಇಂತಿಷ್ಟೆಂದು ಕಮಿಷನ್ ಮುರಿದುಕೊಂಡು ಅಸಲನ್ನು ಮೆಳ್ಳಿಗೇರಿ ಮತ್ತು ಶ್ರೀನಿವಾಸಪ್ಪನಂಥ ಇನ್ಸ್‌ಪೆಕ್ಟರ್‌ಗಳ ಕೈಗೆ ಮುಟ್ಟಿಸುವ ಏಜೆಂಟರು ಹುಟ್ಟಿಕೊಂಡರು.

ರಾ. ಸೋಮನಾಥ್

ಸೃಷ್ಟಿಸಿಕೊಂಡೇ ಕಾರಸ್ಥಾನಕ್ಕಿಳಿದಿದ್ದಾರೆ. ಇಲ್ಲಿಗೆ ಬರಲೆಂದು ಸಾರಿಗೆ ಮಂತ್ರಿಗೆ ತಲಾ ಒಂದೊಂದು ಕೋಟಿ ಕೊಟ್ಟೇ ಬಂದಿದ್ದಾರೆ. ಹೊಸಪೇಟೆ-ಮಂಗಳೂರು ಮತ್ತು ಕಾರವಾರ ಮಾರ್ಗದ ಎಲ್ಲಾ ಆರ್‌ಟಿಓ ಕಚೇರಿಗಳಿಗೂ ಇವರಿಗೆ ಬೇಕಾದವರನ್ನೇ ಮಂತ್ರಿ ಚೆಲುವರಾಯಸ್ವಾಮಿ ಹಾಕಿಕೊಡುತ್ತಾರೆ. ಪ್ರತಿ ತಿಂಗಳ ಐದನೇ ತಾರೀಖಿಗೆ ಟೋಕನ್ ಪಡಕೊಂಡ ಇಂತಿಷ್ಟು ಥದ್ದೇ ಲಾರಿಗಳ ನಂಬರಿನ ಪಟ್ಟಿ ಮಾಡಿ ಅದನ್ನು ಆಯಾ ಆರ್‌ಟಿಓ ಕಚೇರಿಗಳಿಗೆ ತಲುಪಿಸುತ್ತಾರೆ.

ಈ ರೀತಿ ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾಗದ ಅಕ್ರಮ ಗಣಿಗಾರಿಕೆಯ ಓವರ್‌ಲೋಡಿಂಗ್ ದಂಧೆಯೊಂದರಿಂದಲೇ ತಿಂಗಳೊಂದಕ್ಕೆ ಐದರಿಂದ ಆರು ಕೋಟಿ ರೂಪಾಯಿಗಳ ಆಮದನಿಯಿದೆ. ಆಯಾ ಆರ್‌ಟಿಓ ಅಧಿಕಾರಿಗಳು, ಸಾರಿಗೆ ಮಂತ್ರಿ, ಮುಖ್ಯಮಂತ್ರಿ ಕೆಲ ಶಾಸಕರು ಎಲ್ಲರಿಗೂ ನಿಗದಿತ ಪಾಲು ಸಂದಾಯವಾಗಿ ಕೊನೆಗೆ ಮೆಳ್ಳಿಗೇರಿಯೊಬ್ಬನಿಗೆ ಐವತ್ತು ಲಕ್ಷ ರೂಪಾಯಿ ಗಿಟ್ಟುತ್ತವೆ.

ಹತ್ತು ಟನ್ ಸಾಮರ್ಥ್ಯದ ಲಾರಿಯೊಂದು 25 ಟನ್ ಹೊತ್ತು ರಸ್ತೆಗಿಳಿದರೆ, ಅದೇ 6 ಟನ್ ಸಾಮರ್ಥ್ಯದ ಲಾರಿಗೆ 4[illegible]ರಿಂದ 50 ಟನ್ ಅದಿರು ತುಂಬಿ ಕಳಿಸುತ್ತಾರೆ. ಒಂದೆಡೆ ರಸ್ತೆಗಳು ಲಡ್ಡೆದ್ದರೆ ಮತ್ತೊಂದೆಡೆ ರಾಜ್ಯ ಬೊಕ್ಕಸಕ್ಕೆ ತಿಂಗಳಾಪ್ರತಿ ಬರಬೇಕಿದ್ದ ನಲವತ್ತೈದು ಕೋಟಿ ರೂಪಾಯಿ ದುಡ್ಡು ಸೋರಿ ಹೋಗುತ್ತದೆ.

ಅತ್ಯಂತ ಇಂಥ ಹಗಲು ದರೋಡೆಯ ಏಜೆಂಟರ ಪೈಕಿ ಕುಖ್ಯಾತಿಯಿದ್ದದ್ದು ಹೊಸಪೇಟೆಯ ಅಶೋಕ್ ಬಾವಿಕಟ್ಟಿ. ಓವರ್‌ಲೋಡಿಂಗ್ ದಂಧೆಯ ಕಟ್ಟಳೆಯಂತೆ ಪ್ರತಿ ತಿಂಗಳ ಟೋಕನ್ನಿನ ದುಡ್ಡನ್ನು ಈತ ಆರ್.ಟಿ.ಓ. ಕಚೇರಿಯ ಡ್ರೈವರ್ ಕೃಷ್ಣಮೂರ್ತಿಗೆ ತಲುಪಿಸಬೇಕು.

ಜನಾರ್ದನ್ ರೆಡ್ಡಿ ಸೀಡಿಯಿಂದಾಗಿ ನಿಂತೇಹೋಗಿದ್ದ ಗಣಿ ಲೂಟಿ ಏಕಾಏಕಿ ಫೆಬ್ರವರಿ ಒಂದನೇ ತಾರೀಖಿನಿಂದ ಮತ್ತೆ ಶುರುವಾಗಿದ್ದೇಕೆ?

ಈ ಪ್ರಶ್ನೆಗೆ ಉತ್ತರವಿದ್ದದ್ದು ಇತ್ತೀಚೆಗೆ ಪುಣೆಯಲ್ಲಿ ನಡೆದ ಜೆಡಿಎಸ್ ಶಾಸಕರ ರಹಸ್ಯ ಸಭೆಯಲ್ಲಿ. ಮುನಿಸಿಕೊಂಡಿದ್ದ ಸೊಂಡೂರು ಶಾಸಕ ಸಂತೋಷ್‌ಲಾಡ್ ಮತ್ತು ಆತನ ತಮ್ಮ ಕೂಡ್ಲಿಗಿ ಬಿಜೆಪಿ ಶಾಸಕ ಅನಿಲ್‌ಲಾಡ್ ಬ್ರದರ್‌ಗಳಿಗಾಗಿ ಬಳ್ಳಾರಿಯ ಗಣಿ ಸಂಪತ್ತನ್ನೇ ಧಾರೆಯೆರೆದರು ಕುಮಾರಣ್ಣ. ಅದು ಪುಕ್ಕಟೆಯಾಗೇನಲ್ಲ. ಎಲ್ಲಾ ಗಣಿ ಕುಳಗಳನ್ನೂ ಕರೆದು ಮುನ್ನೂರು ಕೋಟಿ ರೂಪಾಯಿಗಳಷ್ಟು ಮೊತ್ತದ ಪಾರ್ಟಿ ಫಂಡ್ ಸಂಗ್ರಹಿಸಿದರಷ್ಟೇ ಗಣಿಗಾರಿಕೆಯ ಪರ್ಮಿಷನ್ ಸಾಧ್ಯ ಎಂದೂ ಹೇಳಲಾಗಿತ್ತು.

ಅಲ್ಲಿಗೆ ಒಬ್ಬೊಬ್ಬ ಗಣಿ ಧಣಿಯೂ ಕಮ್ಮಿಯೆಂದರೂ ಒಂದರಿಂದ ಒಂದೂವರೆ ಕೋಟಿಯಷ್ಟು ಕಕ್ಕಲೇಬೇಕಿತ್ತು. ಲಕ್ಷಗಳ ಲೆಕ್ಕದಲ್ಲಾದರೆ ಕೊಡಬಹುದು. ಕೋಟಿಯಷ್ಟನ್ನು ಎಲ್ಲಿಂದ ಹೊಂಚುವುದು! ಈ ಹೊತ್ತಿಗಾಗಲೇ ಯಾವ ಗಳಿಗೆಯಲ್ಲಿ ಸರ್ಕಾರ ಬೀಳುತ್ತೋ ಎಂದು ದುಡ್ಡು ಬಿಚ್ಚುವುದಕ್ಕೇ ಹಿಂದೇಟು ಹೊಡೆದರು.

ಮತ್ತೆ ನೂರು ಕೋಟಿಯ ಗಣಿಕಪ್ಪ!


ಹಾಗಂಥ ಮುಖ್ಯಮಂತ್ರಿಯ ಬಂಟ ಅನಿಲ್‌ಲಾಡ್ ಮಾತ್ರ ಸುಮ್ಮನೇ ಕೂರಲಿಲ್ಲ. ಹೇಗಾದರೂ ಮಾಡಿ ಮುಖ್ಯಮಂತ್ರಿ ತನ್ನ ಮೇಲಿಟ್ಟ ನಂಬಿಕೆ ಉಳಿಸಿಕೊಳ್ಳಬೇಕಲ್ಲ; ಶುರುವಿನಲ್ಲಿ ಒಂದಷ್ಟು ಕೋಟಿಯನ್ನು ತಮ್ಮ ಕೈಯಿಂದಲೇ ಕೊಟ್ಟರು. ಸಹೋದರ ಸಂತೋಷ್ ಲಾಡ್ ಕೂಡ ಕೆಲವು ಕೋಟಿಯ ಬಂಡವಾಳ ಹಾಕಿದ. ಅದಕ್ಕೆ ತಕ್ಕಂತೆ ವ್ಯಾಸನಕೆರೆಯಲ್ಲಿ ದೊಡ್ಡ ಗುಂಡಿಯನ್ನೇ ತೋಡಿದ್ದ ಎಂಎಸ್‌ಪಿಎಲ್‌ನ ರಾಹುಲ್ ಬಲ್ಡೋಟ ಎಂಬ ಖದೀಮನೂ ಜೊತೆಯಾದ.


ಅದಿರುಗಳ್ಳರಲ್ಲೇ ಎರಡು ಗುಂಪಾಯಿತು. ಒಂದು ಜನಾರ್ದನ್ ರೆಡ್ಡಿ ಗುಂಪಾದರೆ ಮತ್ತೊಂದು ಅನಿಲ್‌ಲಾಡ್ ಹಿಂಡು. ಲಾಡ್ ಗ್ಯಾಂಗ್ ಸೇರಿದ ಮತ್ತೊಬ್ಬ ಗಣಿ ಧಣಿ ಎಸ್.ಪಿ. ಮಿನರಲ್ಸ್ ಮಾಲೀಕ ಆನಂದ್ ಸಿಂಗ್ ಒಬ್ಬನೇ. ತನ್ನ ಬಾಬತ್ತೆಂದು ಐದು ಕೋಟಿ ಕೊಟ್ಟಿದ್ದಾನಂತೆ. ಇವರೆಲ್ಲರೂ ಸೇರಿ ನೂರು ಕೋಟಿ ಸಂಗ್ರಹಿಸಿ ಅನಿಲ್‌ಲಾಡ್ ಮೂಲಕ ಮುಖ್ಯಮಂತ್ರಿಗೆ ಮುಟ್ಟಿಸಿದ್ದರಿಂದಲೇ ಫೆಬ್ರವರಿ ಒಂದರಿಂದ ಮತ್ತೆ ಗಣಿ ಲೂಟಿ ಶುರುವಾಗಿದೆ. ಸದ್ಯ ಯಾರ್‍ಯಾರು ಕಪ್ಪ ಸಲ್ಲಿಸಿದ್ದಾರೋ ಅವರ ಲಾರಿಗಳನ್ನಷ್ಟೇ ಬಿಡಲಾಗುತ್ತಿದೆ. ಮಿಕ್ಕಂತೆ ಜನಾರ್ದನ್ ರೆಡ್ಡಿ ಸಿಂಡಿಕೇಟಿನ ಯಾರಿಗೂ ಮೈನಿಂಗ್ ಅವಕಾಶವಿಲ್ಲ.

ಈ ಪೈಕಿ ಎಂ.ಎಸ್.ಪಿ.ಎಲ್. ಖದೀಮ ರಾಹುಲ್ ಬಲ್ಡೋಟ ಒಬ್ಬನೇ ಅದೆಂಥಾ ಬಿರುಸಿನಿಂದ ಅದಿರು ಸಾಗಿಸುತ್ತಿದ್ದಾನೆಂದರೆ, ಒಂದಲ್ಲ ಮೂರು ಕಡೆ ಬಲ್ಡೋಟನ ಗ್ಯಾಂಗು ಅರಣ್ಯ ಭೂಮಿಯಲ್ಲಿ ಅದಿರು ದೋಚುತ್ತಿದ್ದರೂ ಈ ಬಗ್ಗೆ ಯಾರೂ ಪ್ರಶ್ನಿಸುತ್ತಿಲ್ಲ. ಏಕೆ ಗೊತ್ತ?

ಬಲ್ಡೋಟ ಬ್ರದರ್‌ಗಳಿಗೆ ಇದು ಮುಖ್ಯಮಂತ್ರಿ ಕುಮಾರಣ್ಣನೇ ಕಲ್ಪಿಸಿದ ವಿಶೇಷ ಪ್ಯಾಕೇಜು. ಹಕೀಕತ್ತೇನೆಂದರೆ ಗಣಿ ಲಂಚಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ ಸಹೋದರ ಡಾ. ರಮೇಶ್ ನೋಟಿನ ಕಂತೆ ಎಣಿಸಿಕೊಳ್ಳುತ್ತಿರುವ ದೃಶ್ಯಗಳುಳ್ಳ ಸೀಡಿ ಇದ್ದುದ್ದೇ ರಾಹುಲ್ ಬಲ್ಡೋಟನ ಬಳಿ. ಚೆನ್ನಿಗಪ್ಪ ದುಡ್ಡು ಬಾಚಿಕೊಂಡ ದೃಶ್ಯವನ್ನು ಆತನ ರಹಸ್ಯ ಕ್ಯಾಮೆರಾಗಳೇ ಚಿತ್ರೀಕರಿಸಿದ್ದವು. ಹಾಗೇ ಚಿತ್ರಿಸಿಕೊಂಡಿದ್ದನ್ನು ಬಲ್ಡೋಟ ಜನಾರ್ದನ ರೆಡ್ಡಿಗೆ ಕೊಡಬೇಕಿತ್ತು. ಕೊಟ್ಟಿದ್ದರೆ ರೆಡ್ಡಿ ಏನೇನು ಅನಾಹುತ ಮಾಡುತ್ತಿದ್ದನೋ.

ಆದರೆ ಬಲ್ಡೋಟ ಅದನ್ನು ರೆಡ್ಡಿಗೆ ಕೊಡದೇ ಮಲೇಷಿಯಾಕ್ಕೆ ಹೋಗಿ ಕೂತುಬಿಟ್ಟ. ಆನಂತರ ಕುಮಾರಣ್ಣನೂ ಇನ್ನೇನೋ ನೆಪದಲ್ಲಿ ಮಲೇಷಿಯಾಕ್ಕೆ ಹೋಗಿ ಬಂದರು. ಅಲ್ಲಿಗೆ ರೆಡ್ಡಿ ಸೀಡಿಯ ಕತೆಯೇ ಮುಗಿದುಹೋಗಿತ್ತು. ರೆಡ್ಡಿಗೆ ತಲುಪಿಸಬೇಕಿದ್ದ ಗಣಿಲಂಚದ ಸೀಡಿಯನ್ನು ನುಂಗಿ ಹಾಕಿದ್ದರಿಂದಲೇ ಈಗ ಬಲ್ಡೋಟರ ಗಣಿ ಲೂಟಿಗೆ ಸರ್ಕಾರ ರತ್ನಗಂಬಳಿ ಹಾಸಿದೆ. ಈಗ ಶುರುವಾಗಿರುವ ಓವರ್‌ಲೋಡಿಂಗ್ ದಂಧೆಯ ಭರಾಟೆ ಹೇಗಿದೆಯೆಂದರೆ ಗಣಿ ಖದೀಮರೆಲ್ಲ ಸೇರಿ ಸಲ್ಲಿಸಿದ ನೂರು ಕೋಟಿಯ ಕಪ್ಪ ಅವರ ಪಾಲಿಗೆ ಕೇವಲ ಒಂದು ತಿಂಗಳ ಲೆಕ್ಕ.





...ಮು ಕೂಡ ಕೋಟಿ ಲೆಕ್ಕದ ಮೊತ್ತವೆ. ಇಷ್ಟೊಂದು ಭಾರಿ ಮೊತ್ತದ ನಿಧಿಯನ್ನು ಕಾಯುವುದಕ್ಕೆಂದೇ ಅಶೋಕ್ ಜೊತೆ ತನ್ನ ಅಣ್ಣನ ಮಗ ಚೇತನ್ ಉರ್ಫ್ ಸುನೀಲ್ ಎಂಬಾತನನ್ನು ಕೃಷ್ಣಮೂರ್ತಿ ನೇಮಿಸಿದ್ದ.

ಡ್ರೈವರ್ ಕೃಷ್ಣಮೂರ್ತಿಯ ಅಣ್ಣ ನಾಗರಾಜ್ ಸದ್ಯ ಸಾರಿಗೆ ಇಲಾಖೆಯ ಜಂಟಿ ಕಮೀಷನರ್ ಅಯ್ಯಪ್ಪನ ಕಾರಿಗೆ ಡ್ರೈವರ್. ಈಗ ಅಶೋಕ್‌ನನ್ನು ಕೊಂದ ಚೇತನ್ ಇದೇ ಆರ್‌ಟಿಓ ಡ್ರೈವರ್ ನಾಗರಾಜನ ಮಗ ಮತ್ತು ಟೋಕನ್ ದಂಧೆಯ ಆಧಾರಸ್ತಂಭಗಳಲ್ಲೊಬ್ಬನಾದ ಡ್ರೈವರ್ ಕೃಷ್ಣಮೂರ್ತಿಗೂ ಅಣ್ಣನ ಮಗ!

ಕೆಲ ಡಾಬಾಗಳಲ್ಲಿ, ಟ್ರಾನ್ಸ್‌ಪೋರ್ಟ್ ಕಂಪೆನಿಗಳಲ್ಲಿ ಟೋಕನ್ ಮಾರಿದ ಅಶೋಕ್ ಹೀಗೆ ಸಂಗ್ರಹಣೆಗೊಂಡ ಮೊತ್ತದ ದೊಡ್ಡ ಪಾಲನ್ನು ನುಂಗಿಹಾಕಿದ್ದರಿಂದಲೇ ಕೊಲೆಯಾದ ಎಂಬುದು ಒಂದು ವದಂತಿಯಾದರೆ ಮಾರಿದ ಕಮೀಷನ್ನಿನಲ್ಲಿ ತಮಗೆ ಪಾಲು ಕೊಟ್ಟಿಲ್ಲವೆಂದು ಆತನ ಜೊತೆಗಿದ್ದವರೇ ಕೊಂದಿದ್ದಾರೆಂಬುದು ಪೊಲೀಸರ ವಾದ. ಟೋಕನ್ ಒಂದಕ್ಕೆ ತನಗೆ ಬರುತ್ತಿದ್ದ ಹತ್ತು ಸಾವಿರ ರೂ. ಕಮೀಷನ್ ಅನ್ನು ಅಶೋಕನೇ ನುಂಗಲು ಆರಂಭಿಸಿದ್ದರಿಂದ ವಿಧಿಯಿಲ್ಲದೇ ಆತನನ್ನು ತಾನು ಕೊಂದು ಬಿಟ್ಟೆ ಎಂದು ಚೇತನ್ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾನೆ. ಇದು ಎಂಥಾ ಹಾಸ್ಯಾಸ್ಪದವೆಂದರೆ, ಕಮೀಷನ್ ಕೊಡಲಿಲ್ಲ ಎಂಬ ಒಂದೇ ಕಾರಣಕ್ಕೆ ಚೇತನ್ ಕೊಲ್ಲುವ ಅಗತ್ಯವಿರಲೇ ಇಲ್ಲ. ಅಷ್ಟಕ್ಕೂ ಅಶೋಕ್‌ನನ್ನು ನೇಮಿಸಿದ್ದು ಆತನ ಚಿಕ್ಕಪ್ಪ ಕೃಷ್ಣಮೂರ್ತಿ ತಾನೆ? ತನ್ನ ಚಿಕ್ಕಪ್ಪನಿಗೆ ಹೇಳಿ ಇಡೀ ಏಜೆಂಟ್‌ಗಿರಿಯನ್ನೇ ಚೇತನ್ ದಕ್ಕಿಸಿಕೊಳ್ಳಬಹುದಿತ್ತು, ಅಥವಾ ಟೋಕನ್ ಜಾಲದಿಂದ ಅಶೋಕ್‌ನನ್ನೇ ಹೊರಹಾಕಿಸಬಹುದಿತ್ತು.

ತಿಂಗಳಿಗೆ ಬರುತ್ತಿದ್ದ ಹತ್ತೋ ಹದಿನೈದೋ ಸಾವಿರಕ್ಕೆ ಚೇತನ್ ಅಶೋಕ್‌ನನ್ನು ಕೊಲ್ಲುವ ಅಗತ್ಯವೇ ಇರಲಿಲ್ಲ. ಇದು ನಂಬಲರ್ಹವೂ ಅಲ್ಲ, ಕಾರಣ ಇದಕ್ಕಿಂತ ದೊಡ್ಡದಿರಲೇ ಬೇಕು.

ಫೆಬ್ರವರಿ 1 ರಿಂದ ಶುರುವಾದ ಗಣಿ ಲೂಟಿ ಮತ್ತು ಓವರ್‌ಲೋಡಿಂಗ್ ದಂಧೆಗೆ ಸಂಬಂಧಪಟ್ಟಂತೆ ಅಶೋಕ್ ಒಬ್ಬನೇ ಸರಿಸುಮಾರು ಮೂರು ಕೋಟಿ ಮೊತ್ತದ ಟೋಕನ್ನುಗಳನ್ನು ಮಾರಿದ್ದ. ಅದನ್ನಾತ ಡ್ರೈವರ್ ಕೃಷ್ಣಮೂರ್ತಿಯ ಮೂಲಕ ಕಿಂಗ್‌ಪಿನ್ನುಗಳಾದ ವೆಂಕಟೇಶ್ ಮೆಳ್ಳಿಗೇರಿ ಮತ್ತು ಶ್ರೀನಿವಾಸಪ್ಪರಿಗೆ ಮುಟ್ಟಿಸಬೇಕಿತ್ತು. ಹಾಗೇ ಮಾಡದೇ ಇಡೀ ಮೂರು ಕೋಟಿಯ ಮೊತ್ತವನ್ನು ಬಿಡಲಾಗುತ್ತಾ? ಬಹುಶಃ 'ತೆಗೆದುಬಿಡಿ' ಎಂದು ಮೆಳ್ಳಿಗೇರಿ ಆದೇಶ ಕೊಟ್ಟಿದ್ದಾನೆ. ಅದನ್ನು ಡ್ರೈವರ್ ಕೃಷ್ಣಮೂರ್ತಿ ತನ್ನ ಅಣ್ಣನ ಮಗ ಚೇತನ್‌ಗೆ ಹೇಳಿ ಕಾರ್ಯ ಸಾಧಿಸಿದ್ದಾನೆ.

ಈ ಚೇತನ್ ಉರ್ಫ್ ಸುನೀಲ್ ಮೂಲತಃ ಬೆಂಗಳೂರಿನ ಯಶವಂತಪುರದವನು. ಈ ಹಿಂದೆ ರೌಡಿ ಶಿವಮೊಗ್ಗ ನಾಗನ ಜೊತೆ ಓಡಾಡಿಕೊಂಡಿದ್ದ. 2007 ರ ಫೆಬ್ರವರಿ 2 ರ ರಾತ್ರಿ ಬೊಲೆರೋ ಜೀಪೊಂದರಲ್ಲಿ ಅಶೋಕ್‌ನ ಟೋಕನ್ ದಂಧೆಯ ಪಾಲುದಾರನಾದ ಲಕ್ಕವಳ್ಳಿಯ ಮಂಜನ ತಮ್ಮ ಶಿವಪ್ರಸಾದ್‌ನನ್ನು ಜೊತೆ ಹಾಕಿಕೊಂಡಿದ್ದಾನೆ. ಜೊತೆಗೆ ಬೆಂಗಳೂರಿನ ಸುಂದರರಾಜನ್ ಎಂಬಾತನನ್ನೂ ಕರಕೊಂಡು ಅಶೋಕನ ಮನೆಯಿರುವ ಹೊಸಪೇಟೆಯ ಅಮರಾವತಿ ಏರಿಯಾಕ್ಕೆ ಬಂದಿದ್ದಾನೆ. ಅಶೋಕ್‌ನನ್ನು ಆತನ ಕಚೇರಿಯಿಂದಲೇ ಅಟ್ಟಿಸಿಕೊಂಡು ಹೋಗಿ ಮನಸೋಇಚ್ಛೆ ಇರಿದಿದ್ದಾನೆ. ಅಶೋಕ್‌ನ ಪತ್ನಿ ಸರ್ವಮಂಗಳಾ ಆತನನ್ನು ಸರ್ಕಾರಿ ಆಸ್ಪತ್ರೆಗೆ ಒಯ್ಯುವಷ್ಟರಲ್ಲಿ ಅಶೋಕ್ ಹೆಣವಾಗಿದ್ದ!

ವಾಸ್ತವವೆಂದರೆ ಹೊಸಪೇಟೆ ಪೊಲೀಸ್ ಇನ್ಸ್‌ಪೆಕ್ಟರ್ ಕಾಜಾಸ್ ಸಾಹೇಬರಿಗಾಗಲಿ, ಡಿವೈಎಸ್‌ಪಿ ಸುದ್ದಿಯವರಿಗಾಗಲಿ ಇಲ್ಲಿ ಸತ್ಯ ಬೇಕಿಲ್ಲ, ಏಕೆಂದರೆ ಅದು ಇಡೀ ಓವರ್‌ಲೋಡಿಂಗ್ ದಂಧೆಯ ಮರ್ಮಕ್ಕೇ ಕೈಹಾಕಿದಂತೆ. ತನ್ಮೂಲಕ ಅಕ್ರಮ ಗಣಿಗಾರಿಕೆಯೂ ಬಯಲಾಗುತ್ತದೆ.

ಇಡೀ ಓವರ್‌ಲೋಡಿಂಗ್ ದಂಧೆಯ ಮೂಲ ಪುರುಷರಾದ ವೆಂಕಟೇಶ್ ಮೆಳ್ಳಿಗೇರಿ ಮತ್ತು ಶ್ರೀನಿವಾಸಪ್ಪ ಎನ್ನುವ ಇಬ್ಬರು ಆರ್‌ಟಿಓ ಇನ್ಸ್‌ಪೆಕ್ಟರ್‌ಗಳೇ ಇಂಥದೊಂದು ಹತ್ಯೆಯ ಕಾರಣಕರ್ತರೆಂಬುದನ್ನು ಹೇಳುವ ಧೈರ್ಯ ತಾನೇ [illegible]? ಕೇಳುವವರಾದರೂ ಯಾರು?

ಸಾಕ್ಷಾತ್ ಸಾರಿಗೆ ಮಂತ್ರಿ ಚಲುವನೇ ಅವರ [illegible], ಮುಖ್ಯಮಂತ್ರಿಯೇ ಅಕ್ರಮ ಗಣಿಗಾರಿಕೆಗೆ ಮೂಲ ಪುರುಷನಾಗಿರುವಾಗ ಕೊಲೆಯಾದ ಅಶೋಕ್‌ನ [illegible] ಯಾವ ಲೆಕ್ಕ?



ಪುತ್ತೂರಿನ ಶನಿ ಪೂಜೆಯಲ್ಲಿ
ಕಳಚಿದ ಚೆಡ್ಡಿಗಳ ಮುಖವಾಡ

ಸಾಬಿಗಳ ಮೇಲೆ ಇನ್ನೂ ಒಂದಿಷ್ಟು ಸವಾರಿ ಮಾಡಿ ಲಾಭ ಮಾಡುವ ಉದ್ದೇಶದಿಂದಲೇ ರೂಪುಗೊಂಡಂತಿದ್ದ ಮಂಗಳೂರಿನ ಹಿಂದೂ ಸಮಾಜೋತ್ಸವವೆಂಬ ನಾಟಕ ಪೊಲೀಸರ ಕೊನೆಕ್ಷಣದ ಬಿಗುತನದಿಂದ ನಿರೀಕ್ಷಿತ ಫಲ ನೀಡದೇ ಮಸೂದ್‌ನಂತಹ ಮುಸ್ಲಿಂ ಬ್ರಾಹ್ಮಣನ ಮಂಗ್ಯಾತನಗಳಿಂದ ಹಾಸ್ಯಾಸ್ಪದವಾಗಿ ಕೊನೆಗೊಂಡಿತು. ಸಮಾಜೋತ್ಸವದ ವೇದಿಕೆಯಲ್ಲಿ ಪೇಜಾವರ, ರಾಘವೇಶ್ವರರಂತಹ



ಬ್ರಾಹ್ಮಣ ಸ್ವಾಮಿಗಳಿಗೆ ಮೇಲ್ಪಂಕ್ತಿ; ಒಡಿಯೂರು, ಕೊಲ್ಯರಂತಹ ಶೂದ್ರ ಸ್ವಾಮೀಜಿಗಳಿಗೆ ಎರಡನೇ ಪಂಕ್ತಿ. ಹಿಂದೂಗಳೆಲ್ಲಾ ಒಂದಲ್ಲ ಎನ್ನುವುದನ್ನು ಸಾರಿ ಹೇಳುವಂತಿತ್ತು. ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದಂತೆ, ಕೊಲ್ಯ ಸ್ವಾಮೀಜಿಗೆ ವೇದಿಕೆಯಲ್ಲೇ ಜ್ಞಾನೋದಯವಾಗಿ ಹಿಂದೂ ಸಮಾಜೋತ್ಸವದಲ್ಲಿಯೇ ಧಿಕ್ಕಾರ ಕೂಗಿದ್ದು ಇದೆಲ್ಲಾ ಸೂಕ್ಷ್ಮವಾಗಿ ಗಮನಿಸಿದಾಗ ಶೂದ್ರರನ್ನು ಸಾಬಿಗಳ ವಿರುದ್ಧ ಛೂಬಿಟ್ಟು ಬ್ರಾಹ್ಮಣರು ಭದ್ರವಾಗುವುದರ ಹುನ್ನಾರ ಸ್ಪಷ್ಟವಾಗುತ್ತಿತ್ತು. ಇದಾಗುತ್ತಲೇ ಪುತ್ತೂರಿನಲ್ಲಿ ಶ್ರೀರಾಮಸೇನೆ ಆಯೋಜಿಸಿದ್ದ 'ಶನಿಪೂಜೆ'ಯಲ್ಲಿ ನಡೆದ ದಾಂಧಲೆ ಚೆಡ್ಡಿಗಳು ಕೋಲು ಕೊಟ್ಟು ಹೊಡೆಸಿಕೊಂಡಂತಾಗಿ ಹಿಂದೂತ್ವದ ಮುಖವಾಡವನ್ನು ಮತ್ತೊಮ್ಮೆ ಕಳಚಿದೆ.

ರಿವೇಂಜ್

ಜಿಲ್ಲಾ ಹಿಂದೂ ಸಮಾಜೋತ್ಸವಕ್ಕೆ ಪೂರ್ವಭಾವಿಯಾಗಿ ಪುತ್ತೂರಿನಲ್ಲಿ ತಾಲ್ಲೂಕು ಮಟ್ಟದ ಬೃಹತ್ ಹಿಂದೂ ಸಮಾಜೋತ್ಸವವು ನಡೆದಿತ್ತು. ರಾಜ್ಯದಲ್ಲೇ ಚೆಡ್ಡಿಗಳ ಭದ್ರ ನೆಲೆಗಟ್ಟಾದ ಪುತ್ತೂರು ರಾಜ್ಯಾಧ್ಯಕ್ಷ ಡಿ.ವಿ. ಸದಾನಂದಗೌಡ, ಬಿಜೆಪಿ ಮೋಹಿನಿಯಂತೆ ಕಾಟ ಕೊಡುತ್ತಿರುವ ಶೋಭಾ ಕರಂದ್ಲಾಜೆಯನ್ನು ಕೊಡುಗೆಯಾಗಿತ್ತ ನಾಡು. ಇಂತಹ ಪುತ್ತೂರಲ್ಲಿ ಬಿಜೆಪಿಗೆ ರಾಜಕೀಯ ಪ್ರತಿಸ್ಪರ್ಧಿ ಕಾಂಗ್ರೆಸ್ ಅಂದರೆ ನಿಮ್ಮ ಊಹೆ ತಪ್ಪು, ಇಲ್ಲಿ ಬಿಜೆಪಿಗೆ ಪ್ರಥಮ ಶತ್ರುವಾಗಿ ಕಾಡುತ್ತಿರುವುದೇ ಚೆಡ್ಡಿಗಳ ತೀವ್ರ ರೂಪವಾಗಿರುವ ಶ್ರೀರಾಮಸೇನೆ. ಪುತ್ತೂರಿನ ಹಿಂದೂ ಸಮಾಜೋತ್ಸವದಲ್ಲಿ ಕಾಂಗ್ರೆಸ್ಸಿನ ರಾಧಾಕೃಷ್ಣ ಆಳ್ವ, ಅಮ್ಮಣ್ಣ ರೈಯಂತಹ ನಾಯಕರು ಕಾಣಿಸಿಕೊಂಡರೂ, ಶ್ರೀರಾಮಸೇನೆಯ ಪುಡಿ ಕಾರ್ಯಕರ್ತರನ್ನು ಹತ್ತಿರಕ್ಕೆ ಸೇರಿಸಲಿಲ್ಲ. ಇದಕ್ಕೆ ಪ್ರತೀಕಾರವಾಗಿ ಪುತ್ತೂರಿನ ಶ್ರೀರಾಮಸೇನೆ ಆಯೋಜಿಸಿದ್ದೇ ಸಾರ್ವಜನಿಕ ಶನೈಶ್ಚರ ಪೂಜೆ.

ನಾಯಕ ಪ್ರಮೋದ್ ಮುತಾಲಿಕ್ ಸೇರಿದಂತೆ ಪುತ್ತೂರಿನ ಶ್ರೀಮಹಾಲಿಂಗೇಶ್ವರ ದೇವಳದ ದೇವರ ಮಾರುಗದ್ದೆಯಲ್ಲಿ ಶನೈಶ್ಚರ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ-ಧರ್ಮ ಸಮ್ಮೇಳನ ಎಂದೆಲ್ಲಾ ನಡೆಯಿತು. ಶನಿದೇವರ ಮೇಲಿನ ಭಯಭಕ್ತಿಯಿಂದಲೋ ಶ್ರೀರಾಮಸೇನೆಯ ಮೇಲಿನ ನಿಷ್ಠೆಯಿಂದಲೋ ಅಂತೂ ಸಾಕಷ್ಟು ಭಕ್ತವೃಂದವೂ ಅಲ್ಲಿ ಕಲೆತಿತ್ತು. ಕೊನೆಗೆ ಸಾಯಂಕಾಲ ಶೋಭಾ ಯಾತ್ರೆ ನಡೆದು ಶನಿದೇವರ ವಿಗ್ರಹವನ್ನು ವಿಸರ್ಜಿಸುವಲ್ಲಿ ಎಲ್ಲವೂ ಸುಖಾಂತ್ಯಗೊಳ್ಳುತ್ತಿತ್ತು. ಹೀಗೆ ಈ ಶನಿಪೂಜೆ ಸುಖಾಂತ್ಯವಾದರೆ ಪ್ರಥಮವಾಗಿ ನಿದ್ದೆಗೆಡುವ ಸರದಿ ಡಿ.ವಿ. ಸದಾನಂದಗೌಡರದ್ದು. ಪರಿಣಾಮವಾಗಿ ಶೋಭಾಯಾತ್ರೆಗೆ ಪೊಲೀಸರ ಅನುಮತಿ ನಿರಾಕರಣೆ.


ಕೊನೇಗಳಿಗೆಯಲ್ಲಿ ಉಳಿದ 200 ಮಂದಿ ಭಕ್ತರು ಸಾಯಂಕಾಲ ಭಜನೆ ಮಾಡುತ್ತ ವಿಗ್ರಹದ ಬಳಿಯೇ ಕುಳಿತಿರುವಾಗ ವಿಕಾವಿಕಿ ಗೂಂಡಾಗಳಂತೆ ನುಗ್ಗಿದ್ದ ಎ.ಎಸ್ಪಿ ಹರ್ಷ ನೇತೃತ್ವದ ಪೊಲೀಸ್ ಪಡೆ ಭಜನೆ ನಿರತರೂ ಸೇರಿದಂತೆ ಅಲ್ಲಿದ್ದವರ ಮೇಲೆ ಹಿಗ್ಗಾಮುಗ್ಗಾ ಲಾಠಿ ಬೀಸಿ ಥಳಿಸಿತು. ಕೈಗೆ ಸಿಕ್ಕ 33 ಮಂದಿಯನ್ನು ಯಾರೆಂದು ನೋಡದೇ ಪೊಲೀಸರ ಕೋಲೆಯತ್ತಕ್ಕೆ ತುಯ್ಯಿಸಿದರು

ಎನ್ನುವ ನೆಪದಲ್ಲಿ ಕೇಸು ಜಡಿದು ಬಳ್ಳಾರಿಗೆ ಅಟ್ಟಿದರು. ಇದಕ್ಕೂ ಮೊದಲು ಅನುಮತಿ ಇಲ್ಲದೇ ಮೈಕ್ ಬಳಸಿದ್ದು, ಅದನ್ನು ತೆಗೆಯುವಂತೆ ಪೊಲೀಸರು ಆದೇಶಿಸಿದ್ದು, ಅದನ್ನು ತೆಗೆಯಲು ನಿರಾಕರಿಸಿದಾಗ ಪೊಲೀಸರೇ ತೆಗೆಯಲು ಹೋದದ್ದು, ಶ್ರೀರಾಮಸೇನೆಯವರು ತಡೆದದ್ದು ಆನಂತರದ ಬೆಳವಣಿಗೆಗೆ ಕಾರಣ.

ಇದಕ್ಕೂ ಮೊದಲು ಸುಮಾರು ಏಳು ಬಾರಿ ಮೈಕ್ ಪರವಾನಗಿಗಾಗಿ ಶ್ರೀರಾಮಸೇನೆಯವರು ಪೊಲೀಸ್ ಠಾಣೆಗೆ ಎಡತಾಕಿದ್ದರು. ಇನ್ನು ಧಾರ್ಮಿಕದತ್ತಿ ಇಲಾಖೆಗೆ ಸೇರಿದ ದೇವಳದ ಗದ್ದೆಯಲ್ಲಿ ನಡೆಯುವ ದೇವರ ಕಾರ್ಯಕ್ರಮಕ್ಕೆ ಧ್ವನಿವರ್ಧಕ ಪರ್ಮಿಶನ್‌ನ ಅವಶ್ಯಕತೆಯಿಲ್ಲ ಎನ್ನುವ ವಾದವೂ ಇದೆ. ಅದೇನೇ ಇರಲಿ, ಕೊನೆಗದು ಶೋಭಾಯಾತ್ರೆಯ ಬದಲು ಪೊಲೀಸರ ಲಾಠಿ ಪೂಜೆಯೊಂದಿಗೆ ಶ್ರೀರಾಮಸೇನೆಯ ಶನಿಪೂಜೆ ಮುಕ್ತಾಯಗೊಂಡಿದಂತೂ ಹೌದು. ಪುರಸಭೆಯ ಪೌರ ಕಾರ್ಮಿಕರ ಕೈಯಲ್ಲಿ ಶನಿದೇವರ ಮೂರ್ತಿಯನ್ನು ಹೊತ್ತು ತಂದು ವೆಂಕಟರಮಣ ದೇವಸ್ಥಾನದ ಬಾವಿಗೆ ಎಸೆದದ್ದೂ ಹೌದು. ಶಾಸಕ-ಎಂ.ಪಿ. ಸೇರಿದಂತೆ ಅಡಿಯಿಂದ ಮುಡಿತನಕ ಬಿಜೆಪಿಗರೇ ಪ್ರತಿನಿಧಿಸುವ ಪುತ್ತೂರಿನಲ್ಲಿ ಹಿಂದೂ ದೇವರಿಗೆ ಒದಗಿದ ಸ್ಥಿತಿ ಇದು.


ಇಂತಹ ಒಂದು ಘಟನೆ ಕಾಂಗ್ರೆಸ್ ಅಥವಾ ಕಮ್ಯುನಿಸ್ಟ್ ಶಾಸಕನು ಪ್ರತಿನಿಧಿಸುವ ಕ್ಷೇತ್ರದಲ್ಲಿ ಸಂಭವಿಸಿ ಸಂಘ ಪರಿವಾರದ ನಾಯಕರೆಲ್ಲಾ ಚೆಡ್ಡಿ ಹರಕ್ಕೊಂಡು ಕಿರುಚಾಡುತ್ತಿದ್ದರು. ಇದನ್ನೇ ನೆಪವಾಗಿಟ್ಟುಕೊಂಡು ದೊಂಬಿ-ಗಲಾಟೆ ಎಬ್ಬಿಸಿ ಮೈಲೇಜು ಗಿಟ್ಟಿಸಿಕೊಳ್ಳುತ್ತಿದ್ದರು. ಡಿ.ವಿ. ಸದಾನಂದಗೌಡರಂತೂ ಇದು ಐಎಸ್‌ಐ ಕೈವಾಡ ಅಂತ ಹೇಳಲೂ ಹೇಸುತ್ತಿರಲಿಲ್ಲ, ಅವತ್ತು ಅಲ್ಲಿದ್ದ 200 ಮಂದಿ ಶನಿದೇವರ ವಿಗ್ರಹವನ್ನು ಶೋಭಾ ಯಾತ್ರೆಯಲ್ಲಿ ಒಯ್ಯಾಗ ಪೊಲೀಸರ ಗಂಟೇನು ಕರಗುತ್ತಿರಲಿಲ್ಲ, ಆದರೆ ಡಿ.ವಿ.ಯ ಕೃಪಾಕಟಾಕ್ಷದಿಂದಲೇ ಪುತ್ತೂರಿಗೆ ವಕ್ಕರಿಸಿ, ಚೆಡ್ಡಿಗಳ ವಕ್ತಾರನಂತೆ ವರ್ತಿಸುವ ಎ.ಎಸ್ಪಿ ಹರ್ಷಾಗೆ ಡಿ.ವಿ.ಯ ಋಣ ಸಂದಾಯ ಮಾಡಬೇಕಾಗಿತ್ತು, ಶ್ರೀರಾಮಸೇನೆಯವರನ್ನು ತದುಕಲು ಒಂದು ನೆಪ ಬೇಕಾಗಿತ್ತು, ಅದಕ್ಕೆ ಗುರಿಯಾಗಿದ್ದೇ ಈ ಶನಿಪೂಜೆ.

ತಿರುಗಿಬಿದ್ದ ಶ.ಕು. ಆಂಟಿ!




ಇದೆಲ್ಲಾ ಮುಗಿದು ಇದೀಗ ಹೇಳಿಕೆಗಳ ಸಮರ ಶುರುವಾಗಿದೆ. ಖುದ್ದು ಡಿ.ವಿ. ಸದಾನಂದಗೌಡರೇ- ಬಿಜೆಪಿ ಮೇಲೆ ವೃಥಾ ಆರೋಪ ಮಾಡಲಾಗಿದೆ. ಧರ್ಮದ ವಿಚಾರದಲ್ಲಿ ತಾನಾಗಲೀ ಬಿಜೆಪಿಯಾಗಲೀ ಈತನಕ ಯಾವುದೇ ರಾಜಕೀಯ ಮಾಡಿಲ್ಲ ಎನ್ನುವ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್‌ನ ಹೇಮನಾಥ ಶೆಟ್ಟಿ, ಜೀವನ್ ಭಂಡಾರಿಯಂಥವರು ಪೊಲೀಸರ ಈ ವರ್ತನೆಯ ಹಿಂದೆ ಬಿಜೆಪಿ ಕೈವಾಡ ಎಂದೆಲ್ಲಾ ಹೇಳಿಕೆ ಕೊಟ್ಟು ಖಂಡಿಸಿದರೆ, ಕೋತಿ ತಿಂದು ಮೇಕೆಯ ಮೂತಿಗೊರೆಸಿತು ಎಂಬಂತೆ ಭಜರಂಗದಳವು- ಇದು ಕಾಂಗ್ರೆಸ್‌ನವರ ಪಿತೂರಿ ಎಂದು ಹೇಳಿಕೆ ನೀಡುತ್ತಿದೆ.

ಈ ನಡುವೆ ಘಟನೆಯನ್ನು ಖಂಡಿಸಿದ ಪುತ್ತೂರಿನ ಶಾಸಕಿ ಶಕುಂತಲಾ ಶೆಟ್ಟಿಯವರಲ್ಲಿ ಡಿ.ವಿ. ಸದಾನಂದ ಗೌಡರಿಂದ ತನಗಾದ ಅನ್ಯಾಯ ಸ್ಫೋಟಗೊಂಡಿದೆ. ಡಿ.ವಿ. ಸದಾನಂದಗೌಡರೇ ಪುತ್ತೂರಿನಲ್ಲಿ ಎಲ್ಲವನ್ನೂ ಕಂಟ್ರೋಲ್ ಮಾಡುತ್ತಾ ಶಕುಂತಳಾ ಶೆಟ್ಟಿ ಬರೀ ರಬ್ಬರ್‌ಸ್ಟಾಂಪ್‌ನಂತಾಗಿದ್ದು, ಪಕ್ಷದಲ್ಲೂ ಸರಿಯಾದ ಸ್ಥಾನಮಾನ ನೀಡದೇ ವಂಚಿತರಾಗಿದ್ದಾರೆ. ಈ ಬಾರಿಯ ನಿಗಮ-ಮಂಡಳಿಗಳ ಆಯ್ಕೆ ಸಂದರ್ಭದಲ್ಲಿ ಯಾರಿಗೂ ಬೇಡವಾದ ಗೇರು ಅಭಿವೃದ್ಧಿ ನಿಗಮಕ್ಕೆ ಶಕುಂತಲಾ ಶೆಟ್ಟಿಯನ್ನು ನೇಮಿಸಿದ್ದು ಸಿಟ್ಟಾದ ಶಕು ಆಂಟಿ ಅದನ್ನು ತಿರಸ್ಕರಿಸಿದ್ದಾರೆ. ಇದೀಗ ಶನಿ ಪೂಜೆ ಪ್ರಕರಣದಲ್ಲೂ ಅಮಾಯಕ ಹಿಂದೂಗಳನ್ನು ಬಂಧಿಸಿರುವುದನ್ನು ಉಲ್ಲೇಖಿಸುತ್ತಾ... ಹಾಗಾದರೆ ಡಿ.ವಿ. ಅಮಾಯಕರ ಹಿಂದೂಗಳನ್ನು ರಕ್ಷಿಸಲಿ ಎಂದು ಹೇಳಿದ್ದು ಚರ್ಚೆಯಾಗುತ್ತಿದೆ.



ತಾನೇ ಸಾಕಿದ ಗಿಣಿ ಹದ್ದಾಗಿ ಕುಕ್ಕಿತಲ್ಲೋ

ಅರುಣ್‌ಕುಮಾರ್ ಪುತ್ತಿಲ ಪುತ್ತೂರಿನಲ್ಲಿ ಭಜರಂಗ ದಳವನ್ನು ಕಟ್ಟಿ ಬೆಳೆಸಿದ ವ್ಯಕ್ತಿ. ತನ್ನ ವಾಕ್ ಚಾತುರ್ಯ, ಸಂಘಟನಾ ಚತುರತೆಯಿಂದ ಬಿಜೆಪಿಯಲ್ಲಿ ವರ್ಚಸ್ವೀ ನಾಯಕನಾಗಿ ಬೆಳೆದು ನಿಂತ ಪುತ್ತಿಲ, ನೋಡು ನೋಡುತ್ತಲೇ ಡಿ.ವಿ.ಯಂತಹ ಡಿ.ವಿಗೇ ಸೆಡ್ಡು ಹೊಡೆಯಲಾರಂಭಿಸಿದ.



ಇದರಿಂದ ಎಲ್ಲಿ ತನ್ನ ಬುಡಕ್ಕೆ ನೀರು ಬರುತ್ತದೋ ಎಂದು ಬೆದರಿದ ಡಿ.ವಿ. ಭಜರಂಗದಳದಲ್ಲೇ ಬ್ರಾಹ್ಮಣ-ಗೌಡ ಎನ್ನುವ ಹುಳಿ ಹಿಂಡಿ ಪುತ್ತಿಲನನ್ನು ಭಜರಂಗದಳದಿಂದಲೇ ಕಿಕ್‌ಔಟ್ ಮಾಡುವಲ್ಲಿ ಯಶಸ್ವಿಯಾದರು. ಅದೇ ಹೊತ್ತಿಗೆ ಮುತಾಲಿಕ್‌ನ ಶ್ರೀರಾಮಸೇನೆಯು ಹುಟ್ಟಿದ್ದು ಈ ಮುತಾಲಿಕ್‌ನ ಶಿಷ್ಯನಿಗೂ ನೆಲೆಗೊಳ್ಳಲು ಒಂದು ನೆಲೆ ಸಿಕ್ಕಿತು. ಪುತ್ತೂರಿನಲ್ಲಿ ಶ್ರೀರಾಮಸೇನೆಯ ಸಾರಥ್ಯ ವಹಿಸಿದ ಅರುಣ್‌ಕುಮಾರ್ ಆನಂತರ ಮಾಡುತ್ತಾ ಬಂದಿರೋದೇ ಚೆಡ್ಡಿಗಳ ಹುಸಿ ಹಿಂದೂತ್ವವನ್ನು ಬಯಲು ಮಾಡುವ ಕೆಲಸವನ್ನು. ಈ ಮೊದಲು ಭಜರಂಗದಳದಲ್ಲಿದ್ದು ಪುತ್ತೂರಿನ ಚೆಡ್ಡಿಗಳು ಓಟ್‌ಬ್ಯಾಂಕ್‌ಗಾಗಿ ಆಡುವ ಹಿಂದೂತ್ವದ ನಾಟಕವನ್ನು ಚೆನ್ನಾಗಿ ಬಲ್ಲ ಅರುಣ್‌ಕುಮಾರ್ ಪುತ್ತಿಲ ಇದೀಗ ಅದನ್ನೆಲ್ಲ ಬಯಲು ಮಾಡತೊಡಗುತ್ತಲೇ ಶ್ರೀರಾಮಸೇನೆಯ ರಾಜ್ಯ ಸಂಚಾಲಕನ ಮಟ್ಟಕ್ಕೆ ಮುಟ್ಟಿದ್ದು ಮುಖ್ಯವಾಗಿ ಡಿ.ವಿ. ಸದಾನಂದಗೌಡರಿಗೇ ನುಂಗಲಾರದ ಬಿಸಿತುಪ್ಪವಾಗಿ ಪರಿಣಮಿಸಿತ್ತು.

ವರ್ಷದ ಹಿಂದ ಪುತ್ತೂರಿನ ತರುಣಿ ಅಕ್ಷತಾ ಎಂಬಾಕೆ ಮುಸ್ಲಿಂ ಪ್ರೇಮಿಯ ಕೈಯಲ್ಲಿ ಕೊಲೆಯಾದ ಸಂದರ್ಭದಲ್ಲಿ 'ಯಶಸ್ವಿ ಪುತ್ತೂರ್ ಬಂದ್' ಮಾಡಿ ಮಿಂಚಿದ ಪುತ್ತಿಲ ಡಿ.ವಿ. ಸದಾನಂದಗೌಡರ ಪಟಾಲಂಗೆ ಸರಿಯಾದ ಕೆನ್ನೆಯೇಟನ್ನೇ ನೀಡಿದ್ದರು. ಹತ್ತು ವರ್ಷದ ಹಿಂದೆ ಇದೇ ರೀತಿ ಪುತ್ತೂರಿನಲ್ಲಿ ಸೌಮ್ಯಭಟ್ ಎಂಬ ವಿದ್ಯಾರ್ಥಿನಿಯನ್ನು ಕೊಲೆ ಮಾಡಿದ ಸಂದರ್ಭದಲ್ಲಿ ಡಿ.ವಿ. ಸದಾನಂದಗೌಡರ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆದು ಆನಂತರ ನಡೆದ ಗಲಾಟೆ-ದೊಂಬಿಗಳಲ್ಲಿ ಪುತ್ತೂರು ಪೂರ್ತಿ ಸುಟ್ಟೇ ಹೋಗಿತ್ತು. ಇದೀಗ ಅಧಿಕಾರಕ್ಕೆ ಬರುತ್ತಲೇ ಬಂದ್‌ನಿಂದ ದೂರವುಳಿದ ಡಿ.ವಿ.ಯ ಅಧಿಕಾರಲಾಲಸೆ ಕಟ್ಟರ್ ಹಿಂದೂಗಳನ್ನು ಕೆರಳಿಸಿತ್ತು. ಅಂತೆಯೇ ಪುತ್ತಿಲ ನಡೆಸಿದ ಬಂದ್ ಗಾಯದ ಮೇಲೆ ಬರೆ ಎಳೆದಂತೆ ಆಗಿತ್ತು. ಅವತ್ತಿನಿಂದಲೇ ಪುತ್ತಿಲನನ್ನು ಮಟ್ಟಹಾಕಲು ಹೊಂಚಿತ್ತ ಡಿ.ವಿ.ಗೆ ಮೊನ್ನೆಯ ಶನಿಪೂಜೆ ಸೂಕ್ತ ಸಂದರ್ಭವಾಗಿತ್ತು. ಇದನ್ನು ಸಾಧಿಸಲು ತನ್ನ ಪೇದೆಯಂತೆ ವರ್ತಿಸುವ ಎ.ಎಸ್ಪಿ ಹರ್ಷ ಪುತ್ತೂರಿನಲ್ಲಿದ್ದರು. ಈಗ ಡಿ.ವಿ. ಸದಾನಂದಗೌಡರನ್ನು ನಂಬಿ ಓಟುಕೊಟ್ಟ ಸಮಸ್ತ ಹಿಂದೂಗಳು ಕೇಳಬೇಕಾಗಿದೆ: ಹಿಂದೂಗಳೆಲ್ಲಾ ಒಂದು ಎನ್ನುವ ಈ ನಿಮ್ಮ ನಾಡಿನಲ್ಲಿ ಅದೂ ನಿಮ್ಮ ತಾಯ್ನಾಡಿನಲ್ಲಿ ಶನಿಪೂಜೆಯಲ್ಲಿ ತೊಡಗಿದ್ದ ಅಮಾಯಕ ಹಿಂದೂಗಳ ಮೇಲೆ ಪೊಲೀಸರು ಹಲ್ಲೆ ಮಾಡಿ ಕೇಸು ಜಡಿದು ಅಟ್ಟಿಹಾಕಿದರಲ್ಲಾ, ಎಲ್ಲಿ ಹೋಯಿತು ನಿಮ್ಮ ಹಿಂದೂತ್ವ?

-ಪ್ರಕಾಶ್ ಪಿಂಟೋ

ಕನ್ನಂಬಾಡಿ ಕಟ್ಟಕ್ಕೆ ಕಾಸು ಕೊಟ್ಟೋರ್‍ಯಾರು ಗೊತ್ತೇನ್ಲ?

ಬಯಲುಸೀಮೆಯ ಕಟ್ಟೆ ಪುರಾಣ

ಉಗ್ರಿಯಿಂದ ಕಾವೇರಿ ಸುದ್ದಿ ಕೇಳಿದ ಕಾಳಮಾವ ಊರ ಕೆರೆಯೇ ಒಡೆದು ಹೋದಂತೆ ಕುಳಿತಿದ್ದವನು,

"ಅಲ್ಲಪ್ಪಾ, ಅವುರಿಗೆ ಮುಕ್ಕಾಲು ಭಾಗ ನೀರು, ನಮಿಗೆ ಕಾಲುಭಾಗ ಅಂದ್ರೆ, ಇದ್ಯಾವ ಸೀಮೆ ನ್ಯಾಯಾ?" ಎಂದ.

"ಅವುರು ಅಚ್ಚುಗಟ್ಟು ಜಾಸ್ತಿ ತೋರಿದ್ದರಂತೆ ಕಣ ಮಾವ."

"ತೋರ್‍ಲಿ ಕಂಡ್ಯ, ಅವುರಿಗರ್ದ ನಿಮಿಗರ್ದ ಅಂತ ತೀರ್ಮಾನ ಕೊಡಕ್ಕೇನಾಗಿತ್ಲ?"

"ಅದೆಯಪ್ಪ ನಾನೇಳದು" ಎಂದಳು ಜುಮ್ಮಿ.

"ಅಲ್ಲ ಕಂಡ್ಯ, ಹರಿಯೋ ನೀರಿಗೆ ದ್ವಣ್ಣೆ ನಾಯಕನ ಅಪ್ಪಣೆನೆ ಅಂದಂಗೆ ನಮಿಗೆ ನೀರಂಚಕೆ ಆ ಪೂಟ್ ಲಾಯರಿ ಯಾರ್‍ಲ?" ಎಂದು ಕಾಳಮಾವ ಸಿಟ್ಟಾದ.

"ನಮ್ಮ ಲಾಯಿರಿಗಳು ಸರಿಲ್ಲ ಕಣ ಮಾವ, ಇವುರಿಗೋಲಿಸಿದ್ರೆ ಆ ತಮುಳು ಲಾಯಿರಿಗಳು ಜೋರಂತೆ. ಆ ನನಮಕ್ಕಳು ಅಂಕಿ ಅಂಸ ತಗಂಡು ವಾದ ಮಾಡದ್ರಲ್ಲಿ ಇವುರ ಬಾಯಿ ಮುಚ್ಚಿರಬೇಕು. ಅದ್ಕೆ ಇಂತ ತೀರ್ಪು ಬಂದದೆ."

"ಅಲ್ಲ ಕಂಡ್ಯ, ಈ ಊರಲ್ಲಿ ಕೂತಗಂಡು ನಾವೆ ಸುತ್ತಲಳ್ಳಿ ಜನ ಉಸರೆತ್ತದಂಗೆ ನ್ಯಾಯ ಮಾಡಿ ತೀರ್ಮಾನ ಹೇಳ್ತಿವಿ. ನಾವೇನು ಬಿ.ಎ. ಪ್ಯಾಸು ಮಾಡಿದ್ದವೆ? ಅಂತೆದರಲ್ಲಿ ಲಾಯಿರಿ ಓದಿರೊ ನನಮಕ್ಕಳು ನಮಗಿಂತ ಅನ್ಯಾಯ ಮಾಡಿದ್ರು ಅಂದ್ರೆ ಇನ್ನ್ಯಾರ ನಂಬನ ಹೋಗತ್ತಗೆ" ಎಂದ ಕಾಳಮಾವ ರೋಸಿದವನಂತೆ.

"ಅಂಗೇನಾರ ತಮುಳನಾಡಲ್ಲೆ ಕನ್ನಂಬಾಡಿ ಅಣೆಕಟ್ಟೆ ಇದ್ದು ನಾವೇ ಅವುರಿಂದ ನೀರೀಸಿಗಳಂಗೆ ಆಗಿದ್ರೆ ಕೊಡತಿದ್ರೇನ್ಲ?" ಎಂದ ಸೀರ.

"ಯಾರು ಕೊಡದಿಲ್ಲ ಬುಡು. ಅಲ್ಲಿಗಂಟ ಯಾಕೋದೀ, ಇಲ್ಲೆ ನಮ್ಮೂರ ಕ್ಯರೆ ನೀರು ಕಡೆಗದ್ದೆ ತಲುಪದಿಲ್ಲ ಅಂತ ಬಲ್ಲಾವಳ್ಳಿ ಜನ ಬಂದಿದ್ರು. ಅದಕೆ ನೀವೇನಂದ್ರಿ? ಅಂಗರೆ ತೂಬಿನಗುಂಡಿತ ಇರಬೇಕಿತ್ತು, ನೀನು ಕಡೆಗದ್ದೆ ಯಾಕೆ ಮಾಡಿದ್ದಿ? ಹೋಗಿ ಉಳ್ಳಿ ಜ್ವಾಳ ಆರಕ ಏನ್ನಾರ ಬ್ಯಳಕಳಿ ಅಂತ ಹೇಳಿ ಕಳಿಸಿದ್ರಿ, ನ್ಯನಪಿದ್ದತೆ?" ಎಂದ ಉಗ್ರಿ.

"ಮದ್ದಿಗೆ ಮಂಡ್ಯ ಜಿಲ್ಲೆ ರಾಗಿ ಆರ್‍ಕೆ ಅಲವೆ ಬ್ಯಳಿತಿದ್ದುದ್ದು? ಆ ಪುಣ್ಯಾತ್ಮ ಇಸ್ವೇಪ್ಪುರಯ್ಯ ಬಂದು ಕನ್ನಂಬಾಡಿ ಕಟ್ಟದೆ ಇದ್ರೆ ಇವತ್ತಿಗೂ ಮಂಡ್ಯ ಜಿಲ್ಲೆ ಜನಕೆ ಅನ್ನ ಚನ್ನವಾಗಿ ಹಿಟ್ಟು ಬ್ಯಲ್ಲಾಗದು" ಎಂದ ಸೀರ.

"ಇಸ್ವೇಪ್ಪುರಯ್ಯ ಕಟ್ಟದ ಸರಿ ಕಂಡ್ಯ. ಅವುನ ಕೈಗೆ ದುಡ್ಡು ಕೊಟ್ಟೋರಾರೂ? ನಮ್ಮ ರಾಜರಲವೆ? ಇಡೀ ಅರಮನೆ ಕಜಾನೆ ಹಣನ್ಯಲ್ಲ ಬಾಚಿ ಕೊಡೋವತ್ತಿಗೆ ಕನ್ನಂಬಾಡಿ ರಡಿಯಾಯ್ತಪ್ಪ, ಆ ತಮುಳನಾಡಿನೋರು ಏನು ಕೊಟ್ಟದ್ದರೂ, ಏನು ಕಳಕಂಡಿದ್ದರೂ, ಏನು ಕಿಸದೆತ್ತಾಕಿದರೂ ತೋರ್‍ಲಿ ನೋಡನ."

"ನೀನು ಹೇಳದು ನಿಜ ಕಣ ಮಾವ. ಕನ್ನಂಬಾಡಿ ಕಟ್ಟದಾಗ ಊರಿಗೂರೇ ಮುಳುಗಿದವಂತೆ. ದೇವುಸ್ಥಾನ ಮುಳಿಗದವಂತೆ. ಅದ ಕಟ್ಟುವಾಗ ಏಟೋ ಜನ ಸತ್ತರಂತೆ. ಮಾರಾಜುರು ದುಡ್ಡು ಸಾಲ್ದೆ ಮಾರಾಣಿರ ವಡವೆ ತಗಂಡೋಗಿ ಬಂಬಾಯಿಲಿ ಮಾರಿ ಬಂದರಂತೆ. ಇಷ್ಟೊಂದು ತ್ಯಾಗ ಮಾಡಿರೊ ನಾವೆಲ್ಲಿ, ಆ ಕ್ವಂಗಾಟ ನನಮಕ್ಕಳಿಗೆ ನಮ್ಮ ಲಾಯರಿಗಳು ಹೇಳಬೇಕಾಗಿತ್ತು, ಆಗಲಾರ ನ್ಯಾಯ ಸಿಗದು" ಎಂದ ಉಗ್ರಿ.

"ನಾನು ಆಗೊಂದು ಸತಿ ಹೇಳಿರಲಿಲವೇನ್ಲ ಉಗ್ರಿ, ನೀರನ್ಯಲ್ಲ ನೀವೇ ಬುಟಗಂಡು ಬತ್ತಕೊಡಿ ಅಂದ್ಯಂಗೇ ಅಂತವ" ಎಂದು ಸೀರ ಕ್ವರಾಕ್ ಎಂದು ನಕ್ಕ.

"ತಮಾಸಿ ಮಾಡ್ತಿ ಕಣೊ ಸೀರ ಮಾವ ನೀನು" ಎಂದು ಉಗ್ರಿ ಮುಖ ಸಿಂಡರಿಸಿದ.

"ಇಸಿಸಿ ತಮಾಸಿ ಮಾಡದೆ ಇನ್ನೇನು ಮಾಡದ್ಲ ನಾನು? ನನ್ನ ಬಾರೆ ಜಮೀನಿಗೆ ಕನ್ನಂಬಾಡಿ ನೀರು ಬಂದತೆ ಅಥವಾ ನಾನೇನಾರ ಕಾವೇರಿ ನೀರ ಕುಡಿಯಂಗಿದ್ದನೆ? ಯರಡು ಸತಿ ಬರಗಾಲ ಬತ್ತಲ್ಲಾ ಆಗ ಮಂಡ್ಯ ಜಿಲ್ಲೆ ಗದ್ದೆ ಹಳ್ಳಿಯೋರು ಒಂದು ಮೂಟೆ ಬತ್ತ ಕೊಟ್ರೆ ಒಂದು ಗಾಡಿ ಹುಲ್ಲು ಕೊಟ್ರೆ ತಗಳಪ್ಪ ಅಂತ."

"ಓಹೊಹೊ, ಸೀರ ಮಾವನಿಗೆ ಗಾಡಿ ಉಲ್ಲು ಮೂಟೆ ಬತ್ತ ಕೊಟ್ಟದ್ರೆ ಈಗ ಟ್ಯೆಕ್ ಮಾಡಕ್ಕೋಯಿತ್ತದ್ದ ಕಂಡ್ಯ ಉಗ್ರಿ" ಎಂದು ಜುಮ್ಮಿ ನಕ್ಕಳು.

"ನೋಡೆ ಜುಮ್ಮಿ, ಅವುರವರ ಭಾಗಕ್ಕೆ ಬಂದಿದ್ದ ಅವುರು ಅನುಭವುಸಬೇಕು ಕಂಡ್ಯ. ರೈತರು ಎಲ್ಲಿದ್ರು ರೈತರೆಯ. ನಾವು ಏಟೇ ವಾದ ಮಾಡಿದ್ರು ಅಕ್ಕಿಕೊಟ್ಟುಣ್ಣಕ್ಕೆ ಅಕ್ಕನ ಮನಿಯೇ ಆಗಬೇಕೆ ಅನ್ನಂಗೆ ತಮುಳನಾಡಿನೋರು ಬತ್ತ ಬ್ಯಳುದ್ರು ದುಡ್ಡು ಕೊಟ್ಟೆ ತಗೊಬೇಕು. ನಮ್ಮೋರು ಬ್ಯಳುದ್ರು ದುಡ್ಡು ಕೊಟ್ಟೆ ತಗೋಬೇಕು ತಿಳಿತೆ?" ಎಂದು ಸೀರ ತನ್ನವಾದ ಮಂಡಿಸಿದಾಗ ಇದನ್ನು ಕೇಳಿಸಿಕೊಂಡ ವಾಟಿಸ್ಸೆ,

"ಅಂತು ನಮ್ಮೂರಲ್ಲು ವಬ್ಬ ಗಿರೀಶ್ ಕಾರ್ನಾಡ ಹುಟ್ಟಿಗಂಡವ್ನನೆ ಕಣಕ್ಕ ನಮಿಗೆ ಗೊತ್ತೇಯಿರಲಿಲ್ಲ?" ಎಂದ.

"ಅವುನ್ಯಾರ್ಲ?"

"ಅವುನು ನಾಟಗ ಬರದು ಜ್ಞಾನಪೀಠ ಅವಾರ್ಡು ತಗಂಡವುನೆ ಕಣಕ್ಕ. ಸಿನುಮಾ ಆಗುಟ್ರು. ಕಾಸುಕೊಡ್ತಿವಿ ಅಂದ್ರೆ ಇಂಡಿಯಾ ದೇಸದ ಯಾವ ಸಿನುಮದಲ್ಲಾದ್ರು ಆಕ್ಟಿಂಗ್ ಮಾಡ್ತನೆ. ನಮ್ಮ ಕುವೆಂಪು ಬರದಿದ್ದ ಕಾನೂರು ಹೆಗ್ಗಡತಿ ಕಾದಂಬರಿ ಕೆಡಿಸಿ ಮೆಣಸಿಕ್ಕಿ ಮಡಗಿದ್ನಲ್ಲ ಅವುನೆಯ."

"ಅವುನ್ನ ತಂದ್ಯಾಕ್ಲ ಸೀರ ಮಾವುನಿಗೋಲುಸ್ತೀ?"

"ಅವುನು ಕಾವೇರಿ ತೀರ್ಪು ಒಪ್ಪಿಗಳಿ, ನ್ಯಾಯ ಮಂಡಳಿಗೆ ಗೌರವ ಕೊಡಬೇಕು ಅಂದವುನೆ."

"ಅವುನ್ಯಾರು ಯಳಕಂಡು ಬಾರ್ಲ ಇಲ್ಲಿ, ಯಕ್ಕತ್ತಿನ ಮ್ಯಾಲೆ ಮಿದಿತಿನಿ" ಎಂದ ಕಾಳಮಾವ.

"ಯಳಕಂಡು ಬರಕ್ಕೆ ಅವುನೇನು ಇಲ್ಲೆ ಯಾರ ಮನೆಲಾರ ಅವುತಗುಂಡಿದ್ದನೆ ದ್ವಡಪ್ಪ? ನಾರಾಯಣಗೌಡನ ಕಡಿಯೋರಿಗೆ ಹೆದರಿ ಆಗ್ಲೆ ತಮುಳನಾಡಿಗೋದ್ನೊ ಏನೋ"

"ಎಲ್ಲ್ಯಾರ ಹಾಳು ಬಿದ್ದೋಗ್ಲಿ, ಇಂತ ಅನ್ಯಾಯ ನ್ಯಡದಿರುವಾಗ್ಲು ಅಂತ ಮಾತಾಡ್ತನೆ ಅಂದ್ರೆ ಅವುನಿ ನ್ಯಾಂತಾ ದ್ರೋಯಿ ಇರಬೇಕು?"

"ಇವುನಿಗ್ಯಾಕ್ ಬೇಕಿತ್ತಪ್ಪ ಗ್ಯಾದೆಗೂಟ? ಅಂತಾ ದ್ಯಾವೇಗೌಡ್ರೆ ಅಮಿಕ್ಕಂಡು ಸುಮ್ಮನಿರುವಾಗ."

"ಅಂಗರೆ ದ್ಯಾವೇಗೌಡ ಏನೂ ಮಾತಾಡಿಲ್ಲವೆ?"

"ಇಲ್ಲ ದ್ವಡಪ್ಪ ಉಸುರೆತ್ತಿಲ್ಲ."



"ತೀರಪ ಓತ್ತ ಕುಂತಿದ್ದನಂತೆ ಕಣೊ" ಎಂದ ಉಗ್ರಿ.

"ಅವುನೆಲ್ಲೊತ್ತನೊ ಉಗ್ರಿ? ದತ್ತ ಅಂತ ಅವುನಲ್ಲ ಅವುನೋತ್ತನೆ. ಇವುನು ಕೇಳ್ತನೆ. ಮದ್ದೆ ದತ್ತ ಬಾಯಿಗೆ ಬಿಸಿಬಿಸಿ ಹುರಿಗಾಳಾಯ್ಕಂಡೋನಂಗೆ ಓತ್ತನೆ. ಸಾವುರ ಪುಟ ಓದಕ್ಕೆ ಇನ್ನು ಹತ್ತು ದಿನ ಹಿಡಿಬವುದು. ಅಲ್ಲಿಗಂಟ ದ್ಯಾವೇಗೌಡ್ರು ಏನೂ ಹೇಳಂಗೆ ಕಾಣದಿಲ್ಲ."

"ಈಗ ಯಾವನೇನೇಳಿದ್ರೆ, ಏನಾಗಂಗಿದ್ದತೊ? ಇಷ್ಟಾದ್ರು ಆ ಜಯಲಲ್ತ ಇನ್ನು ನೀರು ಬೇಕು ಅಂದವುಳಲ್ಲ ಲ್ಯಕ್ಕ ಹಾಕು."

"ನೋಡು ಮತ್ತೆ, ನೀರಗಣ್ಣು ಮುಂದೆ ಊರಾಳು ಮಾಡಿದ್ಲು ಅಂತ ಅವುಳಿಂದ್ಲೆ ಇದ್ಯಲ್ಲ ಆಗಿರಬೇಕು" ಎಂದ ಕಾಳಮಾವ.

"ಇರಬೇಕು. ಲಾಯಿರಿಗಳನ್ಯಲ್ಲ ಮನಿಗೆ ಕರ ಕಂಡೋಗಿ ಏನು ಮಾಡಿದ್ಲೊ ಏನ್ಹೇಳಿ ಕಳಿಸಿದ್ಲೋ ಅಂತು ಕರ್ನಾಟಕದ ಬಾಯಿಗೆ ಮಣ್ಣಾಕಿದ್ರು ಮುಂಡೆ ಮಕ್ಕಳು."

"ಹೆದರದ್ಯಾಕ್ಲ, ಕನ್ನಂಬಾಡಿ ಕಟ್ಟೆ ನಮ್ಮ ರಾಜ್ಯದಲ್ಲಿ... ವಾಗ ನೀರು ಬುಡಕುಲ್ಲ ಕಣ್ಲಯ್ಯ ಅದೇನು ಕಿತಗತಿ... ಕಿತಗಳಿ ಅಂದ್ರಾಯ್ತಪ್ಪ" ಎಂದು ಸೀರ ಸರಾಗವಾ... ಹೇಳಿದ.

"ಅದೂ ನಿಮ್ಮೂರ ನ್ಯಾಯಲ್ಲ ಕಣೊ ಸೀರ ಮಾ... ನಮ್ಮ ನದಿಗಳು ದೇಸಕ್ಕೆ ಸೇರಿದ್ದವಂತೆ, ಅದ್ಕೆ ದೇಸ... ಮಿಲಿಟ್ರಿ ಅಥವಾ ಪೋಲೀಸ್‌ನೋರು ಬಂದು ತೂಬ... ನೀರು ಬುಡತರೆ. ಆಗ ಏನು ಮಾಡಂಗಿದ್ದಿ ನೀನು..."

"ನಾನೇನು ಮಾಡಂಗಿದ್ದನು, ಬುಟಗಳಿ ನಿಮ್ಮವ್ವ... ಜಾತಿನ್ಯಾಡರ ಅಂತ ಸುಮ್ಮನೆ ಬತ್ತಿನಿ."

"ಒತಿಕ್ಯಾತನ್ನ ಕಂಡ್ರೆ ಹೆದರೊ ನಾಯಿ ಮೆ... ಹಿಡದತೆ, ಅಂಗೆ ನಮ್ಮ ಸೀರ ಚಿಗಪ್ಪ" ಎಂದ ವಾಟ...

"ಸೀರಮಾವುನ್ನ ಅಂಗನ್ನ ಬ್ಯಾಡ ಕಂಡ್ಯ. ಅವ್ನು... ವಡದಾಟಕು ಹೆದರದಿಲ್ಲ, ಜಗಳಕ್ಕೂ ಬಗ್ಗದಿ... ಅವುನೇನಾರ ಮಂಡೇವುದಲ್ಲೆ ಇದ್ರೆ ಈಟೊತ್ತಿಗೆ ಬೆ... ಹಚ್ಚಿರೋನು" ಎಂದಳು ಜುಮ್ಮಿ.

"ಅದೇ ಕಣಕ್ಕ ಆಗಿರೊ ತೊಂದ್ರೆ. ಇದು ಇ... ಚಳುವಳಿ, ಈ ಚಳವಳಿ... ಯಂಗೆ ಮಾಡಬೇ... ಯಾವತರ ಪೈಟ್ ಮ... ಬೇಕು ಅಂತ ತಿಳಕ... ಮಾಡಬೇಕು. ಹೋ... ಯಾರಿಗೊ ವಡದು... ಡದು, ಯಾವುದೊ ಬ... ಬೆಂಕಿ ಹಚ್ಚಿಬುಡೋ... ಇದು ನಮ್ಮ ಸೀರ ಚಿ... ನಂಥೋರ ಕ್ಯಾರಕ್ಟ... ಇಂಥೋರು ಮಂಡ್ಯ... ಜಾಸ್ತಿಯಿರೋದ್ರಿಂದ ಪ... ದಿನ ಕಾವೇರಿ ಹೋದ... ಬುಟ್ಟು ಅಂಬರೀಸ್ ರಾ... ನಾಮೆ ಕೇಳಿದ್ರು."

"ಅಂಬರೀಸ್ ರಾಜೀನಾಮೆ ಕೇಳಿದ್ರೆ?..."

"ಊ ಕಣಕ್ಕ. ಅಷ್ಟು... ಸಭೆಗೆ ಬರದು ತಡವಾಗಿರಬೌದು. ಸೆಂಟ್ರ... ಮಿನಿಸ್ಟ್ರಾದ್ದರಿಂದ ಏನೊ ತೊಂದ್ರೆಯಿರಬೌದು. ಇದು... ಯೋಚನೆ ಮಾಡದೆ ಏಕದಂ ಅಂಬರೀಶ್ ಯ... ಬಂದಿಲ್ಲ? ಅವುನು ರಾಜೀನಾಮೆ ಕೊಡಬೇಕು ಅ... ಈ ಚಳವಳಿ ಜನ ಯಂಥೋರು ನೀನೇ ಹೇಳು?..."

"ಪಾಪ ಅಂಬುರೀಸನಿಗೆ ಅಂಗ್ಯಲ್ಲ ಅನ್ನಬಾರ... ಕಂಡ್ಯ. ಅವುನು ಇವುರಂಥೋನಲ್ಲ, ವಳ್ಳೆ ಮ... ಎಂದಳು ಜುಮ್ಮಿ.

"ಏ ಅಂಬುರೀಶ್ ರಾಜೀನಾಮೆ ಕೇಳಿದೋ... ದಳದೋರು ಕಣೊ."

"ಅಂಗರೆ ದ್ಯಾವೇಗೌಡ್ರು ರಾಜೀನಾಮೆಯ ಜುಪ... ಕೇಳಬೇಕಾಯ್ತದೆ ಕಣೊ."

"ಅವುನ ರಾಜೀನಾಮೆ ತಗಂಡು ನಾನೇ... ಮಾಡ್ಲಿ?"

-ಬಿ. ಚಂದ್ರೇಗ...

ಶ್ರೀರಾಮ ಯಾರಿಗೆ ಆದರ್ಶ ಪುರುಷ?

ಒಂದು ಪತ್ರ

ಶ್ರೀರಾಮನ ಹರಾಮಿತನವನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತಿರುವ ಪೋಲಂಕಿಯವರ ಸೀತಾಯಣ ಒಂದು ವಸ್ತುನಿಷ್ಠ ಕೃತಿ ಎಂಬುದರಲ್ಲಿ ಸಂಶಯವಿಲ್ಲ. (ಎ.ಎಸ್. ಮೂರ್ತಿರಾಯರು ಒಂದೆಡೆ ರಾಮಾಯಣ ಮಹಾಭಾರತ ಪ್ರವಚನ ಮಾಡುವ ಅವರ ಹಿರಿಯರೊಬ್ಬರು ಲೋಕಾಭಿರಾಮ ಮಾತಾಡುತ್ತಿರುವಾಗ ರಾಮನನ್ನು ಕುರಿತು 'ಆತ ಮನುಷ್ಯನೇ?' ಎಂದು ಜರೆದುದನ್ನು ಒಂದೆಡೆ ಉಲ್ಲೇಖಿಸಿದ್ದರು) ಆದರೆ ಆತ ಅವತಾರ ಪುರುಷ, ದೇವರು ಎಂಬಿತ್ಯಾದಿ ತರ್ಕಗಳಡಿಯಲ್ಲಿ ನೋಡಿದರೆ ಸೀತಾಯಣ ಅಪಥ್ಯವಾಗಿ ತೋರಬಹುದಷ್ಟೇ.

'ಲಂಕೇಶ್' ಫೆ. 7 ರ ಸಂಚಿಕೆಯಲ್ಲಿ 'ವೈದಿಕರ ರಕ್ಷಣೆಗೆ ನಿಂತ ಕ್ರೂರಿ ರಾಮ' ಎಂಬ ಶೀರ್ಷಿಕೆಯಡಿ ಬಂದ ಲೇಖನ ಭಾಗದಲ್ಲಿ ರಾಮನನ್ನ ವೈದಿಕರು ವೈದಿಕತೆಯ ರಕ್ಷಣೆಗಾಗಿ ಬಳಸಿಕೊಂಡರು ಎಂಬ ವಿವರಣೆಯಿದೆ. ವಾಸ್ತವವಾಗಿ ರಾಮಾಯಣದ ಮಹತ್ವವಿರುವುದೇ ಇಲ್ಲಿ. ದಶಾವತಾರಗಳಲ್ಲಿ ಪ್ರತಿಯೊಂದಕ್ಕೂ ಒಂದು ಉದ್ದೇಶವಿರುವಂತೆ ಇಲ್ಲಿ ಮುಖ್ಯವಾಗಿ ಮನುಪ್ರಣೀತ ಧರ್ಮತತ್ವಗಳೆಲ್ಲ ಚಾಚೂತಪ್ಪದಂತೆ ಪಾಲಿಸಲ್ಪಟ್ಟಿದೆ. ಈ ಕಾರಣದಿಂದಲೇ ವೈದಿಕರಿಗೆ-ಹೆಣ್ಣನ್ನ ಅಪಹರಣ ಮಾಡಿ ತನ್ನೊಡನೆ ಇಟ್ಟುಕೊಂಡರೂ ಆಕೆಯ ಮಾನಭಂಗಕ್ಕೆ ಯತ್ನಿಸದ ಬ್ರಾಹ್ಮಣ ರಾವಣನಿಗಿಂತ ಮನು ಸಾರುವ ತತ್ವದಂತೆ ಹೊಸ್ತಿಲು ದಾಟಿದ ಸ್ತ್ರೀಗೆ ಸಾರ್ವಜನಿಕ ಅಗ್ನಿಪರೀಕ್ಷೆ ಮಾಡಿಸಿದ ನಂತರವೂ ಬಹಿಷ್ಕಾರ (ಕಾಡಿಗಟ್ಟು ಏಕೆ)ಕ್ಕೊಡ್ಡುವಂತಹ ಹೆಣ್ಣಿನ ಶೀಲಕ್ಕೆ ಪ್ರಾಮುಖ್ಯತೆ ನೀಡುವಂತಹ ಹಾಗು ವರ್ಣಾಶ್ರಮ ತತ್ವ ಕಾಪಾಡಲು ಅಮಾಯಕ ಶಂಭೂಕನ ಶಿರಚ್ಛೇದ ನಡೆಸಿ ಧರ್ಮದ ಔನ್ನತ್ಯವನ್ನ ಕಾಪಾಡಿದ ಕ್ಷತ್ರಿಯ ರಾಮನೇ ಪೂಜ್ಯನೆನೆಸಿಕೊಳ್ಳುತ್ತಾನೆ. ಪೋಲಂಕಿಯವರು ಹೇಳುವ ವೈದಿಕತೆಯ ರಕ್ಷಣೆಯೆಂದರೆ ಇದೇ ತಾನೇ?

ನಾಸ್ತಿಕರೂ ಕೆಲವೊಮ್ಮೆ ಅಯ್ಯೋ ದೇವರೆ ಅನ್ನುವುದುಂಟು, ಗಂಗಾವತಿ ಕೆಲವೆಡೆ ಸೂ.....ಮಗನೇ ಎಂದರೆ ಹೊಗಳಿಕೆಯ ಮಾತಂತೆ. ಈ ರೀತಿ ಮೂಲ ಅರ್ಥಕ್ಕೆ ಪ್ರಾಮುಖ್ಯತೆ ಇರದ ರೂಢಿಪದಗಳು ಚಾಲ್ತಿಯಲ್ಲಿರುವುದುಂಟು. ಅಂತವುಗಳಲ್ಲಿ 'ರಾಮರಾಜ್ಯ'ವೂ ಒಂದು. ವಾಸ್ತವವಾಗಿ ಇದು ವೈದಿಕರು ಯಾ ಸಂಪ್ರದಾಯವಾದಿಗಳು ಹುಟ್ಟು ಹಾಕಿದ ಪದವೇ ವಿನಃ ಜನಸಾಮಾನ್ಯರದ್ದಲ್ಲ. ಗಾಂಧಿಯಿಂದ ಹಿಡಿದು ಬೋರೇಗೌಡನವರೆಗೂ ಸರ್ವ ಸಂಪನ್ನ ಸುಖೀ ಸಾಮ್ರಾಜ್ಯ ಎಂಬರ್ಥದಲ್ಲಿ ಇದನ್ನು ಬಳಸುವರಾದರೂ ವಾಸ್ತವಾರ್ಥದಲ್ಲಿ ರಾಮರಾಜ್ಯ ಕೇವಲ ಬ್ರಾಹ್ಮಣ ವರ್ಗಕ್ಕಷ್ಟೇ ಸುಖೀ ರಾಜ್ಯ. ಯಾಕೆಂದರೆ ಸ್ತ್ರೀಯರು ಸೇರಿದಂತೆ, ಬ್ರಾಹ್ಮಣೇತರ ವರ್ಗಕ್ಕೆ ನರಕ ಸದೃಶವೆನಿಸುವ ಈ ರಾಜ್ಯದಲ್ಲಿ ಎದ್ದು ತೋರುವುದು ಮನು ಸಾರಿದ ತತ್ವದ ಪಾಲನೆ. ಆದ್ದರಿಂದ ಮಹಾರಾಣಿಯೇ ಆದರೇ... ಸ್ತ್ರೀಯಾದ ಸೀತೆಯಿಂದ ಹಿಡಿದು ಶಂಭೂಕನವ... ಧರ್ಮತತ್ವದ ನೆಪಕ್ಕೆ ಆಹುತಿಯಾಗುವ ಬಲಿಪಶುಗ... ಇದು ಯಾವ ರೀತಿ ಸುಖೀ ರಾಜ್ಯವೆಂದೆನಿಸೀತ... ರಾಮ ಹೇಗೆ ಆದರ್ಶ ಪುರುಷನೆನ್ನಿಸಿಯಾನ... (ಸಂಪ್ರದಾಯವಾದಿಗಳನ್ನು ಹೊರ... ಪಡಿಸಿ). ರಾವಣ ರಾಕ್ಷಸನಾದ... ಪ್ರೇಮಿಸಿ ಬಂದ ಹೆಣ್ಣಿನ ಕಿ... ಮೂಗು, ಸ್ತನಗಳನ್ನು ಹೆಂಡತಿಯೆ... ಹೆಣ್ಣಿನೆದುರು ಕತ್ತರಿಸಿದ ಹಾ... ವೀರನೊಬ್ಬನನ್ನು ಕದ್ದುಮುಚ್ಚಿ ಅ... ಹೊಂಚು ಹಾಕಿ ಕೊಂದ ಈ... ಮಹಾರಾಕ್ಷಸನೆನ್ನಬಹುದೇ ... ಆದರ್ಶ ಪುರುಷನೆಂದರೆ ಅದು ... ಕುಲಕ್ಕಷ್ಟೇ ಆದರ್ಶವಾಗಬಹು... ಹೊರತು ಸಾರ್ವಜನಿಕವಾಗಿ ಅಲ್ಲ.

-ರವಿ ಪುತ್ತೂ...
ದಕ್ಷಿಣ ಕನ್ನ...

ನಿಮ್ಮ ಇಷ್ಟದ ವ್ಯಕ್ತಿ?



ದೀಪಾವಳಿ ಸಂಚಿಕೆ. ಒಂದೇ ವರ್ಷದಲ್ಲಿ ಟನ್‌ಗೆ ಸುಮಾರು ನಾಲ್ಕು ಸಾವಿರ ಹೆಚ್ಚು ಕೊಟ್ಟು ಕೊಂಡ ಕಾಗದ. ನಾವು ಕನಿಷ್ಠ 50 ಸಾವಿರ ಪ್ರತಿ ಮಾರಲೇಬೇಕು. ನಮ್ಮ ಸಿಬ್ಬಂದಿಗೆ, ಸಂಪಾದಕ ವರ್ಗಕ್ಕೆ, ಏಜಂಟರಿಗೆ ಸ್ವಲ್ಪ ಹಣ ಬರಬೇಕಾದರೆ, ನಮ್ಮ ಲೇಖಕರಿಗೆ ಸರಿಯಾದ ಸಂಭಾವನೆ ಕೊಡಬೇಕಾದರೆ, ನಾನು ವೈಯಕ್ತಿಕವಾಗಿ ಪ್ರಕಾಶಕನಾಗಿ ಕೈಸುಟ್ಟುಕೊಳ್ಳದೇ ಇರಬೇಕಾದರೆ ಕನಿಷ್ಠ 50 ಸಾವಿರ ಪ್ರತಿ ಮಾರಬೇಕು. ಬೇರೆಯ 'ಅತ್ಯಂತ ಹೆಚ್ಚು ಪ್ರಸಾರದ' ದಿನಪತ್ರಿಕೆಯವರು ರೂಪಿಸುವ ದೀಪಾವಳಿ ವಿಶೇಷಾಂಕವನ್ನು ಹದಿನೈದು, ಇಪ್ಪತ್ತು ಸಾವಿರ ಅಚ್ಚು ಮಾಡುತ್ತಾರಂತೆ. ಅವರ ಸಿಬ್ಬಂದಿಯವರೇ ಇದನ್ನು ಹೇಳುತ್ತಾರೆ. ಅವರು ಕಡಿಮೆ ಅಚ್ಚು ಮಾಡಿದಷ್ಟೂ ಹೆಚ್ಚು ಲಾಭ, ಜಾಹೀರಾತುಗಳಿಂದಾಗಿ. ಅದೆಲ್ಲ ಇರಲಿ, ಪ್ರಕ್ಷುಬ್ಧತೆ, ಪಣತೊಡುವುದು, ಸಾಮಾನ್ಯವಾಗಿ ಗೆಲ್ಲುವುದು ನನ್ನ ಟಾನಿಕ್.

ಯಾರನ್ನು ಆರಿಸುವಿರಿ? ಈ ವರ್ಷದ ಮಹಿಳೆಯೆಂದು, ವರ್ಷದ ಪುರುಷನೆಂದು ಯಾರನ್ನು ನೀವು ಆರಿಸುವಿರಿ? ಮಹಿಳೆಯರು ಅವರೇ ಇದ್ದಾರೆ, ಮಾರ್ಗರೆಟ್ ಥ್ಯಾಚರ್, ಕೋರಿ ಆಕ್ವಿನೋ, ದಿವಂಗತ ಸಯದ್ ಮೋದಿಯ ಹೆಂಡತಿ ಅಮಿತಾ. ಇಲ್ಲಿ ಆರತಿ, ಮಹಾಭಾರತದಲ್ಲಿ ಮಿಂಚಲಿರುವ ಜೂಲಿ ಚಾವ್ಲಾ, ತಮಿಳುನಾಡಿನ ಜಯಲಲಿತ, ಪತನಗೊಂಡ ತಾರೆ ಪಿ.ಟಿ. ಉಷಾ... ಬೇಡ, ನನಗಂತೂ ಇವರೆಲ್ಲ ಬೇಡ. ಇಬ್ಬರು ಕಂದು ಹುಡುಗಿಯರು, ನಾದಿನಿಯರು. ಜಾಕಿ ಜಾಯ್ನರ್ ಕೆರ್ಸಿ ಮತ್ತು ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್. ಕೆರ್ಸಿಯ ಅಣ್ಣನನ್ನೇ ಮದುವೆಯಾಗಿರುವ ಗ್ರಿಫಿತ್ ಜಾಯ್ನರ್ ಸುಂದರಿ ಕೂಡ. ಈ ವರ್ಷದ ಒಲಿಂಪಿಕ್ಸ್‌ನ ಅತ್ಯಂತ ವೇಗದ ಹುಡುಗಿ. ಇದು ನನ್ನ ಸೂಚನೆಯಷ್ಟೆ. ನೀವು ತಿಳಿಸಿ.

ಗಂಡಸರು? ಪಿ.ಟಿ. ಉಷಾಳ ಮೂರ್ಖ ಟ್ರೈನರ್ ನಂಬಿಯಾರ್? ಪತನಗೊಂಡ ಒಲಿಂಪಿಕ್ಸ್ ಹೀರೋ ಬೆನ್ ಜಾನ್‌ಸನ್? ಫ್ರಾನ್ಸಿಗೆ ಮತ್ತೆ ಏಳು ವರ್ಷಕ್ಕೆ ಅಧ್ಯಕ್ಷನಾಗಿ ಆಯ್ಕೆಯಾಗಿರುವ ಸಮಾಜವಾದಿ ಮಿತೆರಾ? ರಷ್ಯಾವನ್ನು ತಳಮಟ್ಟ ಬದಲಿಸುತ್ತಿರುವ ಗರ್‌ಬಚೋವ್? ತಮ್ಮ ಜಾಣತನ, ತಂತ್ರ, ಆತ್ಮವಂಚನೆ, ಅಭಿನಯ ಚಾತುರ್ಯಕ್ಕೆ ತಾವೇ ಬಲಿಯಾದ ರಾಮಕೃಷ್ಣ ಹೆಗಡೆ?

ನಿಮಗೆ ಹೊಳೆದ ವ್ಯಕ್ತಿ ಸೂಚಿಸಿ. ಬೇಗ ಬರೆಯಿರಿ.



ಸಂಪಾದಕನ ಕೆಲಸ ವಿಚಿತ್ರವಾದದ್ದು. 'ಕರ್ನಾಟಕ ಪ್ರಗತಿ ರಂಗ'ದ ವೇದಿಕೆಯಿಂದ ಪ್ರತಿಭಟಿಸಬೇಕೆಂದು ಮಾಡಿದ್ದು "ಪತ್ರಿಕೆ"ಯಲ್ಲಿ ಪ್ರಕಟವಾಗಿಬಿಡುತ್ತದೆ; ಇವೆಲ್ಲ ಸಾಕಷ್ಟು ಕಲೆತಾಗ ಒಟ್ಟಿಗೇ ಪ್ರತಿಭಟಿಸಬೇಕೆಂದು ತೀರ್ಮಾನಿಸಿ ಹಲವು ತಾಲ್ಲೂಕುಗಳಲ್ಲಿ ಸುತ್ತಾಡಿ ಸಂಘಟಿಸುತ್ತೇನೆ. ಒಬ್ಬನೇ ತಿರುಗಾಡಿ ಬೇಸರವಾಗಿ ಸಹ-ಸಂಚಾಲಕರನ್ನು ಕರೆದೊಯ್ಯುತ್ತೇನೆ. ಅವರಲ್ಲಿ ಕ್ರಮೇಣ ಸ್ಫೂರ್ತಿ ಮೂಡುತ್ತಿದೆ.


ನಾನು ಹೇಳಬೇಕೆಂದಿದ್ದು ನಮ್ಮ ತರುಣರ ಭಗ್ನ ಕನಸುಗಳ ಬಗ್ಗೆ. ಹೋದ ಸಲ ಟಿಪ್ಪಣಿಯಲ್ಲಿ ಇದನ್ನು ಹೇಳಿದ್ದೆ. ಮತ್ತೊಮ್ಮೆ ಬರೆಯುತ್ತೇನೆ. ತರುಣರಿಗೆ 'ಮುರಿದು ಬಿದ್ದ ನನ್ನ ಮೊದಲ ಕನಸು' ಕುರಿತು ಬರೆಯಿರಿ ಎಂದು ಹೇಳಿದೆವು. ನೂರಾರು ಜನ ಬರೆದರು. ಸರ್ಕಾರಗಳು ಹೋಗುತ್ತವೆ, ಬರುತ್ತವೆ; ಆದರೆ ಎಲ್ಲ ಸರ್ಕಾರಗಳು ತಮ್ಮದೇ ವಿಚಿತ್ರ ಗದ್ದಲದಲ್ಲಿ ಗುಲಾಮಗಿರಿಯಲ್ಲಿ ಮುಳುಗಿರುತ್ತವೆ. ರಾಜಕಾರಣಿಗಳು ಅಧಿಕಾರಿಗಳ ಮಾತು ಮೀರಲಾಗದೆ, ಸ್ವಾರ್ಥ ಶ್ರೀಮಂತರ ಹಂಗಿನಿಂದ ತಪ್ಪಿಸಿಕೊಳ್ಳಲಾಗದೆ, ಏನನ್ನೂ ಮಾಡಲಾಗದ ಸಿನಿಕತನದಲ್ಲಿ ಭ್ರಷ್ಟರಾಗುತ್ತಾ ಹೋಗುತ್ತಾರೆ. ಇವರಿಗೆ ಎಳೆಯ ಜೀವಗಳ ನೋವು ತಿಳಿಯುವುದಿಲ್ಲ. ಉತ್ಸಾಹ, ಆದರ್ಶ, ಶಿಸ್ತು ಎಲ್ಲವೂ ಇರುವ ಹುಡುಗರು, ಹುಡುಗಿಯರು ತಮ್ಮೆಲ್ಲ ಕನಸುಗಳನ್ನು ಕಳೆದುಕೊಂಡು ನಿರ್ವೀರ್ಯರಾಗುತ್ತಾರೆ. ಕ್ರಮೇಣ ಜಾತಿವಾದಿಗಳೂ, ನೀಚರೂ ಆಗುತ್ತಾರೆ.

ಭಗ್ನ ಕನಸು



ಹುಡುಗರು ತಮ್ಮ ಮುರಿದ ಸ್ವಪ್ನಗಳ ಬರೆದದ್ದನ್ನೆಲ್ಲ ಓದುತ್ತ ನನ್ನ ಕಣ್ಣು ಕಟ್ಟಿಟ್ಟಿತು. ಅದೊಂದು ನಾನು ನಡೆಸಿದ ಶೀಘ್ರಮತಸಂಗ್ರಹದಂತಿತ್ತು. ಒಂದೊಂದು ಊರಲ್ಲೂ ಹತ್ತಾರು, ನೂರಾರು ಜನ ನಿಟ್ಟುಸಿರಿಡುವ ತರುಣರು. ಕಳೆದ ಐದೂವರೆ ವರ್ಷದಿಂದ ಹಲವು ಸಾವಿರ ನಿರರ್ಥಕ ಉದ್ಯೋಗ ನೀಡಿ ಭ್ರಷ್ಟರಾಗಿ ಕೂತಿರುವ ಸರ್ಕಾರ. ನಾವು ಕೂಡಲೆ ಏನನ್ನಾದರೂ ಮಾಡಬೇಕಾಗಿದೆ. ಇಲ್ಲಿ ಓದುವುದೇ ದುರಂತವಾಗುವ ಮೊದಲು, ಹುಟ್ಟುವುದೇ ಶಿಕ್ಷೆ ಎನ್ನಿಸುವ ಮೊದಲು, ಎಲ್ಲ ಆದರ್ಶಗಳನ್ನು ಕಳೆದುಕೊಂಡು ಜನ ಒಬ್ಬರನ್ನೊಬ್ಬರು ಕಿತ್ತು ತಿನ್ನುವ ಮೃಗಗಳಾಗುವ ಮೊದಲು ನಾವೆಲ್ಲರೂ ಏನನ್ನಾದರೂ ಮಾಡಬೇಕಾಗಿದೆ.

ವೈಯಕ್ತಿಕವಾಗಿ ನನ್ನ ರಾಜಕೀಯ, ಪತ್ರಕರ್ತನ ಕೆಲಸ ಮತ್ತು ಕಾವ್ಯ ಇವೆಲ್ಲ ಮಿಲನಗೊಳ್ಳುತ್ತ ನನ್ನಲ್ಲಿ ನೋವು, ಸಿಟ್ಟು ಕೆರಳುವುದು ಹೀಗೆ.



ಅಕ್ಟೋಬರ್ 16, 1988

ಎರಡು ಬಗೆಯ ಕತೆ


ಎರಡು ಸಾವಿರ ಮೊದಲ ಬಹುಮಾನ, ಒಂದು ಸಾವಿರ ಎರಡನೆ ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದೆವು. ಇದು ನಮ್ಮ ದೀಪಾವಳಿ ಸಂಚಿಕೆಗೆ ಸ್ಪರ್ಧಿಸುವ ಕತೆಗಳಿಗೆ. ನೂರಾರು ಕತೆ ಬಂದಿವೆ. ಕನ್ನಡ ಸಾಹಿತ್ಯ ಲೋಕದಲ್ಲಿ ಇದ್ದಕ್ಕಿದ್ದಂತೆ ಉತ್ಸಾಹ ತಲೆದೋರಿದಂತಿದೆ; ಈ ಉತ್ಸಾಹಕ್ಕೆ ದಿಕ್ಕು ತೋರಿಸುವುದು ವಿಮರ್ಶಕರ ಕರ್ತವ್ಯ. ಕತೆಗಳಲ್ಲಿ ಮುಖ್ಯವೆನ್ನಿಸಿದ ಸುಮಾರು ಇಪ್ಪತ್ತನ್ನು ನಮ್ಮ ಸಹಸಂಪಾದಕರು ನನಗೆ ಕೊಟ್ಟರು. ಇಡೀದಿನ ಓದಿದೆ. ಸ್ಥೂಲವಾಗಿ ಎರಡು ಗುಂಪಿನ ಕತೆಗಳಿದ್ದವು. ಒಂದು ಗುಂಪು ಕಾವ್ಯಮಯವಾಗಿ, ಮಹತ್ವಾಕಾಂಕ್ಷೆಯಿಂದ; ಮನಸ್ಸಿನ ಪದರಪದರಗಳನ್ನು ಹುಡುಕಿ ಬರೆದ ದಟ್ಟವಾದ ಕತೆಗಳು. ಇನ್ನೊಂದು ಗುಂಪಿನವು ನೇರವಾದ, ಕತೆಯ ಅಂಶ ಇಟ್ಟುಕೊಂಡು ಬೆಳೆದ ಕತೆಗಳು. ಮೊದಲನೆ ವರ್ಗದ ಸಂಕೀರ್ಣ ಕತೆಗಳು ಸಫಲವಾದಾಗ ಅರ್ಥಪೂರ್ಣ ಕೃತಿಗಳಾಗುತ್ತವೆ; ಕಾವ್ಯದ ಅಂಶವನ್ನು ಪಡೆದು ಅಪೂರ್ವ ಕೃತಿಗಳಾಗುತ್ತವೆ. ಹಾಗೆಯೇ ಈ ದಟ್ಟ, ಸಂಕೀರ್ಣ ಕತೆಗಳಲ್ಲಿ ಮೋಸ ಕೂಡ ಸಾಧ್ಯ. ಏನನ್ನೋ ಮಹತ್ವವಾದದ್ದನ್ನು ಹೇಳುವ ಧಾಟಿಯಲ್ಲೇ ಏನನ್ನೂ ಹೇಳದೆ ಓದುಗರನ್ನು ದಾರಿತಪ್ಪಿಸಿ ಗೊಂದಲದಲ್ಲಿಟ್ಟು ಸುಮ್ಮನಾಗಿಸುವುದು ಸಾಧ್ಯ. ಆದ್ದರಿಂದಲೇ ಸರಳ ಕತೆಗಳು ನನಗೆ ಇಷ್ಟ. ಇಲ್ಲಿ ಹೇಳಬೇಕಾದ ಅನುಭವದ ಬಗ್ಗೆ ಖಚಿತ ನಿಲುವಿರುತ್ತದೆ, ಅದಕ್ಕೆ ತಕ್ಕ ಭಾಷೆ ಇರುತ್ತದೆ, ಆಡಂಬರವಿಲ್ಲದ ಕಥನ ಇರುತ್ತದೆ.



ಆದರೆ ದಟ್ಟ, ಮಹತ್ವಾಕಾಂಕ್ಷೆಯ ಕೃತಿಗಳನ್ನು ತಿರಸ್ಕರಿಸುವುದು ತಪ್ಪು, ಒಂದು ವೇಳೆ ಅವು ನಿಜಕ್ಕೂ ದೊಡ್ಡ ಕೃತಿ ಆಗಿದ್ದರೆ?

ಬಹುಮಾನ ಕೊಡುವುದರಲ್ಲಿ ಪೂರ್ತಿ ನ್ಯಾಯ ಎಷ್ಟು ಕಷ್ಟ! ಪ್ರಯತ್ನಿಸೋಣ.

ಈಗಿನ ರಾಜಕಾರಣಿಗಳು ದೇಶಭಕ್ತರೆ?



ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು
ಈಗಿರುವ DCM ಎಂಟು ತಿಂಗಳ ನಂತರ CM ಆಗುವ ಗ್ಯಾರಂಟಿ ಏನು?
* ರೇವಣ್ಣ DCM ಆಗಬೇಕಲ್ಲ!

ಎಸ್. ತಾರಾನಾಥ್, ಅಚ್ಚಪ್ಪನ ಕೊಪ್ಪಲು
ಬಹುಮತ ಪಡೆದ ಮೊಟ್ಟೆ, ಸರ್ಕಾರಕ್ಕೆ ರುಚಿಸಲಿಲ್ಲವೇಕೆ?
* ಬಾಳೆಸಿಪ್ಪೆ ಮೇಲೆ ಜಾರಿದ್ದರಿಂದ.

ಅಕ್ಕಿ ಬಸವೇಶ, ಉಪನಾಯಕಹಳ್ಳಿ
ಹೆಣ್ಣು ಕಣ್ಣೀರಿಟ್ಟರೆ ಕಲ್ಲು ಕರಗಬಹುದು. ಗಂಡು ಕಣ್ಣೀರಿಟ್ಟರೆ?
* ಮಣ್ಣೂ ಕರಗುವುದಿಲ್ಲ.

ಸಬಿಯಾ ಬೇಗಂ, ದೇವದುರ್ಗ
ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ನೀಡಿಲ್ಲವೇಕೆ?
* ರೆಸಾರ್ಟ್‌ನಲ್ಲಿದ್ದರೆ ಸಾಕು. ರಾಜಕೀಯದಲ್ಲಿ ಬೇಡ ಅಂತ.

ಪಾರ್ವತಿ. ಎಂ.ಎಸ್., ಕುಮಟಾ
ನೀನು ಸಕ್ಕರೆ ಹಾಲು ಸಕ್ಕರೆ, ನೀ ಅತ್ತರೆ?
* ಆಲ್ಕೋಹಾಲು ಭಪ್ಪರೆ.

ಪಿ. ಅಣ್ಣಪ್ಪ ಪ್ರಭು, ಬೆಂಗಳೂರು
ಹೆಲ್ಮೆಟ್ ಕಡ್ಡಾಯವಾಗಿರುವಾಗ ಹುಡುಗಿಯರು ತಮ್ಮ ಬಾಯ್‌ಫ್ರೆಂಡ್ಸ್‌ನ್ನು ಹೇಗೆ ಗುರುತಿಸುತ್ತಾರೆ?
* ನೀವೆಲ್ಲಿದ್ದೀರಿ? ಕನ್‌ಫ್ಯೂಜ್ ಆದಷ್ಟೂ ಥ್ರಿಲ್ ಜಾಸ್ತಿ ಅಂತಾರೆ.

ಅಬ್ದುಲ್ ರಜಾಕ್, ದೇವದುರ್ಗ
ಹಣ್ಣಿನ ಸವಿ ಸಿಪ್ಪೆ ಒಳಗಿರುತ್ತೆ, ಹೆಣ್ಣಿನ ಸವಿ?
* ಕೆಲವು ಹಣ್ಣುಗಳನ್ನು ಸಿಪ್ಪೇ ಸಮೇತ ತಿಂತಾರಲ್ಲಾ...

ಎಸ್. ಶಶಿಧರ, ದಾವಣಗೆರೆ
ನಾಯಕ-ಖಳನಾಯಕ ಎರಡೂ ಪಾತ್ರಕ್ಕೂ ಸೈ ಎನ್ನುವ ಕುಮಾರಸ್ವಾಮಿ ಈಗ ಮಾಡುತ್ತಿರುವ ಪಾತ್ರ ಯಾವ್ದು?
* ಜೋಕರ್ ಪಾತ್ರ.

ಮಂಚಾಲಿ ಗುರುರಾಜಚಾರ್, ಬಳ್ಳಾರಿ
ನಮ್ಮ ಹಣೆ ಬರಹ ಬರೆಯುವವನು ಬ್ರಹ್ಮ, ಅಳಿಸುವವನು?
* ಒಬ್ಬ ವಿಲೇಜ್ ಅಕೌಂಟೆಂಟ್ ಸಾಕು ಅನ್ನಿಸುತ್ತೆ.

ಬಿ.ಚಂದ್ರೇಗೌಡ, ಬೆಂಗಳೂರು
ಪ್ರಚಲಿತ ರಾಜಕಾರಣದಲ್ಲಿ ಅತ್ಯುತ್ತಮ ರಾಜಕಾರಣಿ-ನಟ ಪ್ರಶಸ್ತಿಗೆ ಅರ್ಹ ವ್ಯಕ್ತಿ ಯಾರು?
* ಎರಡೂ ತನಗೇ ಬೇಕು ಅಂತ ಕೊಳ್ಳೇಗಾಲದ ಶಾಸಕ ಕಂ ನಟ ಕಂ ಸಿಂಗರ್ ಬಾಲರಾಜ್ ರಚ್ಚೆ ಹಿಡಿದಿದ್ದಾನಂತೆ.

ಅಕ್ಕಿ ಕೊಟ್ರೇಶ್, ಉಪನಾಯಕನಹಳ್ಳಿ
ಅವಳು ನನ್ನ ನೋಡಿದೊಡನೆ ನಾಚಿ ನೀರಾಗುತ್ತಾಳಲ್ಲ ಏಕೆ?
* ಹಾಗಂತ... ಹಾಲಾಗಿ ನಿನ್ನ ಲೋಟ ತುಂಬಲಿ ಅಂತ ನಿರೀಕ್ಷಿಸೋದು ಸರೀನಾ ಕೊಟ್ರೇಶು!

ದಿ.ಎಲ್. ನಾಗರಾಜ್, ಹರಪನಹಳ್ಳಿ
ಕುಮಾರಸ್ವಾಮಿ ಸಾಲ ಮನ್ನಾ ಹೇಳಿಕೆ ಪ್ರಶ್ನಾತೀತ ಎಂದಿದ್ದಾರಲ್ಲಾ?
* ಮನ್ನಾ ಆಗದಿದ್ದಾಗ 'ಹೀಗೆ ಹೇಳಿದ್ದರಲ್ಲಾ' ಎಂದ ಪ್ರಶ್ನಿಸಬೇಡಿ ಅಂತಿದ್ದಾರಷ್ಟೆ!

ಕವಿತಾ ಮಧುಸೂದನ್, ದಾವಣಗೆರೆ
ಚಳಿಗೆ ಗುಡ್‌ಬೈ ಹೇಳಲು ಮನಸ್ಸಾಗುತ್ತಿಲ್ಲವಲ್ಲ?
* ಮಧುಸೂದನ್‌ರವರು ಈ ಬೇಸಿಗೆಯಲ್ಲಾದರೂ ಕೆಲಸಕ್ಕೆ ಹೋಗಲಿ ಬಿಡಿ ಕವಿತಾರವರೇ.

ಇಂದಿರಾ ಶ್ರೀಧರ್, ದಾವಣಗೆರೆ
ಪುರುಷ RSSಗಳು ಚಡ್ಡಿ-ಲಾಠಿಗಳಿಂದ ಭೂಷಿತರಾಗಿರ್ತಾರೆ, ಸ್ತ್ರೀ RSSಗಳು?
* ಸುಷ್ಮಾ ಸ್ವರಾಜ್‌ಳ ಕಾಸಿನಗಲ ಕುಂಕುಮ ಅಥವಾ ಉಮಾಭಾರತಿಯವರ ಕಾವಿಯೇ ಭೂಷಣ ಎಂದು ತಿಳಿದಿರುತ್ತಾರೆ.

ಎಂ.ಶಿವಸ್ವಾಮಿ, ಬೆಂಗಳೂರು
ಎರಡು ದೇಹಗಳ 'ಪ್ರೀತಿ' ಸಾವು-ನೋವುಗಳ ಹುಟ್ಟಾಕಲು ಕಾರಣವೇನು?
* ಸಾವೇನೋ ಸರಿ, ನೋವು ಯಾರಿಗಪ್ಪಾ ಶಿವಸ್ವಾಮಿ.

ಬಹುಮಾನಿತ ಪ್ರಶ್ನೆ

ಎಂ.ಎಸ್.ಕಾರ್ತಿಕ್, ಕುಮಟ
ಈಗಿನ ರಾಜಕಾರಣಿಗಳು ದೇಶಭಕ್ತರೆ?
* ಅವರ ಭಕ್ತಿ ಹೆಚ್ಚಾದಷ್ಟೂ ಅವರು ಬೋಳಿಸೋದು ನಮ್ಮನ್ನೇ ಜಾಸ್ತಿ!

ಛೀ ತುಂಟಿ!

ಜನರ ಲೈಂಗಿಕ ಅಭ್ಯಾಸಗಳ ಕುರಿತು ಇತ್ತೀಚೆಗೆ ಬೆಂಗಳೂರಿನಲ್ಲಿ ಒಂದು ಸಮೀಕ್ಷೆ ನಡೆಸಲಾಯಿತು. ಅದರ ಅಂಗವಾಗಿ ಕೇಳಿದ ಪ್ರಶ್ನೆಗಳಲ್ಲಿ "ಲೈಂಗಿಕ ಕ್ರಿಯೆ ಮುಗಿದ ನಂತರ ನೀವು ಏನು ಮಾಡುತ್ತೀರಿ?" ಎಂಬುದೂ ಒಂದಾಗಿತ್ತು. ಈ ಪ್ರಶ್ನೆಗೆ ಶೇ. 25 ಜನ "ನಿದ್ದೆ ಮಾಡುತ್ತೇವೆ" ಅಂದರೆ, ಶೇ. 25 ಜನ "ಬಚ್ಚಲಿಗೆ ಹೋಗುತ್ತೇವೆ/ ಹಸಿವೆ ಆದರೆ ತಿಂದಿ ತಿನ್ನುತ್ತೇವೆ" ಎಂದು ಉತ್ತರಿಸಿದರು. ಆದರೆ ಸಮೀಕ್ಷೆಯ ಇನ್ನುಳಿದ ಶೇ. 50ರಷ್ಟು ಜನ "ಮನೆಗೆ ಹೋಗುತ್ತೇವೆ" ಎಂದು ಉತ್ತರಿಸಿದರು!



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಕಾವೇರಿ ಕಾವೇರಿದರೆ ಯಾರಿಗೆ ಲಾಭ?

ಫೆಬ್ರವರಿ 7ರ ಸಂಚಿಕೆಯ ನಮ್ಮ ಪ್ರಶ್ನೆ: ಶಿಲ್ಪಾ ಶೆಟ್ಟಿಗೆ ಆದದ್ದು ಭಾರತಕ್ಕೆ ಆದ ಅವಮಾನವೇ?


ನಿಮ್ಮ ಉತ್ತರ: ನೂರು ಕೋಟಿ ಭಾರತೀಯರ ಮಾನವನ್ನು ತೆಗೆಯುವ ತಾಕತ್ತು ಮೂರು ಕೋಟಿಗೆ ಎಲ್ಲಿಂದ ಬಂದೀತು?

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹಾಲಸ್ವಾಮಿ, ಬೆಂಗಳೂರು

ರಿವೇಂಜ್ ಕಿಲ್ಲಿಂಗ್ಸ್ 17

ರಾ. ಸೋಮನಾಥ್


ತಮ್ಮಯ್ಯನ ಕೊಲೆಯಾದ ನಂತರ ಅದಕ್ಕೆ ಏನಾದರೂ ಒಂದು ಪ್ರತೀಕಾರ ಹೇಳಲೇಬೇಕಿತ್ತಲ್ಲ; ಅದಕ್ಕೆ ಮಚ್ಚನ ಕಣ್ಣಿಗೆ ಬಿದ್ದವನೇ ಬೈಲ್ ರವಿ. ವಿಜಯನಗರದ ವೀರೇಶ್ ಥೇಟರಿಂದ ಸಿನಿಮಾ ನೋಡಿಕೊಂಡು ಹೊರಬರುತ್ತಿದ್ದ ರವಿಯನ್ನು ಮಚ್ಚ, ಕೇಬಲ್ ಗೋವಿಂದ, ಕೋಳಿ ಶಿವ, ಬೀನು, ಕಲಗಚ್ಚು ಸೀನ, ಬಾಯಿಬಡುಕ ಮತ್ತು ಪೆದ್ದಗುಂಡ ಸೇರಿಕೊಂಡು ಟಾಕೀಸ್ ಎದುರಿಗೇ ನೂರಾರು ಜನರ ಮುಂದೆ ಕೊಚ್ಚಿ ಹಾಕಿದ್ದರು! ಅದು ತನ್ನ ಗುರು ತಮ್ಮಯ್ಯನ ಹತ್ಯೆಗೆ ಮಚ್ಚನ ಮೊದಲ ರಿವೇಂಜ್ ಆಗಿತ್ತು.




ಮಚ್ಚನ ಮೊದಲ ರಿವೇಂಜ್

ಕಾಮಾಕ್ಷಿಪಾಳ್ಯದ ಗ್ಯಾಂಗ್‌ವಾರ್ ಇತಿಹಾಸದಲ್ಲಿ ಮೊದಲ ಬಲಿ ಅಂತಿದ್ದರೆ ಅದು ಬಿಜೆಪಿ ಕಾರ್ಯಕರ್ತ ಪ್ರಕಾಶನೆ. ಆಗಷ್ಟೇ ಕಾರ್ಪೊರೇಷನ್ ಚುನಾವಣೆ ಮುಗಿದಿತ್ತು. ಆತನಕ ಮಚ್ಚ ಗೋಪಾಲಯ್ಯನ ಜೊತೆಗೇ ಇದ್ದ. ಜನತಾದಳ ಸರ್ಕಾರವೇ ಇತ್ತಾದ್ದರಿಂದ ಪಾಲಿಕೆ ಚುನಾವಣೆಯಲ್ಲಿ ಗೋಪಾಲಯ್ಯನೇ ಗೆದ್ದಿದ್ದ.

ಗೆದ್ದವನಿಗೆ ಸೋತವನ ಮೇಲೆ ಹಗೆ ಇನ್ನೇಕೆ? ಆದರೆ ಗೋಪಾಲಯ್ಯನ ಜಾಯಮಾನವೇ ಬೇರೆ. ಯಾರೆಲ್ಲ ಚುನಾವಣೆಯಲ್ಲಿ ತನ್ನ ವಿರುದ್ಧ ಕೆಲಸ ಮಾಡಿದ್ದರೋ, ತನ್ನ ವಿರೋಧಿಗಳಿಗೆ ನೆರವಾಗಿದ್ದರೊ, ಅಂಥವರ ಮೇಲೆ ಜಿದ್ದಿಗೆ ಬಿದ್ದ. ಹುಡುಗರನ್ನು ಬಿಟ್ಟು ಸಿಕ್ಕಸಿಕ್ಕಲ್ಲಿ ಹೊಡೆಸುತ್ತಿದ್ದ. ಆದಕ್ಕೆಂದೇ ಗೋಪಾಲಯ್ಯನ ತಮ್ಮ ಬಸವನ ಗ್ಯಾಂಗ್ ರೌಂಡಿಂಗ್ ಶುರು ಹಚ್ಚಿಕೊಂಡಿತ್ತು. ಕೆಲವರು ಊರು ಬಿಟ್ಟರು. ಮತ್ತೆ ಕೆಲವರು ಕಾಲಿಗೆ ಬಿದ್ದು ರಾಜಿಯಾದರು. ಈ ಎರಡಕ್ಕೂ ಜಗ್ಗದೇ ಓಡಾಡಿಕೊಂಡಿದ್ದವನು ಪ್ರಕಾಶ್. ಈತ ಇದೇ ಕಾಮಾಕ್ಷಿಪಾಳ್ಯದ ಆಂಜನೇಯ ಸ್ವಾಮಿ ದೇವಾಲಯದ ಎದುರಿಗಿದ್ದ ರಾಮೇಗೌಡ ಎಂಬ ನಿರುದ್ಯೋಗಿಯ ಎರಡನೇ ಮಗ.



ಕೊಲೆಯಾದ ಪ್ರಕಾಶ



ಮಚ್ಚನ ಗುರು ತಮ್ಮಯ್ಯ

ಆಟೋ ಡ್ರೈವರ್ ಆಗಿದ್ದು ಬಿಜೆಪಿ ಕಾರ್ಯಕರ್ತನಾಗಿದ್ದ ಪ್ರಕಾಶ್ ಆ ಸಲದ ಪಾಲಿಕೆ ಚುನಾವಣೆಯಲ್ಲಿ ದಳದ ಬಂಡುಕೋರ ಅಭ್ಯರ್ಥಿಯಾಗಿದ್ದ ಮಿಲ್ಕಿ ಹನುಮಂತಯ್ಯನ ಪರವಾಗಿ ದುಡಿದಿದ್ದ. ಇದೇ ಕಾರಣಕ್ಕೆ ಒಂದೆರಡು ಬಾರಿ ಗೋಪಾಲಯ್ಯನ ಶಿಷ್ಯ ರೇಜರ್ ಸೀನ ಆತನ ಮೇಲೆ ದಾಳಿ ನಡೆಸಿದ್ದನಾದರೂ ಪ್ರಕಾಶ ಬಚಾವಾಗಿದ್ದ. ಇಷ್ಟಾಗ್ಯೂ ಆತ ಊರು ಬಿಡಲಿಲ್ಲ ಅಥವಾ ರಾಜಿಗೂ ಬರಲಿಲ್ಲ ಅಂದರೆ ಇವತ್ತಲ್ಲ ನಾಳೆ ಆತನಿಂದ ಅಪಾಯ ತಪ್ಪಿದ್ದಲ್ಲ ಎಂಬುದು ಗೋಪಾಲಯ್ಯನ ಲೆಕ್ಕಾಚಾರವಾಗಿತ್ತು.

ಅದು 1998 ರ ಜುಲೈ 31 ನೇ ತಾರೀಖು. ಕಾಮಾಕ್ಷಿಪಾಳ್ಯದ ಮುಖ್ಯ ರಸ್ತೆಯಲ್ಲಿದ್ದ ಗೋಪಾಲಯ್ಯನ ಮನೆ ಮುಂದೆ ಮಾಮೂಲಿನಂತೇ ಆತನ ಬಂಟರ ಪಡೆ ಸೇರಿತ್ತು. ಬಲಗೈ ಬಂಟನಂತಿದ್ದ ದಯಾನಂದ ಮೂರ್ತಿ, ಆತನ ಛೇಲಾ ಲಕ್ಷ್ಮಣ, ದದಿಯಾ ಮಂಜ, ಗೋಪಾಲಯ್ಯನ ತಮ್ಮ ಬಸವ, ರೌಡಿ ರೇಜರ್ ಸೀನ ಇತ್ಯಾದಿಗಳೆಲ್ಲ ಅಲ್ಲಿದ್ದರು. ಅದು ಸಂಜೆ ಐದೂವರೆಯ ಹೊತ್ತು. ಯಾವತ್ತೂ ಇಲ್ಲದಂತೆ ಅವತ್ತು ಪ್ರಕಾಶ ಸ್ಕೂಟರ್ ಒಂದರಲ್ಲಿ ಗೋಪಾಲಯ್ಯನ ಮನೆ ಎದುರಿಗೇ ಬಂದ. ಹಿಂದಿನ ಸೀಟನಲ್ಲಿ ನಾಗರಾಜ ಉರ್ಫ್ ವಾಟೆ ಕುಳಿತಿದ್ದ.

ಮೊದಲೇ ಕತ್ತಿ ಮಸೆಯುತ್ತಿದ್ದ ಗೋಪಾಲಯ್ಯನ ಗ್ಯಾಂಗಿಗೆ ಮನೆ ಮುಂದೇ ಬರುತ್ತಿದ್ದ ಪ್ರಕಾಶನನ್ನು ನೋಡಿದ್ದೇ ಇದ್ದಕ್ಕಿದ್ದಂತೆ ಹುಚ್ಚು ಕೆರಳಿ, ನೋಡು ನೋಡುತ್ತಿದ್ದಂತೆಯೇ ದದಿಯಾ ಮಂಜ, ರೇಜರ್ ಸೀನ ಮಚ್ಚೆತ್ತಿಕೊಂಡಿದ್ದೇ ಸ್ಕೂಟರಿನಲ್ಲಿ ಬರುತ್ತಿದ್ದ ಪ್ರಕಾಶನ ಮೇಲೆ ದಾಳಿ ಮಾಡಿದ್ದಾರೆ. ಅಷ್ಟರಲ್ಲೇ ಮತ್ತೊಂದು ಲಾಂಗೆತ್ತಿ ಕೊಂಡು ಬಸವ ನುಗ್ಗಿದವನೇ ಸ್ಕೂಟರ್ ಓಡಿಸುತ್ತಿದ್ದ ಪ್ರಕಾಶನ ಕುತ್ತಿಗೆಗೆ ಬೀಸಿದ್ದಾನೆ. ಬೀಸಿದ ಏಟಿಗೆ ಪ್ರಕಾಶನ ಕತ್ತು ಸೀಳಿ ಹೋಗಿದೆ. ಸ್ಕೂಟರ್ ಸಮೇತ ಇಬ್ಬರೂ ನೆಲಕ್ಕೆ ಬಿದ್ದರೆ ಮುಗಿಬಿದ್ದ ಗೋಪಾಲಯ್ಯನ ಗ್ಯಾಂಗ್ ಎಲ್ಲೆಂದರಲ್ಲಿ ಕತ್ತರಿಸಿದೆ. ಸತ್ತ ಪ್ರಕಾಶನ ಬಾಯಿಗೆ ಬಸವ ಅದೆಲ್ಲಿಂದಲೋ ಒಂದು ಹಿಡಿ ಅಕ್ಕಿ ತಂದು ತುರುಕಿದ. ಹಿಂದೆ ಕೂತಿದ್ದ ನಾಗರಾಜ್ ಅಚಾನಕ್ ಆಸ್ಪತ್ರೆ ಸೇರಿ ಬದುಕುಳಿದನಾದರೂ ಪ್ರಕಾಶ on the spot ಹೆಣವಾಗಿದ್ದ.


ಆಗ ವಿಜಯನಗರಕ್ಕೆ ಎಸಿಪಿಯಾಗಿದ್ದದ್ದು ಮಹಾನ್ ಖಡಕ್ ಬೆಂಕಿ ಮುನಿಯಪ್ಪ. ಕೊಲೆಯಲ್ಲಿ ಗೋಪಾಲಯ್ಯ ಇರದಿದ್ದರೂ ಅದಕ್ಕೆ ಆತನೇ ಕಾರಣವಾಗಿದ್ದಂತೂ ಸತ್ಯ. ಹಾಗಂಥ ಪ್ರಕಾಶನ ಮನೆಯವರೆಲ್ಲ ಗೋಪಾಲಯ್ಯನ ಹೆಸರನ್ನು ಸೇರಿಸಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು. ಆದರೆ ಕೌನ್ಸಿಲರ್ ಗೋಪಾಲಯ್ಯನ ಹೆಸರು ಮಾತ್ರ ಎಫ್‌ಐಆರ್ ಪಟ್ಟಿಯಲ್ಲಿರಲೇ ಇಲ್ಲ. ಇದು ಎಂಥಾ ಹೋರಾಟಕ್ಕೆ ಮೂಲವಾಯಿತೆಂದರೆ, ಅವತ್ತು ಸಂಸದರಾಗಿದ್ದ ಅನಂತ್‌ಕುಮಾರ್, ಬಿಜೆಪಿ ಶಾಸಕ ಸುರೇಶ್‌ಕುಮಾರ್, ರಾಮಚಂದ್ರ ಗೌಡ, ಕಾಮಾಕ್ಷಿಪಾಳ್ಯದ ಮತ್ತೊಬ್ಬ ಬಿಜೆಪಿ ಕೌನ್ಸಿಲರ್ ಕೆ. ರಂಗಣ್ಣ, ಪಾಲಿಕೆಯ ವಿರೋಧಿ ನಾಯಕ ಗಂಗಭೈರಯ್ಯ ಮುಂತಾದವರೆಲ್ಲ ನಡುರಸ್ತೆಯಲ್ಲಿ ಕೂತು ದಳ ಸರ್ಕಾರದ ವಿರುದ್ಧ ಪ್ರತಿಭಟಿಸಿದರು. ಹೋರಾಟಕ್ಕೆ ಮಣಿದೇ ಸರ್ಕಾರ ಗೋಪಾಲಯ್ಯನ ಹೆಸರನ್ನು ಎಫ್‌ಐಆರ್‌ನಲ್ಲಿ ಸೇರಿಸಿತು. ಬೆಂಗಳೂರು ಮಹಾನಗರ ಪಾಲಿಕೆಯ ಓರ್ವ ಕೌನ್ಸಿಲರ್ ಕೊಲೆ ಕೇಸಿನಲ್ಲಿ ಜೈಲಿಗೆ ಹೋಗಿದ್ದು ಅದೇ ಮೊದಲಾಗಿತ್ತು. ಆ ಹೊತ್ತಿಗಾಗಲೇ ಮಚ್ಚ ಗೋಪಾಲಯ್ಯನ ಗ್ಯಾಂಗ್‌ನಿಂದ ಸಿಡಿದು ತಿಮ್ಮೇನಹಳ್ಳಿ ತಮ್ಮಯ್ಯನ ಪಡೆಯಲ್ಲಿ ಕಾಣಿಸಿಕೊಂಡಿದ್ದ. ಯಾವತ್ತು ಪ್ರಕಾಶನ ಕೊಲೆಯಲ್ಲಿ ಗೋಪಾಲಯ್ಯನ ಜೊತೆ ಆತನ ತಮ್ಮ ಬಸವ, ರೇಜರ್ ಸೀನ, ದದಿಯಾ ಮಂಜ ಮುಂತಾದವರೆಲ್ಲ ಜೈಲು ಪಾಲಾದರೋ ಅಲ್ಲಿಗೆ ಗೋಪಾಲಯ್ಯ ಕೇವಲ ರಾಜಕಾರಣಿಯಷ್ಟೇ ಅಲ್ಲ; ಆತ ಸ್ವತಃ ಫೀಲ್ಡಿಗಿಳಿದು ಬಡಿದಾಡಬಲ್ಲ ಎಂಬುದು ಸಾಬೀತಾಗಿ ಹೋಗಿತ್ತು.

ಇದೇ ಹೊತ್ತಿಗೆ ಗೋಪಾಲಯ್ಯನ ಜೊತೆಗಿದ್ದ ಚೌಲ್ಟ್ರಿ ಬಾಲ, ಯದುಗಿರಿ, ಕಿವುಡಾ ಬಲರಾಮ ಮುಂತಾದ ಪಂಟರ್‌ಗಳನ್ನೆಲ್ಲ ಮಚ್ಚ ತನ್ನ ಗ್ಯಾಂಗಿಗೆ ಸೇರಿಸಿಕೊಂಡ. ಬರುಬರುತ್ತ ಇಡೀ ಕಾಮಾಕ್ಷಿಪಾಳ್ಯದ ಪೋರ್ಕಿಗಳು, ಪಡ್ಡೆ ಹುಡುಗರಿಗೆಲ್ಲ ಮಚ್ಚನೇ ಹೀರೋ ಆಗಿಬಿಟ್ಟಿದ್ದ. ಮೂರೇ ತಿಂಗಳಿಗೆ ಜೈಲಿಂದ ಹೊರಬಂದ ಕೌನ್ಸಿಲರ್ ಗೋಪಾಲಯ್ಯ ಸುಮ್ಮನೇ ಕೂರಲಿಲ್ಲ. ಯಾವ ತಿಮ್ಮೇನಹಳ್ಳಿ ತಮ್ಮಯ್ಯ ತನ್ನ ಕಡುವೈರಿ ಮಚ್ಚನಿಗೆ ಸಾಥು ಕೊಡುತ್ತಿದ್ದಾನೋ ಅಂಥ ತಮ್ಮಯ್ಯನಿಗೆ ಒಂದು ಗತಿ ಕಾಣಿಸಲು ಲೆಕ್ಕ ಹಾಕಿಯೇ ತಮ್ಮಯ್ಯನ ವೈರಿ ಗೋವಿಂದನ ಜೊತೆ ಕೈಜೋಡಿಸಿಬಿಟ್ಟ!

ಬಹುಶಃ ಬೆಂಗಳೂರು ಅಂಡರ್ ವರ್ಲ್ಡ್‌ನಲ್ಲಿ ಮೊದಲ ಬಾರಿಗೆ ಎರಡು ಏರಿಯಾಗಳ ಪರಸ್ಪರ ಎದುರಾಳಿ ಗ್ಯಾಂಗುಗಳು ಒಗ್ಗಟ್ಟಾಗಿ ಪರಸ್ಪರರನ್ನು ಮುಗಿಸಲು ಮುಂದಾಗಿದ್ದು ಇದೇ ಮೊದಲು.


ಗೋಪಾಲಯ್ಯ ಜೈಲಿಗೆ ಹೋಗಿ ಬಂದು ಒಂದು ವರ್ಷ ತುಂಬ ಎಂಟು ತಿಂಗಳಿಗೆ ಸರಿಯಾಗಿ ತಮ್ಮಯ್ಯನ ಹತ್ಯೆಯಾಗಿತ್ತು.

ತಮ್ಮಯ್ಯನ ಶವಸಂಸ್ಕಾರದಲ್ಲಿ ಆತನ ಚಟ್ಟಕ್ಕೆ ಹೆಗಲು ಕೊಟ್ಟ ಮಚ್ಚ ಇನ್ನೊಂದು ವರ್ಷದೊಳಗೆ ಗೋಪಾಲಯ್ಯನ್ನ ಕೊಂದೇ ತೀರ್ರೀನಿ ಎಂದು ಶಪಥಗೈದಿದ್ದು ಕೇವಲ ತಮ್ಮಯ್ಯನ ಮೇಲಿದ್ದ ಆತನ ನಿಷ್ಠೆಗಷ್ಟೇ ಆಗಿರಲಿಲ್ಲ. ಅದರಲ್ಲಿ ಆತನ ಸ್ವಾರ್ಥ ಕೂಡ ಇತ್ತು. ಅದು ತಮ್ಮಯ್ಯನ ಶಿಷ್ಯರನ್ನೆಲ್ಲ ತನ್ನ ಅಧೀನ ಕ್ಕೊಳಪಡಿಸುವುದು ಮತ್ತು ಅವರ ಬೆಂಬಲ ಪಡಕೊಂಡೇ ಗೋಪಾಲಯ್ಯನನ್ನು ಕೊಲ್ಲುವುದು!




ಬೈಲ್ ರವಿ

ಆದರೆ ಅದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಈ ಹೊತ್ತಿಗಾಗಲೇ ಗೋಪಾಲಯ್ಯನ ತಮ್ಮ ಬಸವ, ಭಾಮೈದ ಧರಣಿ ಇತ್ಯಾದಿಗಳು ಕಾಮಾಕ್ಷಿಪಾಳ್ಯದಲ್ಲಿ ಬೇರುಬಿಟ್ಟಿದ್ದರು. ಗೋವಿಂದನ ಬಂಟ ತಿಮ್ಮೇನಹಳ್ಳಿ ಸೂರಿ ಜೈಲೊಳಗಿದ್ದುಕೊಂಡೇ ದೊಡ್ಡ ಗ್ಯಾಂಗ್ ಕಟ್ಟಿಬಿಟ್ಟಿದ್ದ. ತಮ್ಮಯ್ಯನ ಹತ್ಯೆಯ ನಂತರ ಮಚ್ಚನ ಪ್ರಾಬಲ್ಯವೂ ಕುಸಿಯುತ್ತಿತ್ತು. ಅದಕ್ಕೆ ಮಚ್ಚ ಹಾಕಿದ ಮಾಸ್ಟರ್ ಪ್ಲಾನೇ ಬಯಲು ರವಿಯ ಅಮಾನುಷ ಹತ್ಯೆ! ಅಷ್ಟಕ್ಕೂ ಬೈಲು ರವಿ ಅಲಿಯಾಸ್ ರವಿಕುಮಾರ್ ಉರ್ಫ್ ವೆಲ್ಡರ್ ರವಿ ಒಂದಾನೊಂದು ಕಾಲಕ್ಕೆ ಮಚ್ಚನಿಗೆ ಪರಮಾಪ್ತನಾಗಿದ್ದವನೆ. ತಮ್ಮಯ್ಯನ ಕೊಲೆಯಾದ ಮೂರೇ ತಿಂಗಳಿಗೆ ಅಂದರೆ 2001 ರ ಜುಲೈ ಹತ್ತೊಂಬತ್ತನೇ ತಾರೀಖಿನ ಇಳಿ ಮಧ್ಯಾಹ್ನ ನಾಲ್ಕೂ ಮುಕ್ಕಾಲರ ಹೊತ್ತಿಗೆ ವಿಜಯನಗರದ ವೀರೇಶ್ ಥೇಟರಿಂದ ಸಿನಿಮಾ ನೋಡಿಕೊಂಡು ಹೊರಬರುತ್ತಿದ್ದ ರವಿಯನ್ನು ಮಚ್ಚ, ಕೇಬಲ್ ಗೋವಿಂದ, ಕೋಳಿ ಶಿವ, ಬೀನು, ಕಲಗಚ್ಚು ಸೀನ, ಬಾಯಿ ಬಡುಕ ಮತ್ತು ಪೆದ್ದಗುಂಡ ಸೇರಿಕೊಂಡು ವೀರೇಶ್ ಟಾಕೀಸ್ ಎದುರಿಗೇ ನೂರಾರು ಜನರ ಮುಂದೆ ಕೊಚ್ಚಿ ಹಾಕಿದ್ದರು!



ಗೋಪಾಲಯ್ಯ



ಕೋತಿರಾಮ

ಅದು ಗುರು ತಮ್ಮಯ್ಯನ ಹತ್ಯೆಗೆ ಮಚ್ಚನ ಗ್ಯಾಂಗ್ ಹೇಳಿದ ಮೊದಲ ಪ್ರತೀಕಾರವಾಗಿತ್ತು. ವೆಲ್ಡರ್ ರವಿಯ ಮನೆಯಿದ್ದದ್ದು ಸಣ್ಣಕ್ಕಿ ಬೈಲಿನಲ್ಲಿದ್ದ ಮಚ್ಚನ ಮನೆಯ ಹಿಂಭಾಗದಲ್ಲೇ. ಮಚ್ಚನ ಮೇಲೆ ಗೂಂಡಾಕಾಯ್ದೆ ಬಿದ್ದು ಆತ ಜೈಲಿಗೆ ಹೋದಾಗ ಕ್ಯಾನ್ಸರ್‌ಗೆ ತುತ್ತಾಗಿ ನಿರ್ಗತಿಕಳಂತೆ ನರಳುತ್ತಿದ್ದ ಆತನ ತಾಯಿ ಲಕ್ಷ್ಮಮ್ಮನಿಗೆ ಔಷಧೋಪಚಾರ ಮಾಡುತ್ತಿದ್ದದ್ದೇ ಈ ರವಿಯ ಮನೆಯವರು. ಮಚ್ಚ ಜೈಲಲ್ಲಿರುವಂತೇ ಕಾಯಿಲೆ ಬಿದ್ದಿದ್ದ ಆತನ ತಾಯಿ ತೀರಿಕೊಂಡಾಗ ಇದೇ ರವಿಯೇ ನಿಂತು ಆಕೆಯ ತಿಥಿ ಮಾಡಿದ್ದ.

ಇಂಥಾದ್ದೊಂದು ದೋಸ್ತಿ ಕಿತ್ತುಹೋದದ್ದು ಮಚ್ಚ ಗೋಪಾಲಯ್ಯನ ವಿರುದ್ಧ ತಿರುಗಿಬಿದ್ದಾಗಲೇ. ಒಂದಷ್ಟು ಕೇಬಲ್ ಆಪರೇಟರುಗಳನ್ನು ಹೆದರಿಸಿ ಗೋಪಾಲಯ್ಯನೇ ಮಚ್ಚನಿಗೆ ಕೇಬಲ್ ಕೊಡಿಸಿದ್ದ. ಜೈಲಿಂದ ಹೊರಬಂದ ಮಚ್ಚ ಗೋಪಾಲಯ್ಯನ ವಿರುದ್ಧ ತಿರುಗಿಬಿದ್ದಾಗ ಬೈಲ್ ರವಿ ಮಾತ್ರ ಹಿಂದಿನಂತೆ ಗೋಪಾಲಯ್ಯನ ಜೊತೆಗೇ ಉಳಿದುಕೊಂಡಿದ್ದ ಮತ್ತು ಅದೇ ಆತನ ಮಹಾಪ[...] ವಾಗಿತ್ತು.

ತಮ್ಮಯ್ಯನ ಕೊಲೆಯಾದ ನಂತರ ಅ[...] ಏನಾದರೂ ಒಂದು ಪ್ರತೀಕಾರ ಹೇಳಲೇಬೇಕಿ[...] ಅದಕ್ಕೆ ಮಚ್ಚನ ಕಣ್ಣಿಗೆ ಬಿದ್ದವನೇ ಬೈಲ್ ರವಿ. [...] ಹೊತ್ತಿಗೆ ಸರಿಯಾಗಿ ಬೈಲ್ ರವಿ ಮತ್ತು ಮ[...] ಆಶ್ವಿನಿ ಕೇಬಲ್ ಪಾರ್ಟ್‌ನರ್ ಗೋವಿಂದ ಎಂಬ[...] ಮಧ್ಯೆ ಕಾಮಾಕ್ಷಿಪಾಳ್ಯ[...] ಚಕ್ರಾ ಬಾರ್ ಬಳಿ ಸಣ್ಣದೊಂದು ಹೊಡೆದಾಟವಾಯಿತು[...] ಕೇಬಲ್ ಗೋವಿಂದನ[...] ಜೊತೆಗಿದ್ದ ಕೋಳಿ ಶಿವ, ಬೀನು, ಕಲಗಚ್ಚು ಮುಂತಾದವರೆಲ್ಲ ಸೇ[...] ರವಿಯ ಮೇಲೆ ಬಿದ್ದರಾದರೂ, ಮನೆ[...] ಓಡಿದ ರವಿ ಮಚ್ಚೆತ್ತಿಕೊಂಡು ಗೋವಿಂದನ ಕೈಯನ್ನ[...] ಸಿಗಿದು ಹಾಕಿದ್ದ.

ಅಲ್ಲಿಗೆ ತಮ್ಮಯ್ಯನ ಹತ್ಯೆಗೆ ಜೈಲಲ್ಲಿದ್ದ ಗೋವಿಂ[...] ಗ್ಯಾಂಗಿಗೆ ಮಾಹಿತಿ ಕೊಟ್ಟಿದ್ದ ಈ ಬೈಲು ರವಿ ಎ[...] ಮಚ್ಚ ನಿರ್ಧರಿಸಿಬಿಟ್ಟ. ಅದೇ ಹೊತ್ತಿಗೆ ಕಾಮಾಕ್ಷಿಪಾ[...] ಸಣ್ಣಕ್ಕಿ ಬೈಲು, ಸುಂಕದಕಟ್ಟೆ, ವಿನಾಯಕ ನಗರಗ[...] ಮಚ್ಚನ ಪ್ರಾಬಲ್ಯವೂ ವೃದ್ಧಿಸುತ್ತಿತ್ತು. ಇಂಥ ಅಭ[...] ಸಾಮ್ರಾಜ್ಯದಲ್ಲಿ ಮಗ್ಗಲ ಮುಳ್ಳಿನಂತೆ ತಲೆ [...] ಬೈಲು ರವಿಯನ್ನೇ ತೆಗೆದು ಬಿಡಲು ನಿರ್ಧರಿ[...] ಮಚ್ಚ ಅದಕ್ಕೆಂದು ಆಯ್ದುಕೊಂಡಿದ್ದು ತನ್ನ ಬ[...] ಬಂಟ ಪೆದ್ದಗುಂಡನನ್ನು.

2001 ರ ಜುಲೈ 19 ರ ಇಳಿ ಮಧ್ಯಾಹ್ನ ವೀ[...] ಚಿತ್ರಮಂದಿರದಲ್ಲಿ 'ಚಿತ್ರಾ' ಎಂಬ ಸಿನಿಮಾಕ್ಕೆ ಹೋ[...] ರವಿ ತನ್ನ ಜೊತೆ ಸಂಪತ್ತು ಎಂಬ ಹುಡುಗ[...] ಕರೆದೊಯ್ದಿದ್ದ. ಬಹುಶಃ ಆತನೇ ಮಚ್ಚನ ಮಾ[...] ದಾರನಾಗಿದ್ದನೇನೋ. ಸಿನಿಮಾ ನೋಡಿ ಹ[...] ಬರುತ್ತಿದ್ದಂತೆ ವೀರೇಶ್ ಚಿತ್ರಮ[...] ಬಾಗಿಲಲ್ಲೇ ಮಚ್ಚನ ಗ್ಯಾಂಗ್ ರವಿಯ[...] ಕತ್ತರಿಸಿ ಹಾಕಿತ್ತು. ಅಲ್ಲಿಗೆ ಕಾಮಾಕ್ಷಿಪಾ[...] ಇನ್ಸ್‌ಪೆಕ್ಟರ್ ಶೇಷಾದ್ರಿ ಮಚ್ಚ, ಕೆ[...] ಶಿವಾ, ಕೋತಿ ರಾಮ, ಕಲಗಚ್ಚು [...] ಬೀನು ಮುಂತಾದವರನ್ನೆಲ್ಲ ಹಿಡಿ[...] ಜೈಲಿಗೆ ಹಾಕಿದರಾದರೂ ಕಾಮಾಕ್ಷಿ[...] ದಲ್ಲಿ ಮಚ್ಚನ ಪ್ರಾಬಲ್ಯ ಮಾತ್ರ ಕಿಂಚಿ[...] ಕುಗ್ಗಲಿಲ್ಲ.

ಇದೆಲ್ಲಕ್ಕೂ ಮಿಗಿಲಾಗಿ [...] ಮತ್ತೊಂದು ಮಹತ್ತರ ದುಸ್ಸಾಹ[...] ಕೈಹಾಕಿದ್ದ. ಅದು ತಮ್ಮಯ್ಯನ ಕೊ[...] ಕೇಸಿಗೆ ಸಂಬಂಧಪಟ್ಟಂತೆ ಕೋರ್ಟಿ[...] ಕೇಸು ನಡೆಯುತ್ತಿತ್ತಲ್ಲ; ಅದರ [...] ಸಾಕ್ಷಿಗಳನ್ನೂ ಉತ್ತೇಜಿಸಿ ಯಾ[...] ತಮ್ಮಯ್ಯನ ಕೊಲೆ ಕೇಸಿನಲ್ಲಿದ್ದಾ[...] ಅಂಥವರಿಗೆ ಯಾವುದೇ ಕಾರಣಕ್ಕೂ [...] ತಪ್ಪದಂತೆ, ಕಾನೂನಿನ ಕಪಿಮುಷ್ಟಿಯಿ[...] ಅವರ್ಯಾರೂ ತಪ್ಪಿಸಿಕೊಳ್ಳದಂತೆ ಕಾಯುವ ಅಪಾಯ[...] ಕೆಲಸ.

ತಮ್ಮಯ್ಯನ ಕೊಲೆ ಕೇಸಿನಲ್ಲಿದ್ದದ್ದು ಕೇ[...] ಗೋವಿಂದನಷ್ಟೇ ಅಲ್ಲ, ಆತನ ಶಿಷ್ಯ ಸೂರಿ ಮಾ[...] ಅಲ್ಲ, ಜೇಕೆ ಕೂಡ ಆ ಕೇಸಿನ ಪ್ರಮುಖ ಆರೋ[...] ಯಾಗಿದ್ದ!

(ಮುಂದುವರೆಯು[...]

ನೀರಾವರಿಗೆ ಕಾಸು ಕೊಡದಿದ್ದರೆ ರಾಜೀನಾಮೆ ಬಿಸಾಕುತ್ತೇನೆ

ಕಾವೇರಿ ಹೋರಾಟದ ಸಭೆ ಮಂಡ್ಯದಲ್ಲಿ ನಡೆಯುತ್ತಿದ್ದಾಗ ಅಲ್ಲಿಗೆ ಅಭ್ಯಾಗತಳಾಗಿ ಬಂದ ಕನಕಪುರದ ಕೂಗುಮಾರಿ ಮುಕಳರಿಯ ಕೂಗಿದಳಂತಲ್ಲಾ, ಇದರಿಂದ ಉತ್ಸಾಹಗೊಂಡ ಮಂಡ್ಯದ ಹೈದರು ಸೀಟಿ ಹೊಡೆದು, ಚಪ್ಪಾಳೆ ತಟ್ಟಿದರಂತಲ್ಲಾ, "ನೋಡ್ರಿ ನೋಡ್ರಿ, ಎಷ್ಟು ಜೋರಾಗಿ ಕೂಗ್ತ ಅವುಳೆ ನಮ್ಮುಡುಗಿ. ಅದೇ ಮಂಡ್ಯದ ಗಂಡು ಅಂತ ಬರುದು ಮಡಿಕ್ಕಂಡಿರೊ ಅಂಬುರೀಸು ಪತ್ತೆನೆ ಇಲವಲ್ರಿ? ಎಂದು ಯಾವನೋ ಹೇಳಿದ್ದನ್ನ ಕೇಳಿಸಿಕೊಂಡ ಮಂಡ್ಯದ ಹೈದರು, ಇದ್ದಕ್ಕಿದ್ದಂತೆ ಕಾವೇರಿ ಹೋರಾಟದ ಗಂಟಲನ್ನು ಅಂಬಿ ಕಡೆಗೆ ತಿರುಗಿಸಿ "ಅಂಬಿಗೆ ಧಿಕ್ಕಾರ, ಅಂಬರೀಶನಿಗೆ ಬಹಿಸ್ಕಾರ, ಅಂಬಿ ರಾಜೀನಾಮೆ ಕೊಡಬೇಕು" ಎಂದು ಅಬ್ಬರಿಸಿದವಂತಲ್ಲಾ, ಇದರಿಂದ ಪುಳಕಿತಳಾದ ಕೂಗುಮಾರಿ "ಅಂಬಿಗೆ ಸರಿಯಾದ್ದಾಯಿತು. ನನ್ನ ಕ್ಷೇತ್ರಕ್ಕೆ ಬಂದು ಸಭೆ ಮಾಡುತ್ತ ನನ್ನನ್ನೆ ಕರೆಯದೆ ಇದ್ದುದಕ್ಕೆ ತಕ್ಕ ಶಾಸ್ತಿ ಮಾಡಿದ್ದೇನೆ" ಎಂದುಕೊಂಡು ಹೋದಳೆಂದು ಕಾಂಗೈ ಕಬವರು ಗೊಣಗುತ್ತಿದ್ದರೆ, ಇತ್ತ ದಳದ ಗಡವರು ಅಂಬಿ ರಾಜೀನಾಮೆಯಿಂದ ಇನ್ನು ಹತ್ತು ಟಿಎಂಸಿ ನೀರು ಜಾಸ್ತಿಯಾಗುತ್ತೆ ಎಂಬಂತೆ ಸಂಜೆವರೆಗೂ ಕೂಗಿದವಂತಲ್ಲಾ, ಇದನ್ನು ಕೇಳಿಸಿಕೊಂಡ ಅಂಬಿ, ಆಟದಲ್ಲಿ ಜೋಕರ್ ಕಿತ್ತು ಎಸೆಯುವಂತೆ "ಬೇಕಿದ್ರೆ ಮಂತ್ರಿಗಿರಿನೆ ಬಿಸಾಕ್ತಿನಿ" ಎಂದರಂತಲ್ಲಾ, ಥೂತ್ತೇರಿ!



* * * * * * * *

ನೀರಾವರಿಗೆ ಕೈತುಂಬ ಕಾಸು ಕೊಡದಿದ್ದರೆ ರಾಜೀನಾಮೆಯನ್ನೇ ಬಿಸಾಡುತ್ತೇನೆಂದು ಹೆಗಡೆಗೆ ಹೇಳಿ, ಅದರಂತೆ ರಾಜೀನಾಮೆಯನ್ನೆ ಕೆರೆದಿದ್ದ ಅಂದಿನ ಪಿಡಬ್ಲುಡಿ ಮಂತ್ರಿ ದೇವೇಗೌಡರು ಕಾವೇರಿ ನೀರಿನ ವಿಷಯದಲ್ಲಿ ಇನ್ನೂ ಬಾಯಿಬಿಡದಿರುವುದು ಹಲವು ಅನುಮಾನಗಳನ್ನು ಹುಟ್ಟಹಾಕಿದೆಯಂತಲ್ಲಾ, "ಅವರೀಗ ಮಾಜಿ ಪ್ರಧಾನಿಗಳು. ಈ ದೇಶದ ವಿಷಯ ಕುರಿತು ಅವರು ಮಾತನಾಡಬೇಕೆ ಹೊರತು ರಾಜ್ಯದ ಸಮಸ್ಯೆ ಕುರಿತು ಮಾತನಾಡುವಂತಿಲ್ಲ" ಎಂದು ದತ್ತನಂಥವರು ಹೇಳುತ್ತಿದ್ದರೆ, "ಗೌಡರು ದೆಹಲಿ ತಲುಪಿ ಮತ್ತೊಂದು ಆಟವನ್ನು ಆಡಲಿದ್ದಾರೆ. ಆಗ ತಮಿಳುನಾಡಿನ ಜಯಲಲಿತ, ಕರುಣಾನಿಧಿ ಇಂತಹವರ ಮನೆ ಬಾಗಿಲಿಗೂ ಹೋಗುವಂತಹ ಭಾಗ್ಯ ಬರಬಹುದು. ಆ ದೂರ ದೃಷ್ಟಿಯಿಂದ ಬಾಯಿ ಬಂದ್ ಮಾಡಿಕೊಂಡಿದ್ದಾರೆ" ಎಂದು ಕೆಲವು ಕುಹಕಿಗಳು ಆಡಿಕೊಳ್ಳುತ್ತಿದ್ದಾರಂತಲ್ಲಾ. ನಿಜಕ್ಕೂ ವಸ್ತುಸ್ಥಿತಿಯನ್ನರಿತು ಮಾತನಾಡುವ ಕೆಲವರು "ಕಾವೇರಿ ನ್ಯಾಯಮಂಡಲಿ ತೀರ್ಪು ಬರೋಬರಿ ಸಾವಿರ ಪುಟವಿದೆ. ಅದನ್ನು ಈ ವಯಸ್ಸಿನಲ್ಲಿ ಕೆ.ಎ.ಎಸ್.(KAS) ಕಟ್ಟಿದವರಂತೆ ಓದಬೇಕು. ಆದ್ದರಿಂದ ಗೌಡರು ಸಾವಧಾನವಾಗಿ ಓದಿಕೊಂಡು ಎಲ್ಲ ದನಿಯೂ ತಣ್ಣಗಾದ ಮೇಲೆ ಅದ್ವಗೋಡೆ ಅಂಚಿಗೆ ದೀಪ ಇಟ್ಟಂತೆ ಮಾತನಾಡಬಹುದು" ಎನ್ನುತ್ತಿವೆಯಲ್ಲಾ, ಥೂತ್ತೇರಿ!!

* * * * * * * *

ಊರೆಲ್ಲಾ ಉಗಾದಿ ಮಾಡಿದರೆ ಅಡ್ನಾಡಿ ಅಮಾಸೆ ಮಾಡಿತ್ತು ಎನ್ನುವ ಗಾದೆಯಂತೆ, ಗಿರೀಶ್ ಕಾರ್ನಾಡ್ ಎಂಬ ನಾಟಕಕಾರ "ನ್ಯಾಯಮಂಡಲಿ ತೀರ್ಪು ನ್ಯಾಯೋಚಿತವಾಗಿದೆ. ಇದನ್ನು ಒಪ್ಪಿಕೊಳ್ಳುವುದರಲ್ಲಿ ನಾನಂತು ಮುಂದು" ಎಂದು ಹೇಳಿ ಸಿಕ್ಕಿಬಿದ್ದಿದ್ದಾರಲ್ಲಾ. "ಈತನ ಬಾಯಿಂದ ಇಂತಹ ಮಾತು ಬರಬೇಕಾದರೆ, ಮೂಲತಃ ಈತ ರೈತನಲ್ಲ, ಇವನ ಹೆಸರಿನಲ್ಲಿ ಮೂರು ಮುಕ್ಕಾಲು ಗುಂಟೆ ಗದ್ದೆಯಿಲ್ಲ, ದನ ಮೇಸಲು ಮಾರುದ್ದ ಬದುವಿಲ್ಲ, ಅಷ್ಟಕ್ಕೂ ಈತನ ಮನೆಯಲ್ಲಿ ದನಗಳೂ ಇಲ್ಲ, ಈ ಎಲ್ಲಾ ಕಾರಣಗಳನ್ನು ಅವಲೋಕಿಸಿದರೆ, ಈತ ಬೆಳಿಗ್ಗೆ ಎದ್ದು ಬಹಿರ್ದೆಸೆ ಮಾಡಲು ಮೂರು ಚೊಂಬು ನೀರು ಬೇಕು. ಸ್ನಾನ ಮಾಡಲು ಮೂರು ಬಕೆಟ್ ನೀರು ಸಾಕು. ಕುಡಿಯಲು ಒಂದೂವರೆ ಚೊಂಬು ನೀರು ಸಾಕು. ಈ ಎಲ್ಲಾ ಲೆಕ್ಕವನ್ನಿಟ್ಟು ಆತ 270 ಟಿಎಂಸಿ ನೀರು ನಮಗೆ ಸಾಕು ಎಂದಿರಬೇಕು" ಎಂದು ಮೂಡಿಗೆರೆ ತೇಜಸ್ವಿ ಕಡೆಯವರು ಲೆಕ್ಕ ಹಾಕುತ್ತಿದ್ದಾರಂತಲ್ಲಾ, ಈ ಮಧ್ಯೆ ಗಾಂಧಿನಗರದ ಹೈದರು ಬೇರೆಯದೇ ರಾಗ ತೆಗೆದು, "ಗಿರೀಶ್ ಕಾರ್ನಾಡರಿಗೆ ತಮಿಳು ಸಿನಿಮಾದಲ್ಲಿ ಕೈತುಂಬ ಕಾಸು ಕೊಡುತ್ತಾರೆ. ಆದ್ದರಿಂದ ಅವರು ಇನ್ನೇನು ತಾನೆ ಮಾತನಾಡಬಲ್ಲರು. ಹೆಚ್ಚು ಗದರಿದರೆ ಅವರು ತಮಿಳು ನಾಡಿಗೆ ಹೋಗಿಬಿಡಬಹುದು. ಹೋಗ್ಲಿ ಬಿಡ್ರಿ" ಎಂದು ಸಿಂಪತಿ ಮಾತನಾಡುತ್ತಲೇ ಕಾರ್ನಾಡರಿಗೆ ಬೆದರಿಕೆ ಫೋನ್ ಮಾಡಿದರಂತಲ್ಲಾ, ಥೂತ್ತೇರಿ!

* * * * * * * *

ಬೆಳಗಾವಿಯಲ್ಲಿ ಜೆಡಿಎಸ್-ಬಿಜೆಪಿ ಜಂಟಿ ಸಭೆ ನಡೆಸಿ, ಅದನ್ನೆ ವಿಶ್ವಕನ್ನಡ ಸಮ್ಮೇಳನವಾಗಿ ಬಿಂಬಿಸಲು ಯತ್ನಿಸಿದ್ದ ಕೋ-ಜಾ ಸರ್ಕಾರದ ಮೇಲೆ ಕಾವೇರಿ ತಣ್ಣೀರು ಎರಚಿದಳಂತಲ್ಲಾ, ಸಾಮಾನ್ಯವಾಗಿ ಜನಾಭಿಪ್ರಾಯವಿಲ್ಲದೆ ಅಧಿಕಾರ ಹಿಡಿದ ಸರ್ಕಾರಗಳು ಜನಾಭಿಪ್ರಾಯ ರೂಪಿಸಿಕೊಳ್ಳಲು ಜನಪರ ಕಾರ್ಯಕ್ರಮಗಳನ್ನು ರೂಪಿಸುವುದರ ಬದಲು, ಸಭೆ, ಸಮಾರಂಭ, ಜನಪದ ಜಾತ್ರೆ, ವಿಶ್ವಹಿಂದೂ ವಿರಾಟ್ ಪ್ರದರ್ಶನ ಮಾಡುತ್ತವೆ. ಅಂತಹದ್ದೇ ಇನ್ನೊಂದು ಜಂಟಿ ಜಾತ್ರೆಯಾಗಿ ವಿಶ್ವಕನ್ನಡ ಮೇಳವನ್ನು ಮುಗಿಸಲು ಹೊರಟಿದ್ದವಂತಲ್ಲಾ, ಸಂತೆಗೆ



ಮೂರು ಮೊಳ ಕಂಬಳಿ ನೇಯ್ದಂತೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವಾಗಿ ಇನ್ನು ಎರಡು ತಿಂಗಳಾಗಿಲ್ಲ, ಅದರ ಬಾಕಿಗಳನ್ನು ತೀರಿಸಿಲ್ಲ ಅಷ್ಟರಲ್ಲಾಗಲೇ 15 ಕೋಟಿ ರೂ. ವೆಚ್ಚದ ವಿಶ್ವ ಕನ್ನಡ ಸಮ್ಮೇಳನ ನೆನೆಸಿಕೊಂಡರೆ ಸಂತೆ ಕಂಬಳಿಯಷ್ಟು ಜಿಡಿದಂತಾಗುತ್ತಿತ್ತು, ಈ ಕಾರ್ಯಕ್ರಮ ಮುಂದೆ ಹೋದದ್ದೇ ಒಳ್ಳೆಯದೆಂದು ನಿಜವಾದ ಕನ್ನಡಿಗರು ನಿಟ್ಟುಸಿರುಬಿಡುತ್ತಿದ್ದಾರಂತಲ್ಲಾ, ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನ ಮಾಡುವ ಮುಂಚೆ ಗಡಿಭಾಗದ ಊರುಗಳಲ್ಲಿ ಕನ್ನಡಿಗರು ಇನ್ನೂ ಕನ್ನಡಿಗರಾಗಿ ಉಳಿದಿದ್ದಾರೆಯೇ, ಉಳಿದಿರದಿದ್ದರೆ ಏನು ಮಾಡಬೇಕೆಂದು ಯೋಚಿಸಿ ಮಾಡುವುದೇ ವಿಶ್ವಕನ್ನಡ ಸಮ್ಮೇಳನದ ಮೊದಲ ಹೆಜ್ಜೆ ಎಂಬುದು ಗಡಿನಾಡು ಕನ್ನಡಿಗರ ಆಶಯವಂತಲ್ಲಾ, ಥೂತ್ತೇರಿ!!

* * * * * * * *

ಕಾವೇರಮ್ಮನ ದೆಸೆಯಿಂದಾಗಿ ಕನ್ನಡಿಗರೆಲ್ಲರೂ ಒಟ್ಟಾಗಿ ಸೇರಿ ಕೂಗು ಹಾಕಿದ್ದರಿಂದ ಹೆದರಿ ಹೋದ ವಾರ್ತಾ ಇಲಾಖೆ ಆಯುಕ್ತ ಕೆ.ವಿ.ಆರ್. ಟ್ಯಾಗೋರ್ ಎಂಬ ಅಧಿಕಾರಿ, "ಇದಕ್ಕೆಲ್ಲಾ ಪತ್ರಿಕೆಯವರೇ ಕಾರಣ. ಏನನ್ನು ಎಷ್ಟು ಬರೆಯಬೇಕೆಂಬುದನ್ನು ಈ ಪತ್ರಕರ್ತರು ಇನ್ನು ತಿಳಿದುಕೊಂಡಿಲ್ಲ, ಕೇವಲ ನೀರಿನ ಸಣ್ಣ ವಿಷಯವನ್ನು ಇಷ್ಟರ ಮಟ್ಟಿಗೆ ಪ್ರಚೋದಕವಾಗಿ ಪ್ರಕಟಿಸಬಾರದಿತ್ತು" ಎಂಬರ್ಥ ಬರುವಂತೆ ಮಾತನಾಡಿದರಂತಲ್ಲಾ, ಈ ಮೂರ್ಖನ ಹೇಳಿಕೆಗೂ ಗಿರೀಶ್ ಕಾರ್ನಾಡ್ ಎಂಬ ನಾಟಕಾಲರಾಯುಡು ಹೇಳಿಕೆಗೂ ಸಾಮ್ಯ ಗುರುತಿಸಿದ ಜನ, "ಕಾವೇರಿ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ಸರಿಯಾಗಿ ಹೇಳು" ಎಂದು ದುಂಬಾಲು ಬಿದ್ದರಂತಲ್ಲಾ, ಆಗ ಟ್ಯಾಗೂರ್ ಏನು ಹೇಳಲೂ ತೋಚದೆ "ಅದು ಜಯಲಲಿತಾ ಹೇಳಿಕೆ ಹೈಲೈಟಾಗಬೇಕಿತ್ತು ಎಂದರಂತಲ್ಲಾ, ಮೈಕ್ ಸಿಕ್ಕಿದರೆ ಸಾಕು ಎರಡು ಗಂಟೆ ಅಸಂಬದ್ಧವಾಗಿ ಕೊರೆಯುವ ಈ ಟ್ಯಾಗೋರ್ ಯಾವ ಸಂಗತಿಯನ್ನು ಎಷ್ಟು ಮಾತನಾಡಬೇಕು, ಕೇಳುತ್ತಿರುವ ಜನರ ಮಟ್ಟವೇನು, ಅಭಿರುಚಿಯೇನು ಎಂಬುದನ್ನು ಇನ್ನು ಕಲಿತುಕೊಂಡಿಲ್ಲವಂತಲ್ಲಾ, ಈತನ ಮಾತಿಗೂ, ಚೆಡ್ಡಿ ಪತ್ರಿಕೆಯೊಂದರ ನಡುಪುಟದ ನೂರೆಂಟು ಮಾತಿಗೂ ತುಂಬಾ ಸಾಮ್ಯವಿದೆಯೆಂದು ಪಂಚೆ ಪತ್ರಿಕೆಯವರು ಆಡಿಕೊಂಡು ನಕ್ಕರಂತಲ್ಲಾ, ಥೂತ್ತೇರಿ!!!

-ಯಾಹೂ




“ನಾನ್ಯಾಕೆ ರಾಜೀನಾಮೆ ಕೊಡ್ಲಿ”

ಬಳಿದಾಳೆ ಈಶ

ಮಂಡ್ಯದ ಗಂಡು ಅಂಬರೀಷ್‌ಗೆ ಗುಂಡು-ತುಂಡು ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ, ಅರ್ಥವೂ ಆಗಲ್ಲ ಅನ್ನೋದು ಈಗ ಮತ್ತೊಮ್ಮೆ ಸಾಬೀತಾಗಿದೆ.

ಕಾವೇರಿ ಟ್ರಿಬ್ಯುನಲ್‌ನ ತೀರ್ಪು ಅಸಂಬದ್ಧವಷ್ಟೇ ಅಲ್ಲ, ಕರ್ನಾಟಕದ ಪಾಲಿಗೆ ಮರಣಶಾಸನವೇ ಆಗಿದೆ ಎಂದು ಜನ ಕುದ್ದು ಹೋಗುತ್ತಿದ್ದಾರೆ. ಆದರೆ ಅಂಬಿಗೆ ಈ ತೀರ್ಪಿನ ಪರಿಣಾಮ ಎಂಥ ದುರಂತ ತರಲಿದೆ ಎಂಬುವುದರ ಅರಿವೇ ಆಗಿಲ್ಲ, ಬಹುಶಃ ಇಸ್ಪೀಟಾಟದಲ್ಲಿ ಒಂದೆರಡು ಲಕ್ಷ ರೂಪಾಯಿ ಸೋತರೆ ಏನನ್ನಿಸಬಹುದೋ ಈ ತೀರ್ಪಿನಿಂದಲೂ ಅಷ್ಟೇ ಲಾಸ್ ಎನಿಸಿರಬಹುದು ಅಂಬರೀಷ್‌ಗೆ.



ಇಷ್ಟು ಕಟು ಮಾತುಗಳನ್ನು ಈಗ ಹೇಳಬೇಕಾಗಿ ಬಂದಿರುವುದೇಕೆಂದರೆ ಕಾವೇರಿ ಟ್ರಿಬ್ಯುನಲ್‌ನ ಮಾರಕ ತೀರ್ಪು ಬಂದ ನಂತರ ಕೇಂದ್ರ ಸಚಿವ ಅಂಬರೀಷ್ ತಮ್ಮ ಎಂದಿನ ಉಡಾಫೆ ಶೈಲಿಯಲ್ಲೇ ಪ್ರತಿಕ್ರಿಯಿಸುತ್ತಿದ್ದಾರೆ.

ಟ್ರಿಬ್ಯುನಲ್ ತೀರ್ಪು ಬಂದಾಗ ಬೆಂಗಳೂರಿನಲ್ಲೇ ಇದ್ದ ಅಂಬಿ ಮೂರು ದಿನ ಕಳೆದು ಮಂಡ್ಯಾಗೆ ಬಂದರು. ದಾರಿಯಲ್ಲೇ ಮದ್ದೂರಿನಲ್ಲಿ ಜನ ಅಂಬಿ ಕಾರ್ ತಡೆದು ತಮ್ಮ ಕಳವಳ ಹೇಳಿಕೊಂಡಾಗ “ಬೇಕಾದ್ರೆ ರಾಜೀನಾಮೆ ಕೊಟ್ಟು ನಾನೂ ನಿಮ್ ಜೊತೆ ಬರ್ತೀನಿ” ಎಂದು ಬೆಣ್ಣೆ ಮಾತಾಡಿದ್ದ ಅಂಬಿಯ ವರಸೆ ಮಂಡ್ಯ ಐಬಿ ತಲುಪಿದ ನಂತರ ಬದಲಾಗಿ ಹೋಗಿತ್ತು. ತನ್ನ ಸುತ್ತಾ ನಿಂತಿದ್ದ ಕೆಲವು ಚೇಲಾಗಳ ಜೊತೆ ಹರಟುತ್ತಾ “ಈ ಬೋಳಿಮಕ್ಕಳು ನನ್ನೇ ರಾಜೀನಾಮೆ ಕೇಳ್ತಾರೆ, ಏನ್ ಮಂತ್ರಿಗಿರಿನಾ ಅವರ್ ಮನೆಯಿಂದಾ ತಂದ್ ಕೊಟ್ಟಿದ್ರಾ... ಆ?” ಎಂದು ಘಟಿಂಗ ಮಾತುಗಳನ್ನಾಡಿದ್ದಾರೆ.

ಇದು ಅಂಬರೀಷ್‌ರ ಅಸಲಿ ಮುಖ.

ಆದರೆ ಅವತ್ತೇ ಪತ್ರಿಕಾಗೋಷ್ಠಿಯಲ್ಲಿ “ಈ ತೀರ್ಪು ಗೆಜೆಟ್‌ನಲ್ಲಿ ಬರದ ಹಾಗೆ ನೋಡ್ಕೋತೀನಿ, ಪ್ರಧಾನಮಂತ್ರಿ ಜೊತೆ ಮಾತಾಡ್ತೀನಿ” ಎಂದೆಲ್ಲಾ ಡೈಲಾಗ್‌ಗಳನ್ನು ಎಸೆದಿದ್ದಾರೆ ರೆಬೆಲ್‌ಸ್ಟಾರ್ ಅಂಬಿ. ಅಂದರೆ ಕಾವೇರಿ ಹೋರಾಟದಲ್ಲಾಗಲೀ ಟ್ರಿಬ್ಯುನಲ್ ತೀರ್ಪಿನ ಬಗ್ಗೆಯಾಗಲೀ ಅಂಬರೀಷ್ ಸಾರ್ವಜನಿಕವಾಗಿ ಏನೂ ಮಾಡುವುದಿಲ್ಲ ಎಂದರ್ಥ.

ಅಂಬರೀಷ್ ಪಲಾಯನವಾದ ಇಷ್ಟಕ್ಕೇ ಮುಗಿಯುವುದಿಲ್ಲ “ಏನು ಎಲ್ಲಾ ನನ್ನೇ ರಾಜೀನಾಮೆ ಕೇಳ್ತಿದ್ದೀರಿ, ಬೇರೆ ಯಾರೂ ಇಲ್ವಾ” ಎಂದೆಲ್ಲಾ ಚೀರಿಕೊಂಡಿದ್ದೂ ಆಗಿದೆ. ಕಾವೇರಿ ಹೋರಾಟದ ನಾಯಕತ್ವ ವಹಿಸಿಕೊಳ್ಳಿ ಎಂದು ಜನ ಬೇಡಿಕೊಂಡರೆ “ಏನ್ರಿ, ಎಲ್ಲಾ ನನ್ನೇ ಕೇಳ್ತೀರಾ, ನಾನೇ ಯಾಕೆ ಆಗಬೇಕು, ಬೇರೆಯವರಿಲ್ವಾ” ಎಂದಿದ್ದೂ ಆಗಿ ಹೋಗಿದೆ.

ಇದು ಮಂಡ್ಯ ರೈತರ ಪಾಲಿನ ದುರಂತವಲ್ಲದೆ ಇನ್ನೇನು? ಬರೀ ಮಂಡ್ಯ ಏಕೆ ಇಡೀ ದಕ್ಷಿಣ ಕರ್ನಾಟಕದ ಗ್ರಾಮಾಂತರ ಹಾಗೂ ನಗರ ಪ್ರದೇಶದ ಕೋಟ್ಯಂತರ ಜನರ ಬದುಕು, ಕೃಷಿ-ಆರ್ಥಿಕತೆಗಳ ಮೇಲೆಲ್ಲಾ ದೀರ್ಘಕಾಲದ ಕೆಟ್ಟ ಪರಿಣಾಮ ಬೀರಲಿದೆ ಈ ತೀರ್ಪು. ಇಂಥ ಬಿಕ್ಕಟ್ಟಿನ ವೇಳೆಯಲ್ಲಿ ದೂರದೃಷ್ಟಿ, ಧೈರ್ಯ ಹಾಗೂ ಪ್ರಾಮಾಣಿಕತೆಯಿರುವ ಮುತ್ಸದಿಯೊಬ್ಬ ಜನ ಪ್ರತಿನಿಧಿಯಾಗಿರಬೇಕಿತ್ತು, ಆದರೇನು ಮಾಡುವುದು, ಇಸ್ಪೀಟು ರಾಜ ಅಂಬಿ ಈಗ ಮಂಡ್ಯಾ ಸಂಸದ. ಈತನಿಗೆ ಟ್ರಬಲ್ ಎಕ್ಸ್ ಸ್ಕಾಚು, ತ್ರಿಬಲ್ ಫೈವ್ ಸಿಗರೇಟು ಗೊತ್ತೇ ವಿನಃ ಟಿಎಂಸಿ ಲೆಕ್ಕಾ ಗೊತ್ತೇ ಇಲ್ಲ, ಇನ್ನೂ ಭತ್ತದ ಪೈರು, ಕುರುವೈ ಬೆಳೆಗಳ ತಿಳಿವಳಿಕೆಯಂತು ದೂರದ ಮಾತಾಯಿತು.

ಇವತ್ತಿನ ಬಿಕ್ಕಟ್ಟಿನ ಸಮಯದಲ್ಲಿ ಅಂಬಿ ಜನರ ಹಿಂದು ಕಟ್ಟಿಕೊಂಡು ರಸ್ತೆ ತಡೆದು, ರೈಲಿಗೆ ಅಡ್ಡ ನಿಂತು ದೊಂಬಿ ನಡೆಸಿಬಿಟ್ಟರೆ ಎಲ್ಲಾ ಸರಿ ಹೋಗುತ್ತಿದ್ದಂತಲ್ಲ, ಆದರೆ ಸಾರ್ವಜನಿಕರ ಪ್ರತಿರೋಧ, ಕನಿಷ್ಠ ಈಗಲಾದರೂ ವ್ಯಕ್ತವಾಗದೇ ಹೋದರೆ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಮುಂದೆಂದೂ ನ್ಯಾಯ ಸಿಗುವುದಿಲ್ಲ ಎಂಬುದೂ ಅಷ್ಟೇ ನಿಜ ತಾನೆ.

ಸುಪ್ರೀಂಕೋರ್ಟಿನಲ್ಲಿದ್ದ ಈ ವಿವಾದ ಪ್ರಧಾನಿ ವಿ.ಪಿ. ಸಿಂಗ್ ಕಾಲದಲ್ಲಿ ಕಾವೇರಿ ನ್ಯಾಯ ಮಂಡಳಿ ರಚನೆಯಾಗಿ ಅಲ್ಲಿಗೆ ವರ್ಗಾವಣೆಗೊಂಡಿತು. ಪಿ.ವಿ. ನರಸಿಂಹರಾವ್ ಕಾಲದಲ್ಲಿ 1991 ರ ಮಧ್ಯಂತರ ತೀರ್ಪು ಬಂದಿದ್ದು, ಅದು ಗೆಜೆಟ್‌ನಲ್ಲಿ ಪ್ರಕಟಗೊಂಡಿದ್ದೆಲ್ಲವೂ ಕರ್ನಾಟಕದ ಹಿತಾಸಕ್ತಿಗೆ ವಿರುದ್ಧವಾಗಿದ್ದವು. ಕಳೆದ ಹದಿನೈದು ವರ್ಷಗಳಲ್ಲಿ ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾದಾಗೆಲ್ಲಾ ತಮಿಳುನಾಡಿನ ರಾಜಕೀಯ ಪಕ್ಷಗಳು ಒತ್ತಡ ಹೇರಿ ಹೆಚ್ಚು ಲಾಭ ಮಾಡಿಕೊಂಡಿವೆ. ಆದರೆ ಈ ಯಾವ ಸಂದರ್ಭದಲ್ಲೂ ಕರ್ನಾಟಕ ಹಿತಾಸಕ್ತಿ ರಕ್ಷಿಸುವ ಕೆಲಸವನ್ನು ಯಾವ ದೊಣ್ಣೆ ನಾಯಕನೂ ಮಾಡಲಿಲ್ಲ. ಅಂಬರೀಷ್ ಕೂಡ ಇದಕ್ಕೆ ಹೊರತಲ್ಲ.

> **‘ಇವಾಗ್ ತಾನೇ ಮಿನಿಸ್ಟ್ರಾಗಿದ್ದೀನಿ ರಾಜೀನಾಮೆ ಕೊಟ್ರೆ ಏನುಪಯೋಗ!**
>
> ಅಂಬರೀಷ್
> ಕೇಂದ್ರ ವಾರ್ತಾ ಇಲಾಖೆಯ ರಾಜ್ಯ

ಮಂತ್ರಿಯಾಗಿ ಇನ್ನೇನು ಎರಡು ತಿಂಗಳಾಗುತ್ತಾ ಬಂತು. ಆದರೆ ತಮ್ಮ ಆಫೀಸ್‌ಗೆ ಎಂಟ್ರಿ ತಗೊಂಡಿದ್ದೇ ಫೆಬ್ರವರಿ 4 ನೇ ತಾರೀಖು ಎಂದರೆ ನೀವು ನಂಬಲೇಬೇಕು.

ವಾಸ್ತವವಾಗಿ ವಾರ್ತಾ ಇಲಾಖೆಯ ಸೆಕ್ರೆಟೇರಿಯೆಟ್ ಇರುವು[...] ದೆಹಲಿಯ ಶಾಸ್ತ್ರೀ ಭವನದಲ್ಲಿ, ಆದರೆ ಅಂಬಿಗೆ ಅಲ್ಲಿ ಜಾಗ ಕೊಡ[...] ಬದಲಾಗಿ ಇನ್ನೆಲ್ಲೋ ದೂರದಲ್ಲಿದ್ದ ನಿರ್ಮಾಣ್ ಭವನದಲ್ಲಿ ಒ[...] ರೂಂ ತೋರಿಸಿ ‘ಇದೇ ನಿಮ್ಮ ಆಫೀಸು’ ಎಂದಿದ್ದರು ದೆಹಲಿಯ ಉ[...] ಅಧಿಕಾರಿಗಳು. ಅಲ್ಲಿಗೆ ಹೋಗಲ್ಲ ಎಂದು ಅಂಬಿ ಹಠ ಮಾಡಿದ್ದ[...] ಕೊನೆಗೂ ತಮ್ಮ ಇಲಾಖೆಯ ಶಾಸ್ತ್ರೀ ಭವನದಲ್ಲೇ ನೂರು ಚದರಡಿ[...] ಕೂರುವ ಜಾಗ ಗಿಟ್ಟಿಸಿಕೊಳ್ಳಲು ಮಿನಿಸ್ಟರ್ ಅಂಬಿಗೇ ಎರಡು ತಿಂಗ[...] ಬೇಕಾಯಿತೆಂದರೆ ಇನ್ನೂ ಕಾವೇರಿಯ ನೂರಾರು ಟಿಎಂಸಿ ನೀರಿನ ವಿಚಾರ[...] ಅಂಬಿ ಹೋರಾಡಿ ಗೆಲ್ಲುತ್ತಾರೆಂದು ನಾವು ನಂಬಬೇಕೆ? ಅಷ್ಟು ಛ[...] ತಾಕತ್ತನ್ನು ಅಂಬಿ ತೋರುವುದೆಂತೆ.

ಇವತ್ತು ದೆಹಲಿಯಲ್ಲಿರುವ ಯಾರೇ ಕನ್ನಡ ಪತ್ರಕರ್ತರನ್ನು ‘ಅ[...] ಹೇಗೆ? ಕಾಂಗ್ರೆಸ್ ಹೈಕಮಾಂಡಿನಲ್ಲಿ ಅವರ ಮಾತಿಗೆ ಬೆಲೆ ಇದೆಯ[...] ಎಂದು ಕೇಳಿದರೆ ಅವರೆಲ್ಲಾ ಗೇಲಿ ಮಾಡಿ ನಗುತ್ತಾರೆ. ಇದುವರೆ[...] ಮೂರು ಬಾರಿ ಸಂಸತ್ತಿಗೆ ಆಯ್ಕೆಯಾಗಿದ್ದರೂ ಅಂಬಿ ಒಂದೇ ಒ[...] ದಿನವೂ ಪೂರ್ತಿ ಸಂಸತ್ ಅಧಿವೇಶನದಲ್ಲಿ ಕೂತಿದ್ದಿಲ್ಲ, ಬಾಯಿ ತೆ[...] ನಾಲ್ಕು ಮಾತಾಡಿದ ದಾಖಲೆಯಿಲ್ಲ, ಅಕಸ್ಮಾತ್ ಹಾಜರಾಗಿದ್ದರೂ ನೆ[...] ಕೆಲ ಹೊತ್ತು ಕೂತಿದ್ದು ಕಾಂಗ್ರೆ ಹಿರಿಯ ನಾಯಕರ ಕಣ್‌ತ[...] ಎಂಪಿಗಳಾಗಿರುವ ಆಂಧ್ರದ ಇನ್ನೂ ನಾಲ್ಕು ಮಂದಿ ಇಸ್ಪೀಟು ಗೆಣೇಕಾರ[...] ಕರೆದುಕೊಂಡು ಕಣ್ಮರೆಯಾಗುತ್ತಿದ್ದರು.

ದೆಹಲಿಯಲ್ಲಿ ಅಂಬರೀಷ್ ದಿನಚರಿ ಹೀಗೇ ಇರುತ್ತಿತ್ತು. ಈ ಅವಧಿಯ[...] ಅಂಬಿ ಒಂದೇ ಒಂದು ದಿನವೂ ಕಾವೇರಿ ನ್ಯಾಯಮಂಡಳಿಯೊ[...] ನಡೆಯುತ್ತಿದ್ದ ವಾದ-ವಿವಾದಗಳ ಬಗ್ಗೆ ಕೇಳಿ ತಿಳಿದುಕೊಂಡಿರಲೂ [...] ಯಾವ ತಜ್ಞರ ಜೊತೆ ಸಮಾಲೋಚಿಸಿರಲೂ ಇಲ್ಲ. ಇದು ಹೋ[...] ಅಂಬರೀಷ್ ರೈತನೂ ಅಲ್ಲ, ನೀರಾವರಿ ತಜ್ಞನೂ ಅಲ್ಲ, ಹಾಗಾಗಿ [...] ಎಲ್ಲಾ ವಿಚಾರಗಳ ಬಗ್ಗೆ ಅಕಸ್ಮಾತ್ ತಿಳಿದುಕೊಳ್ಳದೆ ಸುಮ್ಮನಾಗಿಬಿಟ್ಟ[...] ಎಂದೇ ರಿಯಾಯಿತಿ ಕೊಡೋಣವಂತೆ, ಆದರೆ ಅಂಬರೀಷ್ [...] ಸಚಿವರಾಗಿ ಎರಡು ತಿಂಗಳಾಯಿತಲ್ಲವೆ. ಮೊನ್ನೆ ಫೆಬ್ರವರಿ ಎಂಟ[...] ತಾರೀಖು ಮಂಡ್ಯಾಗೆ ಹೋದಾಗ ‘ವಾರ್ತಾ ಇಲಾಖೆ ಕೆಲಸಗ[...] ಹೇಗನ್ನಿಸುತ್ತದೆಂದು’ ಪತ್ರಕರ್ತರು ಕೇಳಿದಾಗ ಅಂಬಿ ಉತ್ತರ ಏನ[...] ಗೊತ್ತೆ?

“ನಂಗಿನ್ನೂ ಅದೇನೂಂತಲೇ ಗೊತ್ತಿಲ್ಲ, ನನಗೆ ಆಫೀಸೇ ಇರ[...] ಕೊನೆಗೆ ಆಫೀಸ್ ಸಿಕ್ತು, ಆದ್ರೆ ಯಾರೋ ‘ಈಗ ಧನುರ್ಮಾಸ, ಹೋಗಬೇ[...] ಅಂದ್ರು ಸುಮ್ನೆ ಕಾದೆ. ಆಮೇಲೆ ಚಾಮುಂಡೇಶ್ವರಿ ಬೈ ಎಲೆ[...] ಬಂತು. ಈಗ 4 ನೇ ತಾರೀಖು ತಾನೇ ಆಫೀಸ್‌ಗೆ ಕಾಲಿಟ್ಟೆ. [...] ನೋಡಿದ್ರೆ ಜನ ಇಷ್ಟು ಬೇಗ ರಾಜೀನಾಮೆ ಕೇಳಿದ್ರೆ ಎಂಗೆ” ಎನ್ನುತ್ತಿ[...] ಅಂಬಿ.

ಇದನ್ನು ಮುಗ್ಧತೆ ಎನ್ನುತ್ತೀರೋ, ಪೆದ್ದುತನ ಎನ್ನುತ್ತಿರೋ ಅ[...] ಉಡಾಫೆ ಎನ್ನುತ್ತೀರೋ ನಿಮಗೇ ಬಿಟ್ಟಿದ್ದು.

ಕೈಕೊಟ್ಟ ಮಾದೇಗೌಡ



‘ಕನ್ನಂಬಾಡಿ ಕಟ್ಟೇನಾ ರೈತ್ರು. ವಶ ಮಾಡ್ಕೋತೀವಿ. ಈ ತೀರ್ಪು ಅದು ಹೇಗೆ ಜಾರಿಯಾಗುತ್ತೋ ನೋಡೇಬಿಡ್ತೀವಿ’ ಎಂದೆಲ್ಲಾ ಮೊದಲೆರಡು ದಿನ ಹಾರಾಡಿದ ಮಾಜಿ ಸಂಸದ ಜಿ. ಮಾದೇಗೌಡ ಇವತ್ತು ಸೀನ್‌ನಲ್ಲೇ ಇಲ್ಲ, ರೈತ ಸಂಘದ ಪುಟ್ಟಣ್ಣಯ್ಯ ಹಾಗೂ ನೂರಾರು ರೈತ ಕಾರ್ಯಕರ್ತರು, ವಿವಿಧ ಪ್ರಗತಿಪರ ಸಂಘಟನೆಗಳು, ಪ್ರೊ.ಎಚ್.ಎಲ್. ಕೇಶವಮೂರ್ತಿ ಹಾಗೂ ಸಾವಿರಾರು ರೈತರು-ಸಾರ್ವಜನಿಕರು ಹೀಗೆ ಕೆಲವರನ್ನು ಹೊರತುಪಡಿಸಿದರೆ ರಾಜಕಾರಣಿಗಳ್ಯಾರೂ ಇವತ್ತು ಜನರ ಜೊತೆಯಲ್ಲಿ ಇಲ್ಲ,

ಈ ಹಿಂದಿನ ಕಾವೇರಿ ಹೋರಾಟಗಳಿಗೆ ಹೋಲಿಸಿದರೆ ಈ ಬಾರಿಯ ಚಳವಳಿಯ ಕಾವು ಕಡಿಮೆಯಾಗಿದೆ. ಇದಕ್ಕೆ ರಾಜಕೀಯ ಪಕ್ಷಗಳ ನಾಯಕರು ಮಾಡಿದ ವಂಚನೆಯೇ ಕಾರಣ ಎಂಬ ಆಕ್ರೋಶವೂ ಜನರಿಗಿದೆ. ಹಿಂದೊಮ್ಮೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಕಾವೇರಿ ಬಿಕ್ಕಟ್ಟು ತಲೆದೋರಿತ್ತು. ಅವತ್ತು ಹೋರಾಟದ ನಾಯಕತ್ವ ವಹಿಸಿದ್ದ ಜಿ. ಮಾದೇಗೌಡರು ತಮ್ಮ ಮಗ ಮಧುಗೆ ಕಿರುಗಾವಲಿನಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಪಡೆಯಲು ಇಡೀ ಚಳವಳಿಯನ್ನೇ ಒತ್ತೆ ಇಟ್ಟಿದ್ದರು. ಈಗಿನ ಜೆಡಿಎಸ್‌ನ ಸಾರಿಗೆ ಸಚಿವ ಚೆಲುವರಾಯಸ್ವಾಮಿ ಇದೇ ಮಾದೇಗೌಡರೊಂದಿಗೆ ಸೇರಿ ಕಾವೇರಿ ಪರವಾಗಿ ಪಾದಯಾತ್ರೆ ನಡೆಸಿದ್ದರು. ಆದರಿವತ್ತು ಉಸಿರು ಬಿಡುತ್ತಿಲ್ಲ.

ಒಟ್ಟಾರೆ ಸಂಸದ ಅಂಬರೀಷ್, ಹಿರಿಯ ನಾಯಕ ಮಾದೇಗೌಡ ಹಾಗು ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಇವರೆಲ್ಲರ ವರ್ತನೆ ಈಗಾಗಲೇ ಕಾವೇರಿ ಟ್ರಿಬ್ಯುನಲ್ ತೀರ್ಪನ್ನು ಒಪ್ಪಿಕೊಂಡಿರುವವರ ರೀತಿ ಇದೆಯಾಗಲಿ ‘ಅನ್ಯಾಯ’ ಎಂದು ಪ್ರತಿಭಟಿಸುವವ ರೀತಿಯಲ್ಲಿಲ್ಲ.

ಹೇಳಿಕೊಳ್ಳಲಿಕ್ಕೆ

ಇವರೆಲ್ಲಾ ಕಾವೇರಿ ತಾಯಿ ಹೆತ್ತ ಮಕ್ಕಳೇ, ಮಂಡ್ಯಾ ಜನ ಆರಿಸಿಕೊಂಡಿರುವ ಲೀಡರ್‌ಗಳೇ

‘ಕ್ವಾಟ್ರು ನಮ್ಗೆ... ಫುಲ್ ಬಾಟಲ್ ಅವರ್ಗೆ’

ಅಂಬಿಗೆ ರೇಸ್ ಪುಸ್ತಕ, ಕುದುರೆ ವಿಚಾರ, ಇಸ್ಪೀ[...] ಎಕ್ಕಾ, ಆಟೀನ್ ರಾಣಿ ಗುಲಾಮ ಎಲ್ಲಾ ಬಾಯಿಪ[...] ಆದರೆ ನೀರಾವರಿ, ಟ್ರಿಬ್ಯುನಲ್ಲು ನೀರು ಹಂಚಿಕೆ[...] ಟಿಎಂಸಿ ಲೆಕ್ಕಾಚಾರ ಗೊತ್ತಾಗಿಲ್ಲ ಎಂತಲೇ ಮಂ[...] ಜನ ಭಾವಿಸಿದ್ದಾರೆ.

ಹಳೇ ಮೈಸೂರಿನಲ್ಲಿ ಈಗ ಹುಟ್ಟಿಕೊಂಡಿರು[...] ಜೋಕ್ ಏನೆಂದರೆ ಕಾವೇರಿ ನ್ಯಾಯಮಂಡಳಿಯ ಅಂತಿ[...] ತೀರ್ಪಿನಲ್ಲಿ ಕರ್ನಾಟಕಕ್ಕೆ ಎಷ್ಟು ಅನ್ಯಾಯವಾಗಿದೆ ಎಂ[...] ಅಂಬರೀಷ್‌ಗೆ ಅರ್ಥ ಮಾಡಿಸಲು ಟಿಎಂಸಿ ತ[...] ತಾಂತ್ರಿಕ ಪದಪುಂಜಗಳ ಬದಲಾಗಿ ಬೇರೊಂದು [...] ಮಾರ್ಗ ಇದೆಯಂತೆ.

ಅದೇನೆಂದರೆ

“ಅಣ್ಣಾ ನ್ಯಾಯಮಂಡಳಿಯೋರು ಕ್ವಾಟ್ರು ನ[...] ನಮಕೊಟ್ಟು ತಮಿಳುನಾಡಿಗೆ ಫುಲ್ ಬಾಟ[...] ಕೊಟ್‌ಬುಟ್ಟವ್ರೆ’ ಎಂದು ಹೇಳಿದರೆ ಸಾಕಂತೆ!

ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು?



ಈಗಿನ ಪರಿಸ್ಥಿತಿಯನ್ನು ಗಮನಿಸಿ ನೋಡುತ್ತಿದ್ದರೆ ರಾಜ್ಯದ ಯಾವೊಬ್ಬ ರಾಜಕಾರಣಿಯಾಗಲೀ ಅಥವಾ ಪಕ್ಷವಾಗಲೀ ಕಾವೇರಿ ತೀರ್ಪಿನ ಅನ್ಯಾಯ ಪ್ರತಿಭಟಿಸುವ ಧೈರ್ಯ ಹಾಗೂ ಕಮಿಟ್‌ಮೆಂಟ್ ತೋರಿಸುವಂತೆ ಕಾಣುತ್ತಿಲ್ಲ.

ದೇವೇಗೌಡ ತಲೆ ತಪ್ಪಿಸಿಕೊಂಡಿದ್ದಾರೆ, ಕುಮಾರಸ್ವಾಮಿ ಸರ್ಕಾರಕ್ಕೆ ಈ ಬಿಕ್ಕಟ್ಟನ್ನು ಎದುರಿಸುವಷ್ಟು ಪ್ರಬುದ್ಧತೆಯಿಲ್ಲ. ಬಿಜೆಪಿಗೆ ಇದು ಬೇಕೇ ಇಲ್ಲ ಎಂಬುದು ಒಂದೆಡೆ.

ಬಳಿದಾಳೆ ಈಶ

ಮತ್ತೊಂದೆಡೆ ಕಾಂಗ್ರೆಸ್ ಲೀಡರ್‌ಗಳು ಕಳೆದ ವಾರ ಪೂರ್ತಿ ಬ್ಯುಸಿಯಾಗಿದ್ದದ್ದು ವಿಧಾನ ಪರಿಷತ್ ಹಂಗಾಮಿ ಸಭಾಪತಿ ತಿಪ್ಪಣನವರ ಎತ್ತಂಗಡಿ ಗಲಾಟೆಯಲ್ಲಿ. ಈ ಕಾಂಗ್ರೆಸ್ ಎಂಥ ನೀಚ ಪಕ್ಷವೆಂದರೆ ಕಾವೇರಿ ಮರಣಶಾಸನ ಪ್ರಕಟವಾಗಿ ಎಲ್ಲೆಡೆ ಕ್ಷೋಭೆ ಸೃಷ್ಟಿಯಾಗಿದೆ, ಜನ ಕಳವಳಪಡುತ್ತಿದ್ದಾರೆ, ಆದರೆ ಅವರಿಗೆ ತಿಪ್ಪಣ್ಣನಂತ ಬಜುಬ ರಾಜಕಾರಣಿಯ ವಿರುದ್ಧದ ಹೋರಾಟವೇ ಪ್ರಧಾನವಾಗಿ ಬಿಟ್ಟಿದೆ.



ಇನ್ನು ಕನ್ನಡ ಚಳವಳಿಯ ಹುಡುಗರು ಮತ್ತು ಅವರ ನಾಯಕ ವಾಟಾಳ್ ನಾಗರಾಜ್‌ಗೆ ಸರ್ಕಾರಿ ಪ್ರಾಯೋಜಿತ ಪ್ರತಿಭಟನೆಗಳಲ್ಲಿ ಇರುವಷ್ಟು ಆಸಕ್ತಿ ಜನಬೆಂಬಲಿತ ಚಳವಳಿಗಳ ಕಡೆಗಿಲ್ಲ. ಇವರೆಂತಹ ರಾಜೀಕೋರರೆಂದರೆ ಫೆಬ್ರವರಿ 5 ರಂದು ತೀರ್ಪು ಹೊರಬಿದ್ದ ದಿನವೇ ರಾಜ್ಯಕ್ಕಾದ ಅನ್ಯಾಯದ ಬಗ್ಗೆ ಜನರಿಗೆ ಗೊತ್ತಾಗಿತ್ತು. ಅಂದೇ ಪ್ರತಿಭಟನೆಗಳೂ ಶುರುವಾದವು. ಅದೇ ಹುಮ್ಮಸ್ಸಿನಲ್ಲಿ ಫೆಬ್ರವರಿ 8 ರಂದು 'ಕರ್ನಾಟಕ ಬಂದ್'ಗೆ ಕರೆ ನೀಡಿದ ವಾಟಾಳ್ ಒಂದೇ ದಿನದಲ್ಲೇ ನಿಲುವು ಬದಲಿಸಿ ಫೆಬ್ರವರಿ 12 ಕ್ಕೆ ಬಂದ್ ಮುಂದೂಡಿಬಿಟ್ಟರು. ಹಾಗೆ ಮಾಡುವಂತೆ ವಾಟಾಳ್‌ಗೆ ಆದೇಶಿಸಿದ್ದು ಬೇರಾರೂ ಅಲ್ಲ, ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿ.

ಅಪೀಲಿಗೆ ಬೆಲೆ ಇದೆಯಾ!



ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸುವುದಾಗಿ ಕುಮಾರಸ್ವಾಮಿ ಹೇಳುತ್ತಿದ್ದಾರೆ. ಈ ಬಗ್ಗೆ ನಡೆದ ಸರ್ವಪಕ್ಷ ಸಭೆ ಅಪೂರ್ಣವಾಗಿ ಈಗ ಮುಂದೂಡಲ್ಪಟ್ಟಿದೆ. ಮುಂದಿನ ವಾರದ ಹೊತ್ತಿಗೆ ತೀರ್ಪಿನ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ ವಿವರವಾಗಿ ಚರ್ಚಿಸುವ ಇರಾದೆ ಸರ್ಕಾರಕ್ಕಿರಬಹುದು. ಆದರೆ ಮೇಲ್ಮನವಿಯಿಂದ ಪರಿಹಾರವೇನಾದರೂ ಸಿಗಲಿದೆಯೇ ಎಂಬ ಬಗ್ಗೆ ಯಾರಿಗೂ ಗ್ಯಾರಂಟಿ ಇಲ್ಲ. ವಾಸ್ತವದಲ್ಲಿ ಅಂತರರಾಜ್ಯ ನದಿ ನೀರಿನ ತಕರಾರು ಕಾಯ್ದೆ 1956 ಕ್ಕೆ ತಂದಿರುವ ತಿದ್ದುಪಡಿ ಸಂಖ್ಯೆ 11 ರ ಪ್ರಕಾರ ಯಾವುದೇ ನ್ಯಾಯಾಧೀಕರಣದ ಅಂತಿಮ ತೀರ್ಪನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇಲ್ಲವೆಂಬುದಾಗಿದೆ. ಕರ್ನಾಟಕವು ಹೆಚ್ಚೆಂದರೆ ತೀರ್ಪಿನ ಯಾವುದಾದರೂ ಅಂಶಗಳ ಬಗ್ಗೆ ಸ್ಪಷ್ಟೀಕರಣ ಹಾಗೂ ಖಚಿತ ವ್ಯಾಖ್ಯಾನ ಕೋರಬಹುದಷ್ಟೇ. ಇಷ್ಟಕ್ಕೂ ನ್ಯಾಯಾಧೀಕಣ ರಚನೆಯಾದ 1990 ರಿಂದ 2007 ರ ವರೆಗೂ 578 ಹಿಯರಿಂಗ್‌ಗಳು ನಡೆದಿವೆ. ಆ ಯಾವ ಸಂದರ್ಭದಲ್ಲೂ ಮಂಡಿಸಲಾಗದಿದ್ದ ಹೊಸ ವಿಚಾರಗಳನ್ನು ಈಗ ಹೇಳಲು ಸಾಧ್ಯವೆ? ಹಾಗೇ ಹೇಳಬೇಕಿರುವ ಮಾತುಗಳು ಈಗಲೂ ಬಾಕಿ ಉಳಿದಿವೆ ಎನ್ನುವುದಾದರೆ ರಾಜ್ಯದ ವಕೀಲರ ತಂಡ ಇದುವರೆಗೂ ಏನು ಮಾಡುತ್ತಿತ್ತು ಎಂಬ ಪ್ರಶ್ನೆಗೆ ಯಾರಲ್ಲೂ ಉತ್ತರವಿಲ್ಲದಂತಾಗಿದೆ.


ಕೇಂದ್ರದಲ್ಲಿ ವಿ.ಪಿ. ಸಿಂಗ್ ಸರ್ಕಾರವಿದ್ದಾಗ ಕಾವೇರಿ ನ್ಯಾಯಮಂಡಳಿ ರಚನೆಗೆ ಕರ್ನಾಟಕದ ವಿರೋಧವಿತ್ತು. ಆದರೂ ಮಂಡಳಿ ರಚನೆಯಾಗಿ ವಾದ-ವಿವಾದ ಆರಂಭವಾದಾಗಿನಿಂದಲೂ ಕರ್ನಾಟಕದ ಸಿದ್ಧತೆ ತಮಿಳುನಾಡಿಗಿಂತಲೂ ಕಳಪೆಯಾಗಿತ್ತೆನ್ನಲು ಬೇಕಾದಷ್ಟು ಉದಾಹರಣೆಗಳು ಸಿಕ್ಕಿದ್ದವು.

ಇವತ್ತಿನ ಜೆಡಿಎಸ್-ಬಿಜೆಪಿ ಸರ್ಕಾರದ ಅವಧಿಯಂತೂ ನ್ಯಾಯಮಂಡಳಿಯ ಕಾರ್ಯಕಲಾಪಗಳ ದೃಷ್ಟಿಯಿಂದ ಅಮೂಲ್ಯವಾದದ್ದಾಗಿತ್ತು. ಆದರೆ ಕರ್ನಾಟಕ ಅದಕ್ಕೆ ಬೇಕಿದ್ದ ಪೂರ್ವ ತಯಾರಿ ಮಾಡಿಕೊಂಡಿರಲೇ ಇಲ್ಲ. ಬಿಜೆಪಿಯ ಈಶ್ವರಪ್ಪ ಜಲ ಸಂಪನ್ಮೂಲ ಸಚಿವರಾಗಿ ಬಂದ ಮೇಲೆ ನೀರಾವರಿ ಯೋಜನೆಗಳ ಗುತ್ತಿಗೆ ಕಾಮಗಾರಿಗಳ 'ವ್ಯವಹಾರ'ಗಳಲ್ಲಿ ಮುಳುಗಿಹೋಗಿದ್ದರೇ ವಿನಃ ಕಾವೇರಿ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಇದನ್ನು

(ಮುಂದಿನ ಪುಟಕ್ಕೆ)

ವೆಂಕಯ್ಯ ನಾಯ್ಡು ನಿಲುವು ಏನು?

ಬಿಜೆಪಿಯ ವೆಂಕಯ್ಯನಾಯ್ಡು ಇರಲಿ ಅಥವಾ ಬಿಜೆಪಿ-ಜೆಡಿಎಸ್ ಬೆಂಬಲದಿಂದ ರಾಜ್ಯಸಭಾ ಸೀಟು ಖರೀದಿಸಿ ಸಂಸದರಾಗಿರುವ ವಿಜಯ್ ಮಲ್ಯ, ಎ.ವಿ.ಎಂ. ರಾಮಸ್ವಾಮಿ ಹಾಗೂ ರಾಜೀವ್ ಚಂದ್ರಶೇಖರ್ ಇವರೆಲ್ಲಾ ಕರ್ನಾಟಕದ ಪ್ರತಿನಿಧಿಗಳು. ಆದರೆ ಇವರ ಜನ್ಮದಲ್ಲೇ ಒಂದೇ ಒಂದು ಸಾರಿಯಾದರೂ ರಾಜ್ಯದ ಬೇಕು ಬೇಡಗಳ ಬಗ್ಗೆ ದನಿ ಎತ್ತಿದವರಲ್ಲ, ಈಗ ಕಾವೇರಿ ವಿಚಾರದಲ್ಲೂ ಆಗುವುದು ಹೀಗೇನೆ.



ಕುದುರೆರೇಸಿನ ಮಲ್ಯ ಒಬ್ಬ ಉಡಾಫೆಯ ವ್ಯಕ್ತಿ. ಎ.ವಿ.ಎಂ. ರಾಮಸ್ವಾಮಿಗೆ ತನ್ನ ಕುದುರೆ ವ್ಯವಹಾರಗಳು ಮುಖ್ಯವೇ ವಿನಃ ಕರ್ನಾಟಕವಿರಲಿ ತಮಿಳುನಾಡಿನ ಬಗ್ಗೆಯೂ ತಲೆ ಕೆಡಿಸಿಕೊಳ್ಳುವವನಲ್ಲ. ಇವನ ಹತ್ತಿರ ಹಣದ ಭಿಕ್ಷೆ ಪಡೆದು ರಾಜ್ಯಸಭೆಗೆ ಕಳಿಸಿದ್ದು ಮಣ್ಣಿನ ಮಗ ದೇವೇಗೌಡ. ಅವತ್ತೇ ಗೌಡರ ಈ ಸೀಟು ಮಾರಾಟದ ಬಗ್ಗೆ ಗಲಾಟೆಗಳಾಗಿದ್ದವು. ಆದರೆ ಭಂಡತನದ ಪರಮಾವಧಿ ತಲುಪಿದ್ದ ದೇವೇಗೌಡ ಬದಲಾಗಲಿಲ್ಲ. ಬಿಜೆಪಿಯೊಂದಿಗೆ ವ್ಯವಹಾರ ಕುದುರಿಸಿ ಕೇರಳದ ಕೋಟ್ಯಾಧೀಶ ವ್ಯಾಪಾರಿ ರಾಜೀವ್ ಚಂದ್ರಶೇಖರ್ ಹತ್ತಿರವೂ ಹಣ ಪಡೆದು ಕರ್ನಾಟಕದಿಂದಲೇ ರಾಜ್ಯಸಭೆಗೆ ಕಳಿಸಿಕೊಟ್ಟಿದ್ದಾರೆ.

ಇವರಲ್ಲಿ ಯಾವನೂ ಇವತ್ತಿನ ಕರ್ನಾಟಕದ ಬಿಕ್ಕಟ್ಟಿನ ಸನ್ನಿವೇಶದಲ್ಲಿ ನಮ್ಮೊಂದಿಗಿಲ್ಲ. ಗೌಡರು ಇದರಿಂದ ಯಾವ ಪುರುಷಾರ್ಥ ಸಾಧಿಸಿದರು... ಕಾಸು ಮಾಡಿಕೊಂಡಿದ್ದು ಬಿಟ್ಟರೆ! ಇನ್ನು ಬಿಜೆಪಿಯ ವೆಂಕಯ್ಯ ನಾಯ್ಡುಗೆ ಸಹ ಸಂಸದನಾಗಲು ಕರ್ನಾಟಕವೇ ಬೇಕಾಗಿತ್ತು. ಹಾಗೆ ನಮ್ಮಿಂದ ಆರಿಸಿಹೋದವನ ನಿಷ್ಠೆ ಈ ರಾಜ್ಯಕ್ಕೇ ಇರಬೇಕಿತ್ತಲ್ಲವೆ?

ಎಲ್ಲಿದ್ದಾನೆ ವೆಂಕಯ್ಯ ನಾಯ್ಡು?

ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾಗಿ ಹೋಗಿರುವ ವರಿಗೆ ಕಾಂಗ್ರೆಸ್, ಬಿಜೆಪಿ, ದಳಗಳೆಂಬ ರಾಜಕೀಯ ಪಾರ್ಟಿಯ ಒಳಲೆಕ್ಕಾಚಾರಗಳಿರುತ್ತವೆ. ಮತ್ತಾವುದೋ ಪಕ್ಷದೊಂದಿಗೆ ಮೈತ್ರಿ ಕೂಟ, ಇನ್ನಾರದ್ದೋ ಮುಲಾಜುಗಳಿರುತ್ತವೆ. ಹೈಕಮಾಂಡಿನ ಅಂಕುಶಗಳಿರುತ್ತವೆ. ಹಾಗಾಗಿ ಜನ ಬಿಗಿ ಮಾಡಿದರೆ ಮಾತ್ರ ಇವರು ಬಾಯಿ ಬಿಡಬಲ್ಲರೇ ಹೊರತು ತಾವಾಗೇ ಇವರೆಂದೂ ದನಿ ಎತ್ತಲಾರರು.

ಆದರೆ ರಾಜ್ಯಸಭೆಗೆ ಪಕ್ಷಾತೀತ ಜನ ಆರಿಸಿ ಹೋಗಿದಿದ್ದರೆ ಕನಿಷ್ಠ ರಾಜ್ಯದ ಪರವಾಗಿ ಮುಲಾಜಿಲ್ಲದೆ ಮಾತಾಡುವರಾದರೂ ಸಿಕ್ಕಿರುತ್ತಿದ್ದರೇನೋ.

ದೇವೇಗೌಡ ಹಾಗೂ ಚೆಡ್ಡಿಗಳು ಇಲ್ಲೂ ಕರ್ನಾಟಕಕ್ಕೆ ವಂಚಿಸಿದ್ದಾರೆ.

ಐತೀರ್ಪಲ್ಲ, ಐಲುಪೈಲು ತೀರ್ಪು

ಪರಿಸರ ಸಂರಕ್ಷಣೆಗೆಂದು-ಅಂದರೆ ಕಾವೇರಿ ನದಿ ಸದಾ ಜೀವನದಿಯಾಗಿ ಹರಿಯುತ್ತಾ ಜಲಚರಗಳ ರಕ್ಷಣೆಗೆ ಅನುವಾಗುವಂತೆ-10 ಟಿಎಂಸಿ ನೀರು ಹರಿಸಬೇಕೆಂದು ಟ್ರಿಬ್ಯುನಲ್ ಆದೇಶಿಸಿದೆ.

ವಿಪರ್ಯಾಸವೆಂದರೆ ಈ ನೀರನ್ನೂ ಕರ್ನಾಟಕವೇ ಹರಿಸಬೇಕಿದೆ.

ನದಿ ನೀರಿನ ಪರಿಸರ ರಕ್ಷಣೆಯ ವಿಚಾರವನ್ನು ಕೊನೆಗಳಿಗೆಯಲ್ಲಿ ನ್ಯಾಯಮಂಡಳಿ ಮುಂದೆ ಮಂಡಿಸಿದ ತಮಿಳುನಾಡು ವಕೀಲರು ಅದಕ್ಕೆ ಕರ್ನಾಟಕವನ್ನು ಮಾತ್ರ ಜವಾಬ್ದಾರರನ್ನಾಗಿಸಿದ್ದಾರೆ. ಕೊನೆಗೆ ಟ್ರಿಬ್ಯುನಲ್ ಕೂಡ ಅದನ್ನೇ ಒಪ್ಪಿಕೊಂಡಿದೆ. ಯಾಕೆ, ಕಾವೇರಿಯನ್ನು ಜೀವಂತ ನದಿಯಾಗಿ ಉಳಿಸಲು ತಮಿಳುನಾಡಿನದೂ ಜವಾಬ್ದಾರಿಯಿಲ್ಲವೆ? ಈ ಐತೀರ್ಪು ಐಲುಪೈಲು ತೀರ್ಪೆನ್ನಲು ಇದು ಮೊದಲ ಉದಾಹರಣೆ.

ಈಗ ಬೆಂಗಳೂರು ನಗರ ಗ್ರೇಟರ್ ಬೆಂಗಳೂರು ಆಗಿದೆ. ರಾಜ್ಯದ ವಕೀಲರು ಬೆಂಗಳೂರು ಸೇರಿದಂತೆ ಕಾವೇರಿ ಕಣಿವೆಯ ಗ್ರಾಮಾಂತರ ಹಾಗೂ ನಗರ-ಪಟ್ಟಣಗಳ ಕುಡಿಯುವ ನೀರಿನ ಬೇಡಿಕೆ 30 ಟಿಎಂಸಿ ಎಂದು ಕೇಳಿದ್ದರು. ಇದು 2025 ರವರೆಗಿನ ನಗರ ಜನಸಂಖ್ಯೆ ಬೆಳವಣಿಗೆ ಆಧಾರದಲ್ಲಿ ಮಂಡಿಸಿದ್ದ ವಾದವಾಗಿತ್ತು. ಹಾಗೆ ನೋಡಿದರೆ 1990 ರಲ್ಲೇ ಕರ್ನಾಟಕ ಈ ಉದ್ದೇಶಕ್ಕಾಗಿ 14.52 ಟಿಎಂಸಿ ನೀರು ನಿಗದಿಗೆ ಒತ್ತಾಯಿಸಿತ್ತು.

ಈಗ ಐತೀರ್ಪು ಬಂದಿದೆ. ಕುಡಿಯುವ ನೀರಿಗೆ ಟ್ರಿಬ್ಯುನಲ್ [illegible] ನೀಡಿರುವುದು ಕೇವಲ 1.75 ಟಿಎಂಸಿ ಮಾತ್ರ! ಅದೂ 2011 ರವರೆಗಿನ ಜನಸಂಖ್ಯೆಯ ಬೇಡಿಕೆಯ ಲೆಕ್ಕಾಚಾರದಲ್ಲಿ!! [illegible] [illegible] ವರ್ಷ [illegible] ಬೆಂಗಳೂರಿನ ಜನ ಕುಡಿಯುವ ನೀರನ್ನು ಯಾರ ಬಳಿ ಕೇಳಬೇಕು.

ಇದನ್ನು ಐಲುಪೈಲು ಅನ್ನಕೂಡದಾ ಹೇಳಿ?

ಇದೇ ವಿಚಾರದಲ್ಲಿ ವಿವರಣೆ ನೀಡಿರುವ ಟ್ರಿಬ್ಯುನಲ್ ಕುಡಿಯುವ ನೀರಿಗಾಗಿ ಕಾವೇರಿಯನ್ನೇ ಅವಲಂಬಿಸುವ ಬದಲಿಗೆ ಅಂತರ್ಜಲ ಪೂರೈಕೆ ರೂಢಿಸಿಕೊಳ್ಳುವಂತೆ ಉಪದೇಶಿಸಿದೆ. ಆದರೆ ತಮಿಳುನಾಡಿನಲ್ಲಿ ಭಾರಿ ಅಂತರ್ಜಲ ನಿಕ್ಷೇಪಗಳಿವೆಯಲ್ಲಾ ಎಂದರೆ ಅದು ಕಾವೇರಿ ನದಿ ನೀರಿನ ಉತ್ಪತ್ತಿ ಲೆಕ್ಕಕ್ಕೆ ಬರುವುದಿಲ್ಲ ಎನ್ನುತ್ತಿದ್ದಾರೆ ಟ್ರಿಬ್ಯುನಲ್‌ನ ಐಲುಪೈಲುಗಳು.

ನ್ಯಾಯಮಂಡಳಿಯ ವಿಚಾರಣೆ ನಡೆಯುತ್ತಿರುವಾಗ ಈ ಹಿಂದೆ ತಮಿಳುನಾಡನ್ನು ಪ್ರತಿನಿಧಿಸುತ್ತಿದ್ದ ವಕೀಲ ವೈದನಾಥನ್ ಎಷ್ಟು ಆಕ್ರಮಣಕಾರಿ ಧೋರಣೆ ತೋರಿಸುತ್ತಿದ್ದರೆಂದರೆ ಟ್ರಿಬ್ಯುನಲ್ಲೇ ಒಮ್ಮೆ "ನಮಗೇ ನಿಮ್ಮಿಂದ ರಕ್ಷಣೆ ಬೇಕಿದೆ" ಎಂದಿತ್ತು. ನಮ್ಮ ದೇವೇಗೌಡರೂ ಹೀಗೆ ಒಮ್ಮೆ 'ನ್ಯಾಯಾಧೀಕರಣ ಮುರಿದು ಬಿದ್ದಿದೆ' ಎಂದು ಜಗಳ ಕಾದಿದ್ದರು. ಧರಂಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಟ್ರಿಬ್ಯುನಲ್‌ನ ಇಬ್ಬರು ಸದಸ್ಯರು ಕಾವೇರಿ ಕಣಿವೆ ಪೂರ್ತಿ ಸುತ್ತಾಡಿ ಬರಲು ಇಚ್ಛಿಸಿದ್ದರು. ಮುಖ್ಯ ನ್ಯಾಯಾಧೀಶ ಸಿಂಗ್‌ಗೆ ಇದು ಇಷ್ಟವಿರಲಿಲ್ಲ, ಅದು ಬಗೆಹರಿಯುವಷ್ಟರಲ್ಲಿ ದೇವೇಗೌಡರು ತಮ್ಮ ಐರನ್ ಲೆಗ್ ಇಟ್ಟರು. ಸದಸ್ಯರು ಸ್ಥಳ ಪರಿಶೀಲನೆ ಮಾಡತಕ್ಕದ್ದಲ್ಲವೆಂದು ಸೀದಾ ಸುಪ್ರೀಂಕೋರ್ಟಿಗೆ ಅರ್ಜಿ ಹಾಕಿಕೊಂಡರು. ರಾಜ್ಯದ ವಕೀಲ ನಾರಿಮನ್ ಇದನ್ನು ಬೆಂಬಲಿಸಿರಲಿಲ್ಲ. ಸದಸ್ಯರ ಕರ್ನಾಟಕ ಭೇಟಿಯಿಂದ ಹಾನಿಯೇನಿಲ್ಲಾ ಎಂದೇ ಅವರ ನಿಲುವಾಗಿತ್ತು. ಇದು ಕೋರ್ಟಿಗೂ ಹೋದಾಗ ತಮ್ಮ ಸ್ಥಳ ಪರಿಶೀಲನೆಗೆ ಕರ್ನಾಟಕದ್ದೇನು ಅಡ್ಡಿ, ಮುಚ್ಚುಮರೆ ಎಂದು ಕೆರಳಿದ ಟ್ರಿಬ್ಯುನಲ್ ಸದಸ್ಯರು ಕೊನೆಗೂ ಇಲ್ಲಿಗೆ ಬಂದು ಪರಿಶೀಲಿಸಿ ಹೋದರು. ಐತೀರ್ಪು ಈಗ ನಮ್ಮ ವಿರುದ್ಧ ಬಂದಿದೆ. ಐಲುಪೈಲು ದೇವೇಗೌಡ ಈಗ ನಾಪತ್ತೆಯಾಗಿದ್ದಾರೆ.

ಕರ್ನಾಟಕದಲ್ಲಿ ಈಗ ಮುನ್ನಡೆಯುತ್ತಿರುವ ನೀರಾವರಿ ಯೋಜನೆಗಳ ಅಚ್ಚುಕಟ್ಟನ್ನೆಲ್ಲಾ ಸೇರಿಸಿದರೆ 20.65 ಲಕ್ಷ ಎಕರೆ ನೀರಾವರಿ ವ್ಯಾಪ್ತಿಗೆ ಬರಲಿದೆ. ಇದೇ ವರ್ಷ ಯಗಚಿ, ಕಬಿನಿ, ಹೇಮಾವತಿ, ಹಾರಂಗಿ, ಕೆಳನೂರು ಬ್ರಾಂಚ್, ಉಡುತೊರೆಹಳ್ಳ, ಮಂಚನಬೆಲೆ, ನಂಜಾಪುರ, ತಾರಕ ಮುಂತಾದ ನೀರಾವರಿ ಯೋಜನೆಗಳೆಲ್ಲಾ ಪೂರ್ಣಗೊಳ್ಳುವುದರಲ್ಲಿವೆ.

ಇನ್ನೊಂದು ವರ್ಷದಲ್ಲಿ ಹಾರಂಗಿ, ತಾರಕ, ಕೀಚನಕೊಪ್ಪಲು 2 ನೇ ಹಂತ, ಅರ್ಕಾವತಿ, ಬನ್ನಳ್ಳಿ, ತುಂಬಿ, ಬಾಗೂರು ನವಿಲೆ ಕಾಮಗಾರಿಗಳೂ ಮುಗಿಯುವುದರಲ್ಲಿದ್ದವು. ಕಬಿನಿ 2ನೇ ಹಂತದ [illegible] 720 ಕೋಟಿ ರೂ. ನಿಗದಿ ಮಾಡಲಾಗಿತ್ತು. [illegible] ಐಲುಪೈಲು ಆತಂತ ಸ್ಥಿತಿ ತಲುಪಿವೆ. [illegible] ಹಾಗೂ [illegible] ಯೋಜನೆಗಳಿಗೂ ಇನ್ನು ಮುಂದೆ [illegible]

ಕಾವೇರಿಗೆ ಬೆಣ್ಣೆ : ಕೃಷ್ಣೆಗೆ ಸುಣ್ಣ ಯಾಕೆ?

ಜನಪ್ರತಿನಿಧಿಗಳ ನಿಷ್ಕಾಳಜಿ, ವಕೀಲರುಗಳ ಬೇಜವಾಬ್ದಾರಿತನ, ಸರ್ಕಾರದ ಅಸಡ್ಡೆತನದಿಂದಾಗಿ ಕಾವೇರಿ ವಿವಾದ ಮತ್ತೆ ಬುಗಿಲೆದ್ದಿದೆ. ಕಾವೇರಿ ನ್ಯಾಯಾಧೀಕರಣದ ತೀರ್ಪಿನಿಂದಾಗಿ ಕಾವೇರಿ ಕಣಿವೆಯ ಜಿಲ್ಲೆಗಳಾದ ಮೈಸೂರು, ಮಂಡ್ಯ ಮತ್ತು ಚಾಮನಗರಗಳಲ್ಲಿ ಚಳವಳಿ ತೀವ್ರಗೊಂಡಿದೆ. ಅದೇ ರೀತಿಯಾಗಿ ರಾಜ್ಯದ ಇತರೆಡೆಗಳಲ್ಲಿ ಸಾಕಷ್ಟು ಪ್ರತಿಭಟನೆಗಳಾಗುತ್ತಿವೆ. ಒಂದರ್ಥದಲ್ಲಿ ಇಡೀ ಕರ್ನಾಟಕಕ್ಕೆ ಅನ್ಯಾಯವಾಗಿದೆಯೇನೋ ನಿಜ!

ಆದರೆ ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ಕೃಷ್ಣಾ ಮತ್ತು ಭೀಮಾ ನದಿ ನೀರು ಬಳಕೆ ವಿಷಯದಲ್ಲಿ ಈ ಭಾಗಕ್ಕೆ ಆಗಿರುವ ಅನ್ಯಾಯ, ಈ ಭಾಗದ ರೈತರು ಅನುಭವಿಸುತ್ತಿರುವ ನರಕಯಾತನೆಗೆ ಯಾಕೆ ಇಂತಹ ಪ್ರತಿಕ್ರಿಯೆಗಳು ಬಂದಿಲ್ಲ.

ಕೃಷ್ಣಾ ನದಿಯ ನೀರು ಬಳಕೆಯ ತಗಾದೆ

1969 ರಲ್ಲಿ ಬಚಾವತ್ ಆಯೋಗ ರಚನೆಗೊಂಡ ನಂತರ 1973 ರಲ್ಲಿ ಮಧ್ಯಂತರ ಆದೇಶವನ್ನು ಹೊರಡಿಸಿತು. ಮುಂದೆ 1975 ರಲ್ಲಿ ಅಂತಿಮ ಆದೇಶ ಹೊರಡಿಸಿ ಕೃಷ್ಣಾ ನದಿ ನೀರಿನಲ್ಲಿ 560 ಟಿಎಂಸಿ ಅಡಿ ಮಹಾರಾಷ್ಟ್ರಕ್ಕೂ, 734 ಟಿಎಂಸಿ ಅಡಿ ನೀರು ಕರ್ನಾಟಕಕ್ಕೂ, ಆಂಧ್ರಕ್ಕೆ 800 ಟಿಎಂಸಿ ನೀರು ದೊರಕಬೇಕೆಂದು ಅದರಲ್ಲಿ ಆದೇಶಿಸಲಾಗಿತ್ತು. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕಕ್ಕೆ ಸ್ಪಷ್ಟವಾಗಿ ಅನ್ಯಾಯ ಎಸಗಲಾಗಿತ್ತು. ಆದರೆ ಯಾರೊಬ್ಬರು ಪ್ರತಿಭಟಿಸದಿರುವುದರಿಂದ 'ಮೌನಂ ಸಮ್ಮತಿ ಲಕ್ಷಣಂ' ಎಂಬಂತಾಯಿತು.

ತೆಲುಗು ಗಂಗಾ ಯೋಜನೆ

ಆಂಧ್ರ ಪ್ರದೇಶ ಸರ್ಕಾರವು ಮದ್ರಾಸ್ ನಗರದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ತೆಲುಗು ಗಂಗಾ ಯೋಜನೆಯ ಹೆಸರಿನಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ತಲಾ ಐದು ಟಿಎಂಸಿ ನೀರು ಬಿಡಬೇಕೆಂದು ಒತ್ತಾಯಿಸಿತು. ಮಾನವೀಯ ದೃಷ್ಟಿಯಿಂದ ಆಗ ಉಭಯ ರಾಜ್ಯಗಳು ತಮ್ಮ ಪಾಲಿನ ಐದೈದು ಟಿಎಂಸಿ ನೀರನ್ನು ಬಿಟ್ಟು ಕೊಟ್ಟವು. ಅಷ್ಟು ಪ್ರಮಾಣದ ಸುಮಾರು 150 ಟಿಎಂಸಿ ನೀರನ್ನು ಬಳಸಿಕೊಂಡ ಆಂಧ್ರ ತೆಲುಗು ಗಂಗಾ ನೀರಾವರಿ ಯೋಜನೆಯನ್ನು ಜಾರಿಗೆ ತಂದಿತು.

ಅಕ್ರಮ ಅಣೆಕಟ್ಟುಗಳು

ಎರಡೂ ರಾಜ್ಯಗಳ ತಲಾ ಐದೈದು ಟಿಎಂಸಿ ನೀರು ಬಳಸಿಕೊಂಡ ಆಂಧ್ರ ಪ್ರದೇಶ ಇಷ್ಟಕ್ಕೂ ಸುಮ್ಮನಾಗದೆ ಕೃಷ್ಣಾ ಜಲಾಶಯ ಪ್ರದೇಶದ ಹಲವಾರು ಮುಂತಾದ ಕಡೆ ಅಕ್ರಮವಾಗಿ ಸುಮಾರು 8 ಅಣೆಕಟ್ಟುಗಳನ್ನು ನಿರ್ಮಿಸಿತು. ಆಶ್ಚರ್ಯದ ಸಂಗತಿಯೇನೆಂದರೆ ಅವು ಕೇಂದ್ರ ನೀರು ಕಮಿಷನ್‌ನ ಅನುಮತಿಯನ್ನು ಸಹ ಪಡೆದಿರಲಿಲ್ಲ. ಇದನ್ನು ಮನಗಂಡ ಕರ್ನಾಟಕ-ಮಹಾರಾಷ್ಟ್ರ ಪ್ರತ್ಯೇಕ ತಗಾದೆಯನ್ನು ಆಂಧ್ರದ ವಿರುದ್ಧ ಸುಪ್ರೀಂಕೋರ್ಟಿನಲ್ಲಿ ಸಲ್ಲಿಸಿದವು. ಆಗ ಕೇಂದ್ರ ಸರ್ಕಾರ ಈ ಎರಡೂ ರಾಜ್ಯಗಳ ಬೆಂಬಲಕ್ಕೆ ನಿಂತು ಆಂಧ್ರ ಪ್ರದೇಶಕ್ಕೆ ಛೀಮಾರಿ ಹಾಕಿತ್ತು. ಆಂಧ್ರ ಪ್ರದೇಶ ತಪ್ಪೊಪ್ಪಿಕೊಂಡಂತೆ ನಟಿಸಿ ನೀರನ್ನು ಲೂಟಿ ಮಾಡುತ್ತಲೇ ಹೋಯಿತು. ಮಹಾರಾಷ್ಟ್ರ ತನ್ನ ಪಾಲಿನ 560 ಟಿಎಂಸಿ ನೀರನ್ನು ಸದ್ವಿನಿಯೋಗಪಡಿಸಿಕೊಂಡಿತು. ಆದರೆ ಕರ್ನಾಟಕ ಈಗಾಗಲೇ ಐದು ಟಿಎಂಸಿ ನೀರನ್ನು ಆಂಧ್ರಕ್ಕೆ ಹರಿಬಿಡುತ್ತಿದ್ದರಿಂದ ಕೇವಲ 729 ಟಿಎಂಸಿ ನೀರು ಬಳಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಯಿತು.

ಸುಪ್ರೀಂಕೋರ್ಟ್ ಆದೇಶ

ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 524 ಮೀಟರ್‌ಗಳಿಗೆ ಏರಿಸದಂತ ಆಂಧ್ರ ಪ್ರದೇಶವು ಸುಪ್ರೀಂಕೋರ್ಟ್ ಎದುರು ತನ್ನ ತಕರಾರು ಅರ್ಜಿ ಸಲ್ಲಿಸಿತು. ಈ ಸಂದರ್ಭದಲ್ಲಿ ತೀರ್ಪು ನೀಡಿದ ಸುಪ್ರೀಂಕೋರ್ಟ್ 519 ಮೀಟರ್ ಎತ್ತರಕ್ಕೆ ಅಣೆಕಟ್ಟನ್ನು ಸೀಮಿತಗೊಳಿಸುವಂತೆ ಸೂಚಿಸಿತು. ಕೋರ್ಟ್ ಆದೇಶದಿಂದಾಗಿ ಈ ಮೊದಲೇ ನಿರ್ಮಿಸಲಾಗಿದ್ದ 524 ಮೀಟರ್ ಎತ್ತರದ ಗೇಟ್‌ಗಳನ್ನು 519 ಮೀಟರ್‌ಗೆ ಕತ್ತರಿಸಬೇಕಾಯ್ತು. ಇದರಿಂದಾಗಿ ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದಿಸಿ ಸರಬರಾಜು ಮಾಡಬೇಕಾಗಿದ್ದ ಮಹತ್ವಕಾಂಕ್ಷಿ ಯೋಜನೆಗಳನ್ನು ಕರ್ನಾಟಕ ಕೈಬಿಡಬೇಕಾಯ್ತು.

ಭೀಮಾ ನದಿ ನೀರು ಬಳಕೆಯ ತಗಾದೆ

ಬಚಾವತ್ ಆಯೋಗದ ಪ್ರಕಾರ ಮಹಾರಾಷ್ಟ್ರ 95 ಟಿಎಂಸಿ ಅಡಿ ಹಾಗೂ ಕರ್ನಾಟಕ 15 ಟಿಎಂಸಿ ನೀರು ಬಳಸಿಕೊಳ್ಳಬೇಕೆಂಬ ನೀತಿ ಜಾರಿಯಲ್ಲಿದೆ. ಆದರೆ ಮಹಾರಾಷ್ಟ್ರ 1976 ರಲ್ಲಿ ಉಜನಿ ಬಳಿ ಭೀಮಾ ನದಿಗೆ ಅಡ್ಡಲಾಗಿ ಅಣೆಕಟ್ಟೊಂದನ್ನು ನಿರ್ಮಿಸಿ 'ಕುಡಿಯುವ ನೀರಿಗಾಗಿ' ಯೋಜನೆಯೊಂದನ್ನು ರೂಪಿಸಿ ಸುಮಾರು 90 ಟಿಎಂಸಿ ಅಡಿ ನೀರನ್ನು ಸರಾಗವಾಗಿ ಸಂಗ್ರಹಿಸಿಕೊಳ್ಳತೊಡಗಿತು. ಇಷ್ಟು ಸಾಲದೆಂಬಂತೆ ಅಕ್ಕಲಕೋಟೆಯಿಂದ ಅಫಜಲ್ಪುರದ ಶೇಷಗಿರಿವಾಡಿಯವರೆಗೆ ಸುರಂಗ ಮಾರ್ಗವನ್ನು ಕೊರೆದು ಉಜನಿ ಅಣೆಕಟ್ಟನಿಂದ ಸೀನಾ ನದಿಗೆ ಸಂಪರ್ಕ ಕಲ್ಪಿಸಿಕೊಂಡಿತು. ಇದರಿಂದಾಗಿಯೇ ಮಹಾರಾಷ್ಟ್ರವು 1 ಲಕ್ಷ 25 ಸಾವಿರ ಎಕರೆ ನೀರಾವರಿ ಭೂಮಿಯನ್ನು ಸಂಪೂರ್ಣವಾಗಿ ಆರೋಗ್ಯಮಯವಾಗಿ ಮಾಡಿಕೊಂಡಿತು. ಇದರಿಂದ ಕುಪಿತರಾದ ಕೃಷ್ಣ ಹಾಗೂ ಭೀಮಾಕೊಳ್ಳದ ಜನ ಆಗಾಗ ಪಂಚಪ್ಪ ಕಲ್ಬುರ್ಗಿ, ವೈಜನಾಥ ಪಾಟೀಲ, ಹಣಮಂತ್ರಾಯ ದೇಸಾಯಿ ನೇತೃತ್ವದಲ್ಲಿ ಪ್ರತಿಭಟನೆ ಸೂಚಿಸಿದ್ದಾರೆ. ಆದರೆ ಆಗ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಸುಮಾರು 20 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಬಹುದಾದ ಕೃಷ್ಣಾಕೊಳ್ಳದ ಯೋಜನೆಗಳು ಸಾಕಷ್ಟು ಅಡೆತಡೆಗಳನ್ನು ಎದುರಿಸುತ್ತಿದ್ದಾಗ ಮೈಸೂರು ಭಾಗದ ರೈತರಿಂದ ಬೆಂಬಲ ಸಿಗಲಿಲ್ಲ. ಉತ್ತರ ಕರ್ನಾಟಕದ ಜೀವನಾಡಿ ಕೃಷ್ಣಾ ನದಿಯ ನೀರಿನ ಹಂಚಿಕೆಯಲ್ಲಿ ಮೊದಲಿನಿಂದಲೂ ಅನ್ಯಾಯವಾಗುತ್ತಿದ್ದರೂ ಹಳೆ ಮೈಸೂರಿನ ನಾಯಕರು ತಮಗೂ, ಇದಕ್ಕೂ ಸಂಬಂಧವಿಲ್ಲದಂತೆ ವರ್ತಿಸುತ್ತಾರೆ. ಆದರೆ ಕಾವೇರಿ ವಿಷಯ ಬಂದಾಗ ಈ ಮುಖಂಡರುಗಳು ಜೈಲಿಗೆ ಹೋಗಲು ಸಿದ್ಧರಾಗುತ್ತಾರೆ.

ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದವರು ಕಾವೇರಿ ಮೇಲಿರುವ ಪ್ರೀತಿಯನ್ನು ಕೃಷ್ಣ-ಭೀಮೆಗೆ ತೋರಿಸಬೇಕೆಂಬುದೇ ಈ ಭಾಗದ ಜನರ ಆಶಯವಾಗಿದೆ. ಅಂತೆಯೇ ಕಾವೇರಿಗೆ ಬೆಣ್ಣೆ; ಕೃಷ್ಣೆಗೆ ಸುಣ್ಣ ಯಾಕೆ ಎಂದು ಈ ಭಾಗದ ಜನತೆ ಪ್ರಶ್ನಿಸುತ್ತಿದ್ದಾರೆ.

-ಶಿವರಂಜನ್ ಸತ್ಯಂಪೇಟೆ

ಸೆಕ್ಯೂರಿಟಿಗೆ ಬಂದ ಡಾ. ರಾ



ಕಾವೇರಿ ಟ್ರಿಬ್ಯೂನಲ್‌ನ ತೀರ್ಪು ಹೊರಬೀಳುತ್ತಿದ್ದಂತೆ ರಾಜಧಾನಿ ಬೆಂಗಳೂರಿನ ಬೃಹತ್ ಕಟ್ಟಡಗಳ ಮುಂದೆ ವರನಟ ದಿ. ಡಾ. ರಾಜ್‌ಕುಮಾರ್‌ರವರ ಭಾವ ಚಿತ್ರಗಳು ರಾರಾಜಿಸಲಾರಂಭಿಸಿದವು. ಇದೇಕೆ ಇವರಿಗೆಲ್ಲ ಇದ್ದಕ್ಕಿದ್ದಂತೆ ರಾಜ್ ನೆನಪಾದರು, ಅವರ ಭಾವಚಿತ್ರವನ್ನೇಕೆ ಹಾಕಿದ್ದಾರೆ ಎಂದು ಚಿಂತಿಸುವ ಅಗತ್ಯವೇನಿರಲಿಲ್ಲ, ಗಾಜಿನಿಂದ ಅಲಂಕೃತವಾಗಿದ್ದ ಆ ಕಟ್ಟಡಗಳನ್ನು ಗಮನಿಸಿದ ನಂತರ!

ಅವರೆಲ್ಲರಿಗೂ ಆತಂಕವಾಗಿದ್ದೇಕೆಂದರೆ, ಆಕಸ್ಮಾತ್ ಗಲಭೆ ಪ್ರಾರಂಭವಾಗಿ ಎಲ್ಲಿ ತಮ್ಮ ಗಾಜಿನ ಅರಮನೆಗಳು ಜನರ ಕಲ್ಲೇಟು ತುತ್ತಾಗುತ್ತವೋ ಎಂಬುದು.

ಆದಕ್ಕೆ ಡಾ.ರಾಜ್‌ರವರ ಫೋಟೋ ಅಂಟಿಸಿಕೊಂಡು, ನಮ್ಮ ಮೆ ನಟನಿಗೆ ಸೆಕ್ಯೂರಿಟಿ ಗಾರ್ಡ್ ಸ್ಥಾನ ನೀಡಿದ್ದರು.

ಕೃಷಿ, ನೀರು: ನೀತಿ ಯಾಕಿಲ್ಲ

"ರೈತರೇ ನಮ್ಮ ದೇಶದ ಬೆನ್ನೆಲಬು" ಎಂದು ಎಲ್ಲಾ ಪಕ್ಷಗಳ ನಾಯಕರು ಹೋಗಿಬಂದಲ್ಲೆಲ್ಲ ಜಪಿಸುತ್ತಾರೆ. ಆದರೆ ನಮ್ಮ ದೇಶಕ್ಕೆ ಸ್ವಾ ಬಂದು 60 ವರ್ಷಗಳಾದರೂ, ಇಲ್ಲಿನ ಕೋಟ್ಯಂತರ ಜನ ಹಸಿವೆಯಿ ನರಳುತ್ತಿದ್ದರೂ, ನಮ್ಮ ಯಾವುದೇ ಸರ್ಕಾರ ಒಂದು ರಾಷ್ಟ್ರೀಯ ನೀತಿಯನ್ನು ರೂಪಿಸಿಲ್ಲ.

ಅಷ್ಟೇ ಅಲ್ಲ, ನಮ್ಮ ದೇಶದ ಎಲ್ಲಾ ಪ್ರಮುಖ ನದಿಗಳ ನ ಹಂಚಿಕೆ ವಿಷಯದಲ್ಲಿ ಹಲವಾರು ರಾಜ್ಯಗಳ ನಡುವೆ ಜಗಳಗಳಿವೆ. ಆದ ಇಲ್ಲಿಯವರೆಗೆ ನಮ್ಮ ಯಾವುದೇ ಸರ್ಕಾರ ರಾಷ್ಟ್ರೀಯ ನೀರು ಹ ನೀತಿಯನ್ನು ರೂಪಿಸಿಲ್ಲ.

ಈ 60 ವರ್ಷಗಳಲ್ಲಿ ಸಾವಿರಾರು ಶಾಸಕರು, ನೂರಾರು ಸಂಸ ಗೆದ್ದಿದ್ದಾರೆ, ಅಧಿಕಾರ ಹಿಡಿದಿದ್ದಾರೆ, ಶ್ರೀಮಂತರಾಗಿದ್ದಾರೆ. ಆದರೆ ಯಾ ಜನಪರವಾದ ಕೃಷಿ ನೀತಿ, ನೀರು ಹಂಚುವ ನೀತಿ ರೂಪಿಸು ಗಮನಹರಿಸಿಲ್ಲ.

ಆಚಾರ ಹೇಳಕ್ಕೆ, ಬದನೆಕಾಯಿ ತಿನ್ನೋಕೆ ಅಂದರೆ ಇದೇ ಅಲ್ಲ

ಏನಿದು 'ಐತೀರ್ಪು'?


ಕಾವೇರಿ ಟ್ರಿಬ್ಯೂನಲ್‌ನ ಅಂತಿಮ ತೀರ್ಪು ಬಂದಾಗಿನಿಂದ ಹಲವು ಪತ್ರಿಕೆಗಳು ಇದನ್ನು 'ಐತೀರ್ಪು' ಎಂದು ಕರೆಯುತ್ತಿವೆ. ನಿಘಂಟಿನಲ್ಲಿರದ ಈ 'ಐತೀರ್ಪು' ಪದ ಎಲ್ಲಿಂದ ಬಂತು, ಅದರ ಅರ್ಥ ಎಂಬುದಕ್ಕೆ ಯಾರಲ್ಲೂ ಉತ್ತರವಿಲ್ಲ.

ಆದರೂ ಪತ್ರಕರ್ತರೊಬ್ಬರು "ಇದ್ದೊಂದು ಐತಿಹಾಸಿಕ ತೀರ್ಪಾದ್ದ ಅದನ್ನು ಐತೀರ್ಪು ಎಂದು ಕರೆಯುತ್ತಿದ್ದೇವೆ" ಎಂದು ಹೇಳಿದರು. ಹಾಗ ಐತಿಹಾಸಿಕವಾದ ಈ ಐತೀರ್ಪು ಒಂದು ಐಲು ಏನ್ನೋಣವೇ?

ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು?

(ಹಿಂದಿನ ಪುಟದಿಂದ)

ಒಂದು ಉದಾಹರಣೆಯ ಮೂಲಕ ಹೇಳಬೇಕೆಂದರೆ ಜಲ ಸಂಪನ್ಮೂಲ ಇಲಾಖೆಯೊಳಗೇ ಅಂತರರಾಜ್ಯ ನೀರಿನ ವಿವಾದಗಳಿಗೆ ಸಂಬಂಧಿಸಿದಂತೆ ವಿಶೇಷ ಘಟಕವೊಂದನ್ನು ರಚಿಸಿ ಅದಕ್ಕೆ ಐಎಎಸ್ ಮಟ್ಟದ ಅಧಿಕಾರಿಯೊಬ್ಬರನ್ನು ನೇಮಿಸಲಾಗುತ್ತಿತ್ತು. ಕೆಲಕಾಲ ಐಎಎಸ್ ಅಧಿಕಾರಿ ಜಯಪ್ರಕಾಶ್ ಇದನ್ನು ನೋಡಿಕೊಳ್ಳುತ್ತಿದ್ದರು. ಈ ವಿಶೇಷ ಘಟಕವು ವಿವಾದವಿರುವ ರಾಜ್ಯದ ನದಿಗಳ (ಕೃಷ್ಣಾ-ಕಾವೇರಿ) ನೀರಿನ ಉತ್ಪತ್ತಿ, ಹರಿವು, ಮಳೆ, ವ್ಯವಸಾಯದ ಅಂಕಿಅಂಶ, ಬೇಸಿಗೆಯಲ್ಲಿನ ನೀರಿನ ಕೊರತೆ, ಸಂಭವನೀಯ ನೀರಿನ ಬೇಡಿಕೆ ಮುಂತಾದ ವಿಚಾರಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸುತ್ತಿತ್ತು. ಈ ವರದಿಗಳೆಲ್ಲಾ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಕಾಲಕಾಲಕ್ಕೆ ತಲುಪುತ್ತಿದ್ದವು.



ಯೂಸ್‌ಲೆಸ್ ಈಶ್ವರಪ್ಪ

ಆದರೆ ಕಳೆದ ಎರಡು ವರ್ಷಗಳಿಂದ ಈ ಘಟಕಕ್ಕೆ ಪ್ರತ್ಯೇಕ ಅಧಿಕಾರಿಯೇ ಇರಲಿಲ್ಲ. ಅಷ್ಟೇ ಅಲ್ಲ, ನದಿ ನೀರಿನ ವಿವಾದ ಕುರಿತಂತೆ ಕಾನೂನು ಹಾಗೂ ತಾಂತ್ರಿಕ ತಜ್ಞರ ಸಮಿತಿಯೊಂದು ಈ ಹಿಂದೆ ಅಸ್ತಿತ್ವದಲ್ಲಿತ್ತು. ಹೈಕೋರ್ಟಿನ ನಿವೃತ್ತ ಜಡ್ಜ್‌ಗಳು, ನೀರಾವರಿ ಹಾಗೂ ಕಂದಾಯ ಇಲಾಖೆಯ ನಿವೃತ್ತ ಅನುಭವಿ ಅಧಿಕಾರಿಗಳೆಲ್ಲಾ ಈ ಟೀಂನಲ್ಲಿರುತ್ತಿದ್ದರು. ನಿವೃತ್ತ ಚೀಫ್ ಜಸ್ಟೀಸ್ ವೆಂಕಟರಾಮಯ್ಯ ಕೆಲಕಾಲ ಈ ಸಮಿತಿಯ ಮುಖ್ಯಸ್ಥರಾಗಿದ್ದರು. ದುರಂತವೇನೆಂದರೆ ಕಳೆದ ಎರಡು ವರ್ಷಗಳಿಂದಲೂ ಈ ಸಮಿತಿ ನಿಷ್ಕ್ರಿಯಗೊಂಡಿತ್ತು. ಈ ಘಟಕದಲ್ಲಿರಬೇಕಿದ್ದ ಚೀಫ್ ಇಂಜಿನಿಯರ್‌ಗಳ ಹುದ್ದೆಗಳೇ ಖಾಲಿ ಬಿದ್ದಿದ್ದವು. ಇಲ್ಲಿ ಗುಳುಂ ಮಾಡಲು ಏನು ಸಿಗುವುದಿಲ್ಲವಾದ್ದರಿಂದ ಮತ್ತು ಯಾರೂ ಕಾಸುಕೊಟ್ಟು ವರ್ಗಾವಣೆ ಕೇಳುವುದಿಲ್ಲವಾದ್ದರಿಂದ ಈ ಮಹತ್ವದ ಹುದ್ದೆಗಳೇ ಖಾಲಿ ಬಿದ್ದಿದ್ದವೆಂದರೆ ನಂಬುತ್ತೀರಾ? ಕುಮಾರಸ್ವಾಮಿ ಹಾಗೂ ಈಶ್ವರಪ್ಪ ಕಾವೇರಿ ಸಮಸ್ಯೆ ಬಗ್ಗೆ ನೀಡಿದ್ದ ವಿಶೇಷ ಗಮನ ಇದು.

ಹಾಲಿ ಸರ್ಕಾರ ಕನಿಷ್ಠ ಈಗಲಾದರೂ ತೀರ್ಪಿನ ಪರಿಣಾಮಗಳೇನಾಗಲಿದೆ ಎಂಬ ಬಗ್ಗೆ ಸಾರ್ವಜನಿಕರಿಗೆ ಮುಚ್ಚುಮರೆ ಮಾಡದೆ ತಿಳಿಸಬೇಕಿದೆ. ಹಾಗೆ ನೋಡಿದರೆ ರಾಜಕಾರಣಿಗಳು ಹಾಗೂ ನೀರಾವರಿ ತಜ್ಞರಿಗಿಂತ ರಾಜ್ಯದ ಪತ್ರಕರ್ತರೇ ಹೆಚ್ಚು ವಿಷಯಗಳನ್ನು ತೀರ್ಪಿನಿಂದ ಹೆಕ್ಕಿ ತೆಗೆದು ಜನತೆಯ ಮುಂದಿಟ್ಟಿದ್ದಾರೆ ಎನ್ನಬಹುದು.

ಕನಿಷ್ಠ ಮುಂದಿನ ಸರ್ವಪಕ್ಷ ಸಭೆಯಲ್ಲಾದರೂ ಈ ತೀರ್ಪಿನ ಬಗ್ಗೆ ಆಳವಾದ ಚರ್ಚೆ ನಡೆಸಿ ಕರ್ನಾಟಕಕ್ಕಾಗಲಿರುವ ಹಾನಿಯನ್ನು ತಡೆಗಟ್ಟುವ ಪ್ರಯತ್ನ ಆಗಬೇಕಿದೆ.

ಮುಖ್ಯಮಂತ್ರಿ ಕುಮಾರಸ್ವಾಮಿಗೆ ತನ್ನ ಅಧಿಕಾರ ಉಳಿಸಿಕೊಳ್ಳಲು ಶಾಸಕರನ್ನು ರೆಸಾರ್ಟ್‌ಗಳಿಗೆ ಕರೆದೊಯ್ದು ಮೇಜುವಾನಿ ನಡೆಸಲಿಕ್ಕಾಗುತ್ತದೆ. ಆದರೆ ಅದೇ ಕಾವೇರಿ ಕಣಿವೆಯ ಕೋಟ್ಯಂತರ ಜನರ ಹಿತಾಸಕ್ತಿ ಕಾಪಾಡಲು ನಮ್ಮೆಲ್ಲಾ ಶಾಸಕರನ್ನು ದೆಹಲಿಗೆ ಕರೆದೊಯ್ಯಲಾಗುವುದಿಲ್ಲವೆ? ■


ಕಾಂಗ್ರೆಸ್‌ನ ಹೊಣೆಗೇಡಿತನ





ಈ ಕಾಂಗ್ರೆಸ್ ನಾಯಕರಿಗೆ ಅದೇನು ಗರ ಬಡಿದುಕೊಂಡಿದೆಯೋ ಏನೋ? ಒಂದೆಡೆ ರಾಜ್ಯದ ಇಡೀ ಜನಸ್ತೋಮ ಕಾವೇರಿ ತೀರ್ಪಿನ ಆಘಾತಕಾರಿ ಅಂಶಗಳ ಬಗ್ಗೆ ಪ್ರತಿಭಟಿಸುತ್ತಿದ್ದರೆ ಇತ್ತ ಕಾಂಗ್ರೆಸ್ಸಿಗರಿಂದಲೂ ಗಲಾಟೆ ಶುರುವಾಗಿತ್ತು... ಆದರೆ ಅದು ಮೇಲ್ಮನೆ ಸಭಾಪತಿಯಾಗಿ ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿರುವ ಜೆಡಿಎಸ್‌ನ ತಿಪ್ಪಣ್ಣ ವಿರುದ್ಧ!

ಹಾಲಿ ಉಸ್ತುವಾರಿ ಸಭಾಪತಿ ಸಚ್ಚಿದಾನಂದ ಖೋತ್‌ಗೆ ಅಪಘಾತವಾಗಿದೆ. ತಿಪ್ಪಣ್ಣ ಆ ಜಾಗದಲ್ಲಿ ಬಂದು ಕುಳಿತಿದ್ದಾರೆ. ಈಗ ಮೇಲ್ಮನೆಯಲ್ಲಿ ಮೆಜಾರಿಟಿ ಇರುವುದು ಕಾಂಗ್ರೆಸ್‌ಗೆ. ಒಂದು ವೇಳೆ ಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆದರೆ ಕಾಂಗ್ರೆಸ್ಸಿನವರಲ್ಲೇ ಒಬ್ಬ ಹಿರಿಯ ಸದಸ್ಯ ಆಯ್ಕೆಯಾಗಲೂಬಹುದು. ಅದೆಲ್ಲಾ ಇವತ್ತೇ ಬಗೆಹರಿಯಬೇಕಾದ ತಲೆ ಹೋಗುವ ವಿಚಾರಗಳೇನಲ್ಲ. ಆದರೆ ಕಾಂಗ್ರೆಸ್ ವಿಧಾನಸಭಾ ಅಧಿವೇಶನ ಶುರುವಾದಾಗಿನಿಂದಲೂ ತಿಪ್ಪಣ್ಣ ಗಲಾಟೆ ಮಾಡಿಕೊಂಡೇ ಹೋಗುತ್ತಿದೆ. ಈಗಾಗಲೇ ಒಂದು ವಾರದ ಕಲಾಪ ಬಹಿಷ್ಕರಿಸಿ 50 ಲಕ್ಷ ರೂ. ತೆರಿಗೆ ಹಣವನ್ನೂ ಪೋಲು ಮಾಡಿದ್ದಾಗಿದೆ.

ಈಗ ಬರುತ್ತಿರುವ ಅನುಮಾನವೇನೆಂದರೆ ಕಾವೇರಿ ತೀರ್ಪಿನ ವಿರುದ್ಧ ಹೋರಾಟಕ್ಕಿಳಿದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಧೈರ್ಯ ಸಾ ಕರ್ನಾಟಕ ಕಾಂಗ್ರೆಸ್ ನಾಯಕರು ಹೀಗೆ ತಿಪ್ಪಣ್ಣ ಪ್ರಹಸನ ನಡೆಸುತ್ತಿದ್ದಾರಾ ಎಂ







ಸಂಸದರೆಂಬ 28 ಮಂದಿ ನಾಮರ್ದರು

ಕರ್ನಾಟಕದ 28 ಸಂಸದರು ಕಾವೇರಿ ವಿಷಯದಲ್ಲಿ ಯಾವ ಪಾತ್ರ ವಹಿಸಿದರು? ತಮಿಳುನಾಡಿನ ಸಂಸದರು ಪಕ್ಷಬೇಧ ಮರೆತು ಕಾವೇರಿಗಾಗಿ ಒಗ್ಗಟ್ಟಾದರೆ ನಮ್ಮ ಸಂಸದರು ಕರ್ನಾಟಕಕ್ಕಾಗಲಿ, ಕಾವೇರಿಗಾಗಲಿ, ಕೃಷ್ಣೆಗಾಗಲಿ ಹೋರಾಡಿದ್ದೇ ಇಲ್ಲ. ಹತ್ತಾರು ವರ್ಷಗಳಿಂದ ಲೋಕಸಭೆಗೆ ಆಯ್ಕೆಯಾದ ಈ ಇಪ್ಪತ್ತೆಂಟು ನಿಷ್ಪ್ರಯೋಜಕರ ಕೊಡುಗೆಯ ಬಗ್ಗೆ ಇಲ್ಲೊಂದು ಪುಟ್ಟ ಪರಿಚಯವಿದೆ.....

ಯಾವಾತಾ ಸ್ವಾಭಿಮಾನಿಯಲ್ಲವೋ, ತನ್ನ ಉಳಿವಿಗಾಗಿ ಹೋರಾಡುವುದಿಲ್ಲವೋ, ಯಾರು ತನ್ನ ಪಾಲಿಗಾಗಿ ಬಡಿದಾಡುವುದಿಲ್ಲವೋ, ಅಂಥವನಿಗೆ ಸೋಲೆಂಬುದು ಕಟ್ಟಿಟ್ಟ ಬುತ್ತಿ.

ಕಾವೇರಿ ವಿಷಯದಲ್ಲಿ ಕರ್ನಾಟಕದ ಕರ್ಮವನ್ನು ಇದಕ್ಕಿಂತ ಭಿನ್ನವಾಗಿ ಹೇಳಲು ಸಾಧ್ಯವೇ?

ಇನ್ನೇನು ಕಾವೇರಿ ತೀರ್ಪು ಹೊರಬೀಳುತ್ತದೆ ಎನ್ನುವಾಗಲೇ ಬಂದೋಬಸ್ತಿಗೆಂದು ಹೊರರಾಜ್ಯಗಳಿಂದ ಪೊಲೀಸ್ ತುಕಡಿಗಳು ಬೆಂಗಳೂರಿಗೆ ಬರುತ್ತಿದ್ದದ್ದು ಯಾವುದೋ ಅಪಶಕುನವೊಂದರ ಮುನ್ಸೂಚನೆಯಂತಿತ್ತು. ಅದೀಗ ನಿಜವಾಗಿ ಹೋಗಿದೆ. ತೀರ್ಪನ್ನು ಓದಿದ ಯಾರಿಗಾದರೂ ಅದು ಅವೈಜ್ಞಾನಿಕವಾದ, ಅನ್ಯಾಯದಿಂದ ಕೂಡಿದ ಪಕ್ಷಪಾತಿ ತೀರ್ಪೆಂಬ ಬಗ್ಗೆ ಅನುಮಾನಗಳೇ ಇಲ್ಲ. ಇಂಥ ಐತಿಹಾಸಿಕ ಅಪಚಾರವೊಂದು ಕನ್ನಡಿಗರ ಮೇಲೆ ಸಂಭವಿಸಿದ್ದಕ್ಕೆ ಯಾರು ಹೊಣೆ?

ಕೆಲ ಕನ್ನಡ ಪರ ಸಂಘಟನೆಗಳ ಬೌದ್ಧಿಕ ದಾರಿದ್ರ್ಯ ಹೇಗಿದೆಯೆಂದರೆ, ಕೆಲವರು ಜಯಲಲಿತಾ ಪ್ರತಿಕೃತಿ ಮಾಡಿ ಸುಡುತ್ತಾರೆ, ಇನ್ನೂ ಕೆಲವರು ಕರುಣಾನಿಧಿಯ ಭೂತ ಸುಟ್ಟು ಪ್ರತಿಭಟಿಸಿದ್ದಾರೆ. ತಮಿಳು ಚಿತ್ರಪ್ರದರ್ಶನ ನಿಲ್ಲಿಸಿ, ತಮಿಳುನಾಡಿನ ಬಸ್ಸುಗಳನ್ನು ತಡೆದ ಮಾತ್ರಕ್ಕೇ ಕನ್ನಡಿಗರ ಹೋರಾಟಕ್ಕೆ ಅರ್ಥ ಬರುತ್ತದೆಯೆಂದು ಅನೇಕರು ಭಾವಿಸಿದ್ದಾರೆ. ಎಲ್ಲೋ ಒಂದೆರಡು ಕಡೆ ಮಾತ್ರ ಅಪವಾದ ಎಂಬುದನ್ನು ಬಿಟ್ಟರೆ ಬಹುತೇಕ ಪ್ರತಿಭಟನೆಗಳಿಗೆಲ್ಲ ಗೊತ್ತು ಗುರಿಯೇ ಇದ್ದಂತಿಲ್ಲ.



ನಿಜಕ್ಕೂ, ಕಾವೇರಿಗಾದ ಅನ್ಯಾಯಕ್ಕೆ ಜಯಲಲಿತಾ, ಕರುಣಾನಿಧಿ ಅಥವಾ ತಮಿಳರಷ್ಟೇ ಕಾರಣರೆ?


ಈ ಪ್ರಶ್ನೆಗೆ ಪ್ರತಿಯೊಬ್ಬರೂ ಬೊಟ್ಟು ಮಾಡುವುದು ಕರ್ನಾಟಕದ ಇಪ್ಪತ್ತೆಂಟು ಮಂದಿ ನಾಲಾಯಕ್ ಸಂಸದರನ್ನೇ. ಎಲ್ಲೋ ಕನಕಪುರದ ತೇಜಸ್ವಿನಿ ಕೂಗಾಡಿದ್ದು ಮತ್ತು ಚಾಮರಾಜನಗರದ ಶಿವಣ್ಣ ಕನ್ನಡದಲ್ಲಿ ಮಾತಾಡಿ ಸುದ್ದಿಯಾಗಿದ್ದು ಬಿಟ್ಟರೆ ಕರ್ನಾಟಕದ ಒಬ್ಬೇಒಬ್ಬ ಸಂಸದನ ಹೆಸರನ್ನು ಜನ ಕೇಳಿಲ್ಲ. ಕಾವೇರಿ ವಿಷಯದಲ್ಲಿ ಸದಾ ಜಾಗೃತಿ ಅಂತಿದ್ದರೆ ಅದು ಹೆಚ್ಚು ವ್ಯಕ್ತವಾಗಿದ್ದು ಮಂಡ್ಯದ ರೈತರಲ್ಲೇ. ಇಂಥ ಮಂಡ್ಯವನ್ನು ಪ್ರತಿನಿಧಿಸುವ ನಟ ಅಂಬರೀಷ್‌ಗೆ ಕಾವೇರಿ ಸಮಸ್ಯೆಯ ತಲೆಬುಡ ಕೂಡ ತಿಳಿದಂತಿಲ್ಲ.

ಕಾವೇರಿಯ ವಿಷಯ ಹಾಳಾಗಲಿ ತಮ್ಮ ಸಂಸದ ಪದವಿಯುದ್ದಕ್ಕೂ ಕರ್ನಾಟಕದ ಬಗ್ಗೆ ಒಂದೇ ಒಂದು ದಿನ ಕೂಡ ಅಂಬಿ ಉಸಿರೆತ್ತಿಲ್ಲ. ಕರ್ನಾಟಕ ಕಂಡ ಅತ್ಯಂತ ಸೋಮಾರಿ, ಹೊಣೆಗೇಡಿ ಮತ್ತು ಲೋಲುಪ್ತ ಸಂಸದ ಎಂಬ ಬಿರುದೇನಾದರೂ ಇದ್ದರೆ ಅದಕ್ಕೆ ಅಂಬಿಗಿಂತ ತಕ್ಕ ವ್ಯಕ್ತಿ ಸಿಗಲಿಕ್ಕಿಲ್ಲ. ಕಾವೇರಿಗಾಗಿ ಮಂಡ್ಯದ ರೈತರು ಬೀದಿಗಿಳಿದಾಗಲೆಲ್ಲ ಅಂಬರೀಷ್ ರಾಜೀನಾಮೆ ಕೇಳಿದ್ದಾರೆ. ಹೀಗಿದ್ದೂ ಅಂಬಿ ಕಾವೇರಿ ವಿಷಯದಲ್ಲಿ ವಿಶೇಷ ಪರಿಣತಿಯನ್ನಾಗಲೀ, ಬೇರೆಲ್ಲ ಸಂಸದರಿಗಿಂತ ವಿಶೇಷ ಆಸಕ್ತಿಯನ್ನಾಗಲಿ ಯಾವತ್ತೂ ರೂಢಿಸಿಕೊಳ್ಳಲೇ ಇಲ್ಲ. ಹೋಗಲಿ ಅಂತಿಮ ತೀರ್ಪು ಹೊರಬಿದ್ದ ಮೇಲಾದರೂ 'ರಾಜೀನಾಮೆ ಕೊಡುತ್ತೇನೆ' ಎಂಬ ಒಂದೇ ಒಂದು ಶಬ್ದ ಅಂಬಿಯ ಬಾಯಿಂದ ಬಂತಾ?

ಅದು ಮಂಡ್ಯದ ರೈತರ ದುರಂತವಷ್ಟೇ ಅಲ್ಲ, ಕರ್ನಾಟಕದ ದುರಂತ ಕೂಡ. ಪಕ್ಕದ ಮೈಸೂರು [illegible] ಹುಟ್ಟೂರಿದ್ದಂತೆ. ಇಲ್ಲಿಗೆ ಬಿಜೆಪಿಯ ವಿಜಯಶಂಕರ್ ಕಳೆದ ಹತ್ತು ವರ್ಷದಿಂದ ಸಂಸದ [illegible] ದಿನವೂ ಕೂಡ ಇಲ್ಲಿನ ಜನಕ್ಕಿದ್ದಂತಿಲ್ಲ, [illegible] ಮೈಸೂರಿನ ಬಗ್ಗೆಯೂ [illegible] ಬಾಯಿಬಿಟ್ಟವನಲ್ಲ ವಿಜಯ ಶಂಕರ್.

ಮೂಲತಃ ಗದುಗಿನ ಈತ ತಮ್ಮನ ಹೆಸರಿಗೊಂದು ಗ್ಯಾಸ್ ಏಜನ್ಸಿ ಮತ್ತು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಎರಡು ಬೃಹತ್ ಸೈಟು ಮಾಡಿದ್ದು ಬಿಟ್ಟರೆ ಒಂದೇ ಒಂದು ದಿನ ಕಾವೇರಿಯ ಬಗ್ಗೆ ತಲೆ ಕೆಡಿಸಿಕೊಂಡವನಲ್ಲ. ಈಗ ಲಜ್ಜೆಗೆಟ್ಟು "ನಾನೂ ಹೋರಾಟಕ್ಕೆ ಬರ್ತೀನಿ" ಅಂತ ಹೇಳಿಕೆ ಕೊಡುತ್ತಾನೆ. ಏನು ಪ್ರಯೋಜನ? ಮೈಸೂರಿನ ಜನ ಕೈಯಲ್ಲಿ ಎಕ್ಕಡ ಹಿಡಿದು ಕಾಯುತ್ತಿದ್ದಾರೆ!


ಈ ವಿಜಯ್‌ಶಂಕರ್‌ಗಿಂತಲೂ ಹೆಚ್ಚಿನ ಕಾವೇರಿ ಕಾಳಜಿ ಚಾಮರಾಜನಗರದ ಸಂಸದ ಕಾಗಲವಾಡಿ ಶಿವಣ್ಣನಿಗಿರಬೇಕಿತ್ತು. ಇಂಗ್ಲಿಷ್-ಹಿಂದಿ ಗೊತ್ತಿಲ್ಲ, ಆ ಕಾರಣಕ್ಕೇ ಒಮ್ಮೆ ಕನ್ನಡದಲ್ಲಿ ಮಾತಾಡಿ ಹೆಸರಾದ. ಅದು ಬಿಟ್ಟರೆ ಶಿವಣ್ಣನಿಗೆ ಕಾವೇರಿ ಎಂಬ ಹೆಸರಿನ ಸಮಸ್ಯೆಯೊಂದಿದೆ ಎಂಬುದೇ ಗೊತ್ತಿಲ್ಲ. ಈಗ ತೀರ್ಪು ಹೊರಬಿದ್ದ ಮೇಲಂತೂ ಈತನ ಅಡ್ರೆಸ್ಸೇ ಇಲ್ಲ!



ಪಕ್ಷಗಳೆರಡೂ ಕಾವೇರಿ ವಿಷಯದಲ್ಲಿ ಲಾಬಿ-ಹೋರಾಟ ಮಾಡಲೆಂದೇ ವಿಶೇಷ ಸಂಸತ್ ಸಮಿತಿಗಳನ್ನು ರಚಿಸಿಕೊಂಡವು. ಪಾಟ್ಟಾಳಿ ಮಕ್ಕಳ್ ಕಚ್ಚಿಯಂಥ ಸಣ್ಣ ಪಕ್ಷ ಕೂಡ ತನ್ನ ಪ್ರಣಾಳಿಕೆಯಲ್ಲಿ ಕಾವೇರಿ ಹೋರಾಟದ ತನ್ನ ಮಾರ್ಗೋಪಾಯಗಳನ್ನು ಪ್ರಕಟಿಸಿತ್ತು.

ಅದೇ ಕರ್ನಾಟಕದಲ್ಲಿ ಅತಿರಥ ಮಹಾರಥರಂಥ ಕಾಂಗ್ರೆಸ್ ನಾಯಕರಿದ್ದಾಗ್ಯೂ, ಹತ್ತಾರು ವರ್ಷಗಳಿಂದ ಲೋಕಸಭೆಗೆ ಆಯ್ಕೆಯಾಗುತ್ತಾ ಬಂದ ಕೆ.ಎಚ್. ಮುನಿಯಪ್ಪ, ಆಸ್ಕರ್ ಫರ್ನಾಂಡೀಸ್, ಮಾರ್ಗರೇಟ್ ಆಳ್ವ ಇತ್ಯಾದಿಗಳ್ಯಾರೂ ಒಂದೇ ಒಂದು ದಿನ ಕರ್ನಾಟಕದ ಸಮಸ್ಯೆಗಳಿಂದಾಗಿ ಕೂತು ಚರ್ಚಿಸಿದವರೇ ಅಲ್ಲ. ಸೋನಿಯಾಗಾಂಧಿಯ ಭಟ್ಟಂಗಿ ಬಾಜಿ ಮತ್ತು ಕುರ್ಚಿಯ ವ್ಯಾಮೋಹ ಬಿಟ್ಟರೆ ಇವರು ದಶಕಗಟ್ಟಲೆ ದೆಹಲಿಗೆ ಓಡಾಡಿದ್ದು ಸ್ವಾರ್ಥದ ಹೊರತಾಗಿ ಮತ್ತೇನಕ್ಕೂ ಅಲ್ಲ.

ಇಂಥ ನಾಮರ್ದ ಮತ್ತು ನಾಲಾಯಕ್ ಸಂಸದರಿಂದಾಗಿಯೇ ಕಾವೇರಿ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆಯೆಂಬ ಪರಮಸತ್ಯವನ್ನು ಜನ ಈಗಲಾದರೂ ಅರ್ಥ ಮಾಡಿಕೊಳ್ಳಬೇಕಿದೆ. ಅದೇ ತಮಿಳುನಾಡಿನ ವಿಷಯಕ್ಕೆ ಬಂದರೆ ಅಲ್ಲಿನ ಡಿಎಂಕೆ ಮತ್ತು ಅಣ್ಣಾಡಿಎಂಕೆ



ನಿರುಪಯುಕ್ತ ಸಂಸದರ 'ಶವ'ಗಳನ್ನಿಟ್ಟು ಪ್ರತಿಭಟನೆ

ಈ ಪೈಕಿ ಬೆಂಗಳೂರು ದಕ್ಷಿಣದ ಸಂಸದ ಅನಂತ್ ಕುಮಾರ್‌ಗೆ ಎಲ್ಲ ಅವಕಾಶಗಳಿದ್ದವು. ಏಕೆಂದರೆ ತಮಿಳುನಾಡಿನ ಬಿಜೆಪಿಯಲ್ಲಿ ಅನಂತ್ ಮಟ್ಟದ ವರ್ಚಸ್ವೀ ನಾಯಕರ್‍ಯಾರೂ ಇರಲೇ ಇಲ್ಲ. ವೆಂಕಯ್ಯ ನಾಯ್ಡುರಂಥ ಘಟಾನುಘಟಿಗಳನ್ನು ತಂದು ಕನ್ನಡಿಗರ ಓಟು ಕೊಡಿ.

ಆತನನ್ನು ರಾಜ್ಯಸಭೆಗೆ ಕಳಿಸುವಲ್ಲಿ ಅನಂತ್ ತೋರಿದ ಆಸಕ್ತಿಯ ನಯಾಪೈಸೆಯನ್ನಾದರೂ ಕರ್ನಾಟಕದ ಸಮಸ್ಯೆಗಳ ಬಗ್ಗೆ ತೋರಿಸಿದ್ದರೆ ಇವತ್ತು ಈಪಾಟಿ ಅನ್ಯಾಯವಾಗುತ್ತಿತ್ತೆ?

ಹೋಗಲಿ ಈಗಲಾದರೂ ಈತನ ಬಾಯಿಂದ ರಾಜೀನಾಮೆಯ ಮಾತು ಬರುತ್ತಾ? ಬೇಡ ಕಾವೇರಿ ಅನ್ಯಾಯದ ಬಗ್ಗೆ ಸಣ್ಣದೊಂದು ಪತ್ರಿಕಾ ಹೇಳಿಕೆಯನ್ನಾದರೂ ಕೊಟ್ಟರಾ?

ಇನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದ ಗೌಡ ಅದೆಂಥಾ ಢೋಂಗಿಯೆಂದರೆ ಕೊಡಗಿಗೆ ಬಂದು ಕಾಫಿ ಬೆಳೆಗಾರರ ಪರವಾಗಿ ದೆಹಲಿಯಲ್ಲಿ ಗುಡುಗುತ್ತೇನೆಂದು ಕಾಟಾಚಾರದ ಪತ್ರಿಕಾಗೋಷ್ಠಿ ಮಾಡುತ್ತಾರೆ. ದೆಹಲಿಯ ತನಕ ತಾನು ಹೇಳಿದ ಮಾತು ಕೂಡ ಈತನಿಗೆ ನೆನಪಿರುವುದಿಲ್ಲ. ಕನಿಷ್ಠ ಜಾಫರ್ ಷರೀಫ್ ರೈಲ್ವೆಯ ಬಗ್ಗೆ ಮಾತಾಡುತ್ತಿದ್ದರು. ಆಗಾಗ ಸಂಸತ್‌ನಲ್ಲಿ ಅವರ ಕೂಗು ಕೇಳಿಸುತ್ತಿತ್ತು. ಆ ಜಾಗಕ್ಕೀಗ ಸಾಂಗ್ಲಿಯಾನ ಬಂದಿದ್ದಾರೆ. ಬಹುಶಃ ಇಂಗ್ಲಿಷ್, ಹಿಂದಿ, ಕನ್ನಡ ಯಾವೊಂದು ಭಾಷೆಯೂ ಸಂಪೂರ್ಣವಾಗಿ ಸಾಂಗ್ಲಿಯಾನಾ ಸಾಹೇಬರಿಗೆ ಗೊತ್ತಿದ್ದಂತಿಲ್ಲ. ಈತ ಸಂಸತ್ ಸದಸ್ಯನಾಗಿ ಕ್ರಿಶ್ಚಿಯನ್ ಮಿಷನರಿಗಳ ಬಗ್ಗೆ ತೋರಿಸಿದ ಆಸಕ್ತಿಯನ್ನು ಒಪ್ಪೋಣ. ಅದೇ ರೀತಿ ರಾಜ್ಯದ ಸಮಸ್ಯೆಗಳ ಬಗ್ಗೆ ಒಮ್ಮೆ ಕೂಡ ಏಕೆ ಸೊಲ್ಲೆತ್ತುವುದಿಲ್ಲ?

ಚಿಕ್ಕಬಳ್ಳಾಪುರದ ಸಂಸದ ಆರ್.ಎಲ್. ಜಾಲಪ್ಪ ಇನ್ನೂ ಬದುಕಿದ್ದಾರೆ. ಆದರೆ ಅವರು ಇನ್ನೂ ಬದುಕಿದ್ದಾರೆಂಬುದೇ ಅನೇಕರಿಗೆ ಗೊತ್ತಿಲ್ಲ. ಬಳ್ಳಾರಿಗೆ ಹಿಂದೆ

ಕೊಳೂರು ಬಸವನಗೌಡ ಎಂಪಿಯಾಗಿದ್ದ. ಬಳ್ಳಾರಿ ಬಿಟ್ಟು ಯಾವತ್ತೂ ಆಚೆಗೆ ಕಾಲಿಟ್ಟವನಲ್ಲ. ಈತನನ್ನು ಸೋಲಿಸಿ ಬಿಜೆಪಿಯ ಕರುಣಾಕರ ರೆಡ್ಡಿಯನ್ನು ಗೆಲ್ಲಿಸಿದರೆ ಈ ರೆಡ್ಡಿ ಗಣಿ ಲೂಟಿಯಲ್ಲೇ ಬಿಜಿಯಾಗಿಬಿಟ್ಟ. ಪಕ್ಕದ ಕೊಪ್ಪಳಕ್ಕೆ ಗೆದ್ದವನು ಕೆ. ವಿರೂಪಾಕ್ಷ ಎಂಬ ಕಾಂಗ್ರೆಸ್ ಮುದುಕ. ತಾನೇಕೆ ಗೆದ್ದೆ? ಏಕೆ ಬದುಕಿರಬೇಕು? ಎಂಬುದೇ ಈತನಿಗೆ ಗೊತ್ತಿಲ್ಲ. ಲೋಕಲ್ ಪಂಚಾಯ್ತಿ ಮೆಂಬರ್‌ಗಿಂತಲೂ ಕೀಳಾಗಿ ಪಂಚಾಯ್ತಿ ರಾಜಕೀಯ ಮಾಡಿಕೊಂಡೇ ಸಮಯ ಕಳೆದವನು ವಿರೂಪಾಕ್ಷಪ್ಪ. ಇನ್ನು ರೈಲ್ವೆಯಲ್ಲಿ ಕನ್ನಡಿಗರಿಗೆ ಕೆಲಸ ಸಿಗೋಲ್ಲ, ಕನ್ನಡ ಶಾಸ್ತ್ರೀಯ ಭಾಷೆಯಾಗಬೇಕು, ಕೇಂದ್ರದ ಬರಪರಿಹಾರ ನಿಧಿ ಬಂದಿಲ್ಲ, ಕಾವೇರಿ ಎಂಬ ಸಮಸ್ಯೆಯಿದೆ ಎಂಬುದು ಈತನಿಗೆಲ್ಲಿ ಅರ್ಥವಾಗಬೇಕು?

ದಾವಣಗೆರೆಯ ಸಂಸದ ಜಿ.ಎಂ. ಸಿದ್ದೇಶ್ ಬಿಜೆಪಿಯ ಸಂಸದೀಯ ಮಂಡಳಿಗೆ ಕಾರ್ಯದರ್ಶಿಯಾಗಿದ್ದಾತ. ತಮ್ಮಂದಿರ ಮೈನ್ಸ್ ದಂಧೆ ಮತ್ತು ತನ್ನ ಅಡಿಕೆ ವ್ಯಾಪಾರದ ಉಸಾಬರಿಯಲ್ಲೇ ಕಾಲ ಕಳೆದ. ಚಿತ್ರದುರ್ಗದ ಎನ್.ವೈ. ಹನುಮಂತಪ್ಪ ನಿವೃತ್ತ ಚೀಫ್ ಜಸ್ಟೀಸ್ ಎಂಬುದನ್ನು ಬಿಟ್ಟರೆ ಇನ್ನಾವ ಹೆಗ್ಗಳಿಕೆಯುಂಟು? ಒಂದೇ ಒಂದು ದಿನ ಕರ್ನಾಟಕದ ಸಮಸ್ಯೆಗಳ ಬಗ್ಗೆಯಿರಲಿ ಚಿತ್ರದುರ್ಗದ ಬಗ್ಗೆಯೂ ಹನುಮಂತಪ್ಪ ತಲೆ ಕೆಡಿಸಿಕೊಂಡವರೇ ಅಲ್ಲ.

ಹುಬ್ಬಳ್ಳಿಯ ಪ್ರಹ್ಲಾದ ಜೋಷಿ, ಧಾರವಾಡದ ಮಂಜುನಾಥ ಕುನ್ನೂರ, ಗುಲ್ಬರ್ಗಾದ ಸರಡಗಿ, ಬೀದರ್‌ನ ಸೂರ್ಯವಂಶಿ, ರಾಯಚೂರಿನ ವೆಂಕಟೇಶ್ ನಾಯಕ್, ಬೆಳಗಾವಿಯ ಸುರೇಶ್ ಅಂಗಡಿ, ಕಾರವಾರದ ಅನಂತ್ ಹೆಗಡೆ ಎಲ್ಲರ ಹಣೆಬರಹವೂ ಒಂದೇ.

ಕಾವೇರಿಯಿರಲಿ, ಕೃಷ್ಣೆಯಿರಲಿ ಜನ ಭೂತ ಮಾಡಿ ಸುಡಬೇಕಾದದ್ದು ಇಂಥ ನಾಮರ್ದ ಸಂಸದರನ್ನೇ ಹೊರತು ಜಯಲಲಿತಾ ಭೂತ ಸುಟ್ಟು ಏನು ಪ್ರಯೋಜನ?

ಇವರಿಗೆ ಕಿಂಚಿತ್ತಾದರೂ ಕನ್ನಡಿಗರ ಋಣ ಅಂತಿದ್ದರೆ ಮೊದಲು ರಾಜೀನಾಮೆ ಕೊಡಲಿ. ಅನಂತರವೇ [illegible] ಮುಖ ತೋರಿಸಲಿ.

– [illegible]

ಸೊರಬದಲ್ಲಿ ಬಭ್ರುವಾಹನ ಕಾಳಗ!



ನಮ್ಮ ನಾಡಿನ 'ಅಪರೂಪದ' ರಾಜಕಾರಣಿ ಬಂಗಾರಪ್ಪ ಮತ್ತು ಅವರ ಮಗ ಕುಮಾರ್ ಬಂಗಾರಪ್ಪನ ನಡುವೆ ನಡೆಯುತ್ತಿರುವ 'ಗುದಮುರುಗಿ' ರಾಜಕಾರಣ ನಾಡಿನ ಕುಲತಪ್ಪಿಯ ಜನರಿಗೆ ತುಂಬಾ ಮನರಂಜನೆ ಯೊದಗಿಸುತ್ತಿದೆ.

ಬಂಗಾರಪ್ಪನಲ್ಲಿ ಮನೆ ಮಾಡಿರುವ ಒಂದು ವಿಶೇಷ ವಾದ ಗುಣವೆಂದರೆ: ನಂಬಿದವರನ್ನು ಕೈಬಿಟ್ಟಿಲ್ಲ, 'ಛಿ' ಎಂದವರನ್ನು ಹತ್ತಿರ ಸೇರಿಸಿಲ್ಲ, ನಾಗರಿಕ ಸಮಾಜ ತಿರಸ್ಕರಿಸಿದವರನ್ನೆಲ್ಲಾ ಮೆರೆಸಿದ್ದಾರೆ, ಮರ್ಯಾದಸ್ಥರನ್ನೆಲ್ಲಾ ಮನೆಗೆ ಕಳಿಸಿದ್ದಾರೆ. ಕರ್ನಾಟಕದ ಯಾವ ರಾಜಕಾರಣಿಯೂ ಅವರಂತೆ ಸವಾಲುಗಳನ್ನು ಹಾಕಿ ಕೊಂಡು ಅವುಗಳನ್ನು ಎದುರಿಸಿಲ್ಲ.

ಈ ಹಿಂದುಳಿದ ವರ್ಗದ ನಾಯಕ ದಿಢೀರನೆ ಬಿಜೆಪಿಗೆ ನುಗ್ಗಿಬಿಟ್ಟು ಮಾಡಿದ ಅನಾಹುತವನ್ನೇ ಈಗ ಕರ್ನಾಟಕ ಉಣ್ಣುತ್ತಿರುವುದು. ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾಯರೊಂದಿಗೆ 'ಬಂ' ರಾಜಿಯಾಗಿದ್ದರೆ ಮತ್ತೆರಡು ವರ್ಷ ಮುಖ್ಯಮಂತ್ರಿಯಾಗಿ ಮೆರೆಯಬಹುದಿತ್ತು. ಆದರೆ ಆಗಲಿಲ್ಲ, 'ಬಂ' ಈವರಿಗೆ ಮನಸ್ತಾಪ ಮಾಡಿಕೊಂಡು ಮತ್ತೆ ರಾಜಿಯಾಗಿರುವುದು ಕಾಗೋಡು ತಿಮ್ಮಪ್ಪನೊಂದಿಗೆ ಮಾತ್ರ. ಸುಮಾರು ಮೂರುಬಾರಿ ಮನಸ್ತಾಪದಿಂದ ದೂರವಾಗಿ ಮತ್ತೆ ಒಂದಾದರೂ ಈಗಲೂ ದೂರದಲ್ಲೇ ಉಳಿದಿದ್ದಾರೆ.

ಆದರೆ ಸದ್ಯದ ರಾಜಕಾರಣದ ಫಲವಾಗಿ ತಿಮ್ಮಪ್ಪನ ಪ್ರತಿನಿಧಿಯಾಗಿ ಕುಮಾರ್ ಬಂಗಾರಪ್ಪ 'ಬಂ'ರನ್ನು ಎದುರಿಸುತ್ತಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಆಯನೂರು ಮಂಜುನಾಥ್ ಮತ್ತು 'ಬಂ' ಎದುರು ಬದುರು ನಿಲ್ಲುವ ಸ್ಥಿತಿಯುಂಟು ಮಾಡಿದ ತಿಮ್ಮಪ್ಪ, ಮಂಜುನಾಥ್ ಪರ ಜಿಲ್ಲೆಯ ಯಾವ ಕ್ಷೇತ್ರಕ್ಕೂ ಬಂದು ಪ್ರಚಾರ ಮಾಡಲಿಲ್ಲ ಎಂಬ ದೂರುಗಳಿವೆ. ಅಷ್ಟಲ್ಲದೆ, ಕುಮಾರ್ ಬಂಗಾರಪ್ಪ ಕೂಡ "ನಮ್ಮ ತಂದೆ ಗೆದ್ದರೆ, ಗೆಲ್ಲಲಿ ಬಿಡಿ" ಎಂದು ಉದಾರವಾಗಿ ನಡೆದುಕೊಂಡದ್ದೂ ಇದೆ. ಕಾಂಗ್ರೆಸ್‌ನಲ್ಲಿ ಇಂತಹ ಕಾಲೆಳೆಯುವ ಜನರಿಂದ ಬೆಚ್ಚಿ ಕೂತಿರುವ ಆಯನೂರ್ ಮಂಜುನಾಥ್ ಮತ್ತೆ ಮರಳಿ ಮಾತೃಸಂಸ್ಥೆ ಕಡೆ ಹೊರಟಿದ್ದಾರೆ. ಅದೇ ಬೇರೆ ವಿಷಯ. ಸದ್ಯಕ್ಕೆ 'ಬಂ', 'ಕುಬಂ' ಜಗಳಕ್ಕೆ ಬರೋಣ.

'ಬಂ' ದಿಢೀರನೆ ದಿಕ್ಕುತಪ್ಪಿದ ರಾಜಕಾರಣಿಯಂತೆ ಬಿಜೆಪಿಗೆ ಹೊರಟಾಗ ಅನಿವಾರ್ಯವಾಗಿ ಕುಮಾರ್ ಬಂಗಾರಪ್ಪನೂ ಹೊರಟರು. ಆದರೆ 'ಬಂ' ತಮ್ಮ ಇನ್ನೊಬ್ಬ ಮಗ ಮಧು ಬಂಗಾರಪ್ಪನೊಟ್ಟಿಗೆ ಬಿಜೆಪಿ ಪ್ರವೇಶ ಮಾಡಿದ ಕೂಡಲೇ ಬಾಗಿಲು ಬಂದ್ ಮಾಡಿಕೊಂಡು "ಅವನನ್ನು ಸೇರಿಸಬೇಡಿ" ಎಂದರು. ಆಗ ನಿಜಕ್ಕೂ ಬಂಗಾರಪ್ಪ ಮಗನನ್ನು ಎಷ್ಟು ದ್ವೇಷಿಸುತ್ತಾರೆಂದು ಸ್ವತಃ 'ಕುಬಂ'ಗೂ ಗೊತ್ತಾಯಿತು. ಆಗ ತನ್ನ ವರಸೆ ಬದಲಿಸಿದ 'ಕುಬಂ' "ತಮ್ಮ ಎದುರಾಳಿಗಳನ್ನು ಸೋಲಿಸಲೆಂದು ಹಲವಾರು ರಣಕಲಿಗಳನ್ನು ತನ್ನ ಸೈನಿಕರಿಗೆ ಕಲಿಸಿಕೊಟ್ಟ ಕಮಾಂಡೆಂಟೇ ಈಗ ಎದುರು ಪಾಳಯ ಸೇರಿಕೊಂಡಿದ್ದಾರೆ. ಇದು ನಿಜಕ್ಕೂ ಒಬ್ಬ ನಾಯಕನ ನಿಜವಾದ ಪತನ" ಎಂದು ತಮ್ಮ ತಂದೆಯವರನ್ನು 'ತೂಕ ವಾಗಿ'ಯೇ ಜರಿದಿದ್ದರು. ಅದನ್ನು ಜನ ಮೆಚ್ಚಿಕೊಂಡು ಕುಬಂನ ಕೈಹಿಡಿದು ಗೆಲ್ಲಿಸಿದರು.

ಮಗನ ಗೆಲುವೇ 'ಬಂ' ಮತ್ತೆ ರೊಚ್ಚಿಗೇಳುವಂತೆ ಮಾಡಿತು. ನಿಜಕ್ಕೂ 'ಬಂ' ರಾಜಕಾರಣದಲ್ಲಿ ಅವರ ಅವಕೃಪೆಗೆ ತುತ್ತಾದ ಯಾರನ್ನು ಬಿಟ್ಟಿಲ್ಲ; ಎಲ್ಲರನ್ನು ಮಟ್ಟಹಾಕಿದ್ದಾರೆ. ಆದರೆ ಈಗ ಹಿರಣ್ಯಾಕ್ಷನಿಗೆ ಮಗನೇ ಮೃತ್ಯುವಾದಂತೆ 'ಕುಬಂ' ದೊಡ್ಡ ಸವಾಲಾಗಿ ಬೆಳೆದಿದ್ದಾರೆ.

'ಬಂ' ಮತ್ತು 'ಕುಬಂ' ಜಗಳವನ್ನು ಹಲವರು ನಾಟಕವೆಂದೇ ಭಾವಿಸಿದ್ದರು. ಏಕೆಂದರೆ ಈ ಜಗಳದ ನಡುವೆಯೂ ಇಬ್ಬರೂ ಜೊತೆಯಲ್ಲೇ ಟೆನ್ನಿಸ್ ಆಡುವುದನ್ನು ಶಿವಮೊಗ್ಗದ ಕಾರ್ಯಕರ್ತರೇ ನೋಡಿದ್ದಾರೆ. ಅಪ್ಪ, ಮಗ ಟೆನ್ನಿಸ್ ಕೋರ್ಟ್‌ನಲ್ಲಿ ಎದುರುಬದುರು ನಿಂತು ಟೆನ್ನಿಸ್ ಆಡುವಾಗ 'ಕುಬಂ' ಎಷ್ಟೇ ಚೆನ್ನಾಗಿ ಆಡುತ್ತಿದ್ದರು, 'ಬಂ'ಗೆ ಮಾತ್ರ ಚಪ್ಪಾಳೆ ತಟ್ಟಿ ಬಂದವರಿದ್ದಾರೆ. ಅದೇನೇ ಆದರೂ ಒಬ್ಬ ತರುಣನ ಎದುರು, ಅವನೆಂತಹ ಗ್ಯಾಪ್ ಹಾಕಿದರೂ ಬಿಡದೆ ಚೆಂಡೆತ್ತಿ ಮತ್ತೆ ಅದು ಬರುವ ಜಾಗಕ್ಕೆ ಮಿಂಚಿನ ವೇಗದಲ್ಲಿ ಬಂದು ಹಾಜರಾಗುವ ಎಪ್ಪತ್ತು ನಾಲ್ಕು ವರ್ಷದ ಮುದುಕನ ಆಟದ ವೈಖರಿಯನ್ನು ಮೆಚ್ಚದವರಿಲ್ಲ. ಆದರೆ ಆಟದ ನಂತರ ಅಪ್ಪನ ಮುಖ ಅತ್ತ, ಮಗನ ಮುಖ ಇತ್ತ.

ರಾಜಕಾರಣದ ದಿಕ್ಕುಗಳು ಕೂಡ ಹಾಗೇ ಇವೆ. ಏನೇ ಮಾಡಿದರೂ 'ಬಂ'ರ ಹಿಂದೆ ಹೋಗುವ ಸ್ಥಿತಿಯಲ್ಲಿ 'ಕುಬಂ' ಇಲ್ಲ, ಮಗನನ್ನು ಕ್ಷಮಿಸುವ ಹಂತದಲ್ಲಿ 'ಬಂ' ಕೂಡ ಇಲ್ಲ. ಈ ಕಾರಣದಿಂದ 'ಬಂ' ಕಟ್ಟಿದ ಸೊರಬದ ಸೇನೆ ಇಬ್ಭಾಗಗೊಂಡು ಎದುರುಬದುರಾ ನಿಂತು ತಮ್ಮ ಯುದ್ಧ ಸಾಮಗ್ರಿಗಳ ಸದ್ದು ಮಾಡತೊಡಗಿದೆ.

'ಬಂ' ಮಗನನ್ನು ಎಂದೂ ವಿನಾಕಾರಣ ದೂಷಿಸಿಲ್ಲ, ಆದರೆ 'ಕುಬಂ' ಅಪ್ಪನನ್ನು ಅಣಕಿಸುವ ಯಾವ ಸಂದರ್ಭವನ್ನು ಬಿಟ್ಟಿಲ್ಲ! ಹಾಗೆ ನೋಡಿದರೆ ರಾಜಕಾರಣದಲ್ಲಿ ಯಾರನ್ನು ವಿನಾಕಾರಣ ದೂಷಿಸದ ಸಭ್ಯ ರಾಜಕಾರಣಿಯಾದ 'ಕುಬಂ' ಅಪ್ಪನನ್ನು ಮುಲಾಜಿಲ್ಲದೆ ಟೀಕಿಸಬೇಕಾದರೆ ಇವರಿಬ್ಬರ ನಡುವೆ ಅಂತಹದ್ದೇನು ನಡೆದಿದೆ ಎಂಬುದೇ ಚಿದಂಬರ ರಹಸ್ಯವಾಗಿದೆ!

ಜನರನ್ನು ಮರುಳು ಮಾಡಿ, ಈವರೆಗೆ ಕ್ಷೇತ್ರಕ್ಕೆ ಯಾವ ಕೆಲಸವನ್ನು ಮಾಡಿಸದೆ ಕಾಲ ಹಾಕಿದ 'ಬಂ'ಗೆ, ಕೆಲಸ ಮಾಡಿಸುತ್ತಿರುವ ಮಗನೇ ಒಂದು ಸವಾಲಾಗಿ... "ನಲವತ್ತು ವರ್ಷ ರಾಜಕಾರಣ ಮಾಡಿದವರು ... ಕ್ಷೇತ್ರಕ್ಕೆ ಏನು ಮಾಡಿದ್ದಾರೆ, ತೋರಿಸಿ" ಎಂದು 'ಕು... ಹಾಕಿದ ಸವಾಲಿಗೆ 'ಬಂ' ಏನಾದರೂ ಮಾಡಲೇಬೇ... ಅದಕ್ಕಾಗಿ ಸಂಸದರ ನಿಧಿಯಿಂದ ಸೊರಬದ ಹ... ಕರಡಿಗೆರೆಯಲ್ಲಿ ಮಾಚಿದೇವ ಮಡಿವಾಳ ಸಂಘ... ಸಮುದಾಯ ಭವನ ನಿರ್ಮಿಸಿದರು. ಇದರ ಉದ್ಘಾ... ಸಮಾರಂಭವೂ ನಿಗದಿಯಾಯ್ತು.

ಸ್ಥಳೀಯ ಕಾರ್ಯಕ್ರಮಗಳ ಪ್ರೊಟೋಕಾಲ್ ಪ... ಯಾರು ಉದ್ಘಾಟಿಸಬೇಕು, ಯಾರು ಅಧ್ಯಕ್ಷತೆ ವ... ಬೇಕು, ಯಾರು ಅತಿಥಿಗಳಾಗಬೇಕು ಎಂಬುದು ಸರ... ಕರ್ಮಚಾರಿಗಳು ತೆಗೆದುಕೊಳ್ಳುವ ತೀರ್ಮಾನ... ಆದರೆ 'ಬಂ' ಇದ್ದಲ್ಲಿ ಅಂತಹವು ನಡೆಯಲಾ... ಆದರಂತೆ 'ಬಂ' ಹಿಂಬಾಲಕರು ತಮ್ಮ ಸಾಹೇ... ಭವನವನ್ನು ಉದ್ಘಾಟಿಸುತ್ತಾರೆಂದು ಆಮಂತ್ರಣ ಪ... ಮಾಡಿಸಿದವು. 'ಕುಬಂ' ಹಿಂಬಾಲಕರೂ ಕೂಡ ತ... ಸಾಹೇಬರೇ ಭವನವನ್ನು ಉದ್ಘಾಟಿಸಲಿದ್ದಾರೆ... ಆಮಂತ್ರಣ ಮಾಡಿಸಿಕೊಂಡರು. ಆದರಂತೆ '... ಬರುವ ಮುನ್ನವೇ ಭವನವನ್ನು ಉದ್ಘಾಟಿಸಿಬಿಡ... ತವಕದಿಂದ 'ಕುಬಂ' ಹೋದರು. ಅಷ್ಟರಲ್ಲಿ ಜಮಾ... ಸಿದ್ದ 'ಬಂ' ಬೆಂಬಲಿಗರು, ಕುಮಾರ್ ಬಂಗಾರ... ವಿರುದ್ಧ ಘೋಷಣೆ ಕೂಗಿದರು. ಇದರಿಂದ ಸಿಟ್ಟಿ... ಕಾಂಗ್ರೆಸ್ಸಿಗರು ಪ್ರತಿ ಘೋಷಣೆಯೊಂದಿಗೆ 'ಬಂ' ಪ... ಮೇಲೆ ಬಿದ್ದರು. ಸ್ಥಳೀಯವಾಗಿ ಕರ್ತವ್ಯ ನಿರ್ವಹಿ... ಪೊಲೀಸರಿಗೆ ಗೊಂದಲ ಉಂಟಾಗಿ ಯಾರನ್ನು ... ಯಾರಿಗೆ ಚಚ್ಚುವುದೆಂದು ಗೊತ್ತಾಗದೆ ಅವರೂ ಪ್ರೇ... ರಾದರು. ಕಡೆಗೆ ಕುಮಾರ್ ಬಂಗಾರಪ್ಪನೇ ಮಧ್ಯ... ವಹಿಸಿ ಉಭಯ ಬಣಗಳ ಸಂಭವಿತ ಘರ್ಷಣೆಯ... ನಿಲ್ಲಿಸಿದರು. "ಮಾಚಿ ದೇವರ ಹೆಸರಿನಲ್ಲಿ ಸಂಘ... ರಾಗಿರುವ ಮಡಿವಾಳರು ತಮ್ಮವರನ್ನೇ ಬೆಡ್‌ಶೀಟ್‌... ಹೊಗೆಯಲು ಹಾತೊರೆಯುವುದು ಸಲ್ಲದು. ... ಆಗಲಿ, ನಾವು ತಂದೆಮಕ್ಕಳು. ನಾನು ಅಪ್ಪನ

ಎಚ್.ಎಸ್.ಶಿವಶಂಕರ್ V/s ಸಂಗೀತ

ಸತ್ಯ ಏನು?

ದಾವಣಗೆರೆ



ಶಿವಶಂಕರ್

ದಾವಣಗೆರೆ ಡಿಸಿಎಂ ಲೇಔಟನಲ್ಲಿರುವ ಸಂಗೀತ ಎಂಬ ಹುಡುಗಿ ಕಡುಬಡತನ ಕುಟುಂಬದವಳಾದರೂ, ರಾಜ್ಯಮಟ್ಟದ ಬಾಸ್ಕೆಟ್ ಬಾಲ್ ಆಟಗಾರ್ತಿ. ಹಲವು ಬಾರಿ ರಾಷ್ಟ್ರಮಟ್ಟದಲ್ಲೂ ಆಟವಾಡಿದ್ದಾಳೆ. ಕೆಲವು ಬಾರಿ ಚಾಂಪಿಯನ್ ಕೂಡಾ ಆಗಿದ್ದಾಳೆ. ಇತ್ತೀಚೆಗೆ ಈಕೆಯ ತಂದೆತಾಯಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಚಿಕ್ಕಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ–ಈ ಅಂಗಡಿಯೇ ಸಂಗೀತಳ ಕುಟುಂಬಕ್ಕೆ ಜೀವನಾಧಾರ. 2004, ಏಪ್ರಿಲ್ ತಿಂಗಳಲ್ಲಿ ದಾವಣಗೆರೆಯ ಪ್ರತಿಷ್ಠಿತ ಚೇತನ ಹೋಟೆಲ್ (ಮಾಜಿ ಮಂತ್ರಿ ಎಚ್. ಶಿವಪ್ಪನದು)ನಲ್ಲಿ ಎರಡು ಸಾವಿರ ಸಂಬಳಕ್ಕೆ ಸಂಗೀತ ರಿಸೆಪ್ಷನಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದಳು. ಎರಡು ವರ್ಷ ಕೆಲಸ ಮಾಡಿದ ನಂತರ 2006 ಮೇ ತಿಂಗಳಲ್ಲಿ ಆ ಕೆಲಸವನ್ನು ಬಿಟ್ಟಳು ಅಥವಾ ಮಾಲೀಕರೇ ಬಿಡಿಸಿದ್ದರು. ಕೆಲಸ ಬಿಟ್ಟು ಈಗಾಗಲೇ ಒಂಭತ್ತು ತಿಂಗಳಾಗಿದೆ ಆದರೆ ಕೆಲಸದಲ್ಲಿದ್ದಾಗ ನಡೆದಿತ್ತೆನ್ನಲಾದ ಲೈಂಗಿಕ ಕಿರುಕುಳ ಮತ್ತು ಬೆದರಿಕೆಗಳು ಜನವರಿ 29 ರವರೆಗೂ ಮುಂದುವರೆದು ಫೆ. 4 ರಂದು ಸಂಗೀತ ಕೆಲವು ನಿದ್ರೆ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾಳೆಂದು ಬಹುತೇಕ ಪತ್ರಿಕೆಗಳಲ್ಲಿ ವರದಿಯಾಗಿದೆ; ಸಂಗೀತ ಕೂಡಾ ಹೀಗೇ ಹೇಳುತ್ತಿದ್ದಾಳೆ.

'ಲಂಕೇಶ್' ಈ ವಿಷಯದ ಬಗ್ಗೆ ಸಂಗೀತಳನ್ನು ಹಾಗೂ ಎಚ್.ಎಸ್. ಶಿವಶಂಕರ್ (ಎಚ್. ಶಿವಪ್ಪನವರ ಮಗ) ಮತ್ತು ಸಂಗೀತಳಿಗೆ ಚಿಕಿತ್ಸೆ ನೀಡಿದ ವೈದ್ಯರೊಂದಿಗೆ ಮಾತನಾಡಿದಾಗ ಸಹಜವಾಗಿ ವೈರುಧ್ಯಗಳಿಂದ ಕೂಡಿದ ಹೇಳಿಕೆಗಳು ಬರುತ್ತಿವೆಯಾದರೂ ಈ ಹೇಳಿಕೆಗಳು ಅರ್ಧ ಸತ್ಯದಿಂದ ಕೂಡಿವೆ ಎಂಬ ಭಾವನೆ ಯಾರಿಗಾದರೂ ಬರುತ್ತದೆ.

ದಾವಣಗೆರೆ

ಚೇತನ ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿನ ಮ್ಯಾನೇಜರ್ ದತ್ತಾತ್ರೇಯ ಹೆಗಡೆ ಹಾಗೂ ಓಂಕಾರಪ್ಪ ಈ ಇಬ್ಬರು ಬಹಳ ಕೀಳುಮಟ್ಟದಿಂದ ವರ್ತಿಸುತ್ತಿದ್ದರು, ಲೈಂಗಿಕ ಕಿರುಕುಳದ ಭಾಗವಾಗಿ –ಇಂಥದೇ ಡ್ರೆಸ್ ಹಾಕು, ನಿನ್ನ ಫ್ರಿಕ್ಚರ್ ನೋಡಬೇಕು ಎಂದು ನೇರವಾಗಿ ಪೀಡಿಸಿದರೆ– ಎಚ್.ಎಸ್. ಶಿವಶಂಕರ್ ಫೋನ್ ಮಾಡುವುದರ ಮೂಲಕ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎನ್ನುವುದು ಸಂಗೀತಳ ಹೇಳಿಕೆ. ಆಗಲೇ ಯಾಕೆ ದೂರು ಕೊಡಲಿಲ್ಲ? ಎಂದು ಕೇಳಿದರೆ "ಆಸಿಡ್ ಹಾಕುತ್ತೇವೆ, ನಿಮ್ಮ ಕುಟುಂಬವನ್ನೇ ಊರು ಬಿಡಿಸುತ್ತೇವೆ ಎಂದು ಬೆದರಿಸಿದ್ದರಿಂದ ದೂರು ಕೊಡಲಿಲ್ಲ" ಎಂದು ಸಂಗೀತ ಹೇಳುತ್ತಾಳೆ. ಕೆಲಸ ಬಿಟ್ಟು 9 ತಿಂಗಳ ನಂತರ ಈಗ ಏಕೆ ಆತ್ಮಹತ್ಯೆಗೆ ಯತ್ನಿಸಿದೆ? ಎಂದರೆ "ಜನವರಿ 28 ರಂದು ಬಾಸ್ಕೆಟ್ ಬಾಲ್ ಆಟದಲ್ಲಿ ನಮ್ಮ ತಂಡ ಪ್ರಥಮ ಸ್ಥಾನದಲ್ಲಿ ಗೆದ್ದಿತ್ತು, ಜ. 29 ರಂದು ಈ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಕೊಡಲು ಹೋಗುತ್ತಿದ್ದಾಗ ವಿದ್ಯಾರ್ಥಿ ಭವನದ ಹತ್ತಿರ ಅಡ್ಡಗಟ್ಟಿದ ಓಂಕಾರಪ್ಪ 'ನೀನಿನ್ನೂ ಊರು ಬಿಟ್ಟಿಲ್ಲವಾ? ನಿಮ್ಮ ಕುಟುಂಬದವರನ್ನೇ ಊರು ಬಿಡಿಸುತ್ತೇನೆ' ಎಂದು ಮುಂತಾಗಿ ಬೆದರಿಸಿದ, ಹಾಗಾಗಿ ನಾನು ನಿದ್ರೆ ಮಾತ್ರೆ ತೆಗೆದುಕೊಂಡೆ" ಎಂದು ಸಂಗೀತ ಹೇಳುತ್ತಾಳೆ.



ಸಂಗೀತಾ

ಓಂಕಾರ... ಬೆದರಿಸಿದ್ದು 29 ರಂದು ಆದರೆ ಸಂಗೀ... ಫೆಬ್ರವರಿ 4 ರಂದು ರಾತ್ರಿ ನಿದ್ರೆ ಮಾತ್ರೆ ಸೇವಿಸಿದೆ ಎಂದು ಹೇಳುತ್ತಿದ್ದಾಳೆ. ಓಂಕಾರಪ್ಪ ಬೆದರಿಸಿದ ... ದಿನಗಳ ನಂತ... ಸಂಗೀತ ನಿದ್ರೆ ಮಾತ್ರೆಗಳನ್ನು ಸೇವಿಸಿರುವುದು ಸ್ವಲ್ಪ ಗೊಂದಲಕ್ಕೀಡು ಮಾಡುತ್ತದೆ. ಫೆ. 4 ರಂ... ರಾತ್ರಿ ಸಂಗೀತ ಅಶ್ವಿನಿ (ಖಾಸಗಿ) ಆಸ್ಪತ್ರೆಗೆ ದಾಖಲಾದ... ಆರು ಮಾತ್ರೆ (ಕಾಂಪೋಸ್ ಮಾತ್ರೆ) ನುಂಗಿರುವುದ... ವೈದ್ಯರು ದಾಖಲಿಸಿ ಪ್ರಾಣಾಪಾಯವಿಲ್ಲವೆಂದು ಹ... ದ್ದಾರೆ. ನಂತರದಲ್ಲಿ ಚಿಗಟೇರಿ ಆಸ್ಪತ್ರೆಗೆ ಸಂಗೀತ ದಾ... ಲಾಗಿದ್ದಾಳೆ. ಅಲ್ಲಿಂದಲೇ ಸುದ್ದಿಯು ಎಲ್ಲ ಪತ್ರಿಕೆಗ... ಸೇರಿದೆ. ಆ ಸುದ್ದಿಯು ಎಚ್.ಎಸ್. ಶಿವಶಂ... ಮೇಲೆಯೇ ಕೇಂದ್ರೀಕರಣಗೊಂಡಿದೆ.

ನನಗೇನು ಅವಳೇ ಬೇಕಾ, ಬೇರೆ... ಬೇಕಾದಷ್ಟು ಮಾಡಬಹುದು

ಸಂಗೀತಳ ಹೇಳಿಕೆಗೆ ತದ್ವಿರುದ್ಧವಾಗಿ "ಬಡ... ಹುಡುಗಿ ಅಂತ ಕೆಲ್ಸ ಕೊಟ್ಟೆ. ಮ್ಯಾನೇಜರ್ ಹೆ... 25 ವರ್ಷದಿಂದ ನಮ್ಮಲ್ಲಿದ್ದಾರೆ. ಬಹಳ ಸ್ಟ್ರಿಕ್ಟು. ಸಂಗೀ...

ತಾಟಕೊಂಡು ಹುಟ್ಟಿದವನು. ಅನಿವಾರ್ಯವಾಗಿ ಎರಡು ರಾಜಕೀಯ ಪಕ್ಷಗಳಲ್ಲಿದ್ದು ರಾಜಕಾರಣ ಮಾಡಬೇಕಿದೆ. ಆದರೆ ನೀವು ಮಡಿವಾಳ ಸಮುದಾಯದವರು ಗಲಾಟೆ ಮಾಡಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವೂ ಇಲ್ಲ" ಎಂದು ಸಮಾಧಾನ ಹೇಳಿ ಕುಬಂ ಹೊರಟರು. ಆಗ 'ಬಂ' ಪಿತ್ಥ ನೆತ್ತಿಗೇರಿಸಿಕೊಂಡ ಸಮಾಜವಾದಿ ಪಕ್ಷದವನೊಬ್ಬ 'ಕುಬಂ'ನನ್ನು ಏಕವಚನದಿಂದ ನಿಂದಿಸಿಬಿಟ್ಟ. ಆಗ 'ಕುಬಂ' ಬೆಂಬಲಿಗರು ಯುದ್ಧವನ್ನು ಘೋಷಿಸಿ 'ಬಂ' ಬೆಂಬಲಿಗರ ಮೇಲೆ ಬಿದ್ದರು. ಕುಬಂ ಬೆಂಬಲಿಗರು ಜಾಸ್ತಿಯಿದ್ದ ಕಾರಣಕ್ಕೆ ಅವರ ಪರವಾದ ಜಯಘೋಷ ಮತ್ತು ಗಲಾಟೆಗೆ ಹೆದರಿದ ಸಮಾಜವಾದಿ ಮುಖಂಡ ಕ್ಷಮೆ ಯಾಚಿಸಿದ್ದರಿಂದ 'ಕುಬಂ' ಪಡೆ ನಿರ್ಗಮಿಸಿತು.



ಇದೆಲ್ಲ ಆದನಂತರ ಬಂಗಾರಪ್ಪನವರ ಸವಾರಿ ಆಗಮಿಸಿತು. ಅಷ್ಟರಲ್ಲಿ ನಡೆದಿದ್ದ ಘಟನೆಯ ವಿವರ ಪಡೆದಿದ್ದ 'ಬಂ' ಸಿಟ್ಟಿಗೆದ್ದು, "ಅವರಿವರು ಕಟ್ಟಿಸಿದ್ದ ಭವನ, ಸೇತುವೆ, ಕಟ್ಟಡದ ಉದ್ಘಾಟನೆಗೆಂದು ಕತ್ತರಿ ಟೇಪ್ ಹಿಡಿದುಕೊಂಡು ಓಡಿ ಬರುವವರಿಗೆ ಇನ್ನು ಮುಂದೆ ಸರಿಯಾಗಿ ಬುದ್ಧಿ ಕಲಿಸಿ.. ಸೊಂಟ ಮುರಿದು ಕಳಿಸಿ. ಇನ್ನು ಮುಂದೆ ನನ್ನ ತಾಲ್ಲೂಕಿನಲ್ಲಿ ಇಂತಹದ್ದಕ್ಕೆಲ್ಲ ಅವಕಾಶವಿಲ್ಲ. ನನ್ನನ್ನು ಕೆಣಕಿದವರನ್ನು ನಾನು ಸುಮ್ಮನೆ ಬಿಡುವುದಿಲ್ಲ. ಈ ಬಂಗಾರಪ್ಪ ಏನು ಎಂಬುದನ್ನು ತೋರಿಸಬೇಕಾಗುತ್ತವೆ" ಎಂದು ಠೇಂಕಾರ ಮಾಡಿದರು. ಇದರಿಂದ 'ಕುಬಂ' ಕಂಡರಾಗದವರಿಗೆ ಪ್ರಚೋದನೆ ಉಂಟಾಯ್ತು. ಅಲ್ಲದೆ ಅಪ್ಪನ ಠೇಂಕಾರದಿಂದ ಸ್ಫೂರ್ತಿಗೊಂಡ ಮತ್ತೊಬ್ಬ ಮಗ ಮಧು ಬಂಗಾರಪ್ಪ "ನನ್ನನ್ನು ರೌಡಿ ಎಂದು ಜರಿದಿದ್ದ ಆ ಕುಮಾರ್ ಬಂಗಾರಪ್ಪ ಇಂದು ಜನರನ್ನು ಕರೆತಂದು ರೌಡಿ ಕೆಲಸಕ್ಕೆ ಇಳಿದಿದ್ದಾರೆ. ಇಂತಹ ಆಟ ಇನ್ನು ಮುಂದೆ ನಡೆಯುವುದಿಲ್ಲ" ಎಂದು ಘೋಷಿಸಿದರು.



ಅಪ್ಪ ಮಕ್ಕಳ ಇಂತಹ ಠೇಂಕಾರಿದ ದೆಸೆಯಿಂದ ಇವರನ್ನು ಬೆಂಬಲಿಸುವ ಜನ ಸಮರೋತ್ಸಾಹಿಗಳಾಗುತ್ತಿದ್ದಾರೆ. ತನ್ನ ವಿರೋಧಿಗಳ ಸೊಂಟ ಮುರಿದು ಬುದ್ಧಿ ಕಲಿಸಿ ಎಂಬ 'ಬಂ' ಮಾತಿನಿಂದ ಪ್ರಚೋದನೆಗೊಂಡಿರುವ 'ಬಂ' ಬೆಂಬಲಿಗರು, 'ಕುಬಂ' ಬೆಂಬಲಿಗರನ್ನು ವಿಚಾರಿಸಿಕೊಳ್ಳಲು ಹಾತೊರೆಯುತ್ತಿದ್ದಾರೆ.


ಇದೇ ಹೊತ್ತಿಗೆ ಮಡಿವಾಳ ಜನಾಂಗಕ್ಕೆ ಅವಮಾನಕರವಾದ ಮಾತುಗಳನ್ನಾಡಿದವರನ್ನು ಸುಮ್ಮನೆ ಬಿಡುವುದಿಲ್ಲವೆಂದು ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ. ಇತ್ತ 'ಕುಬಂ' ಬೆಂಬಲಿಗ ಮಡಿವಾಳವರು "ಈ ಬಂಗಾರಪ್ಪ ಕಳೆದ 40 ವರ್ಷಗಳಿಂದ ಕೆಳಜಾತಿಗಳ ನಡುವೆ ಹುಳಿ ಹಿಂಡಿ ಒಡೆದಾಳುವ ರಾಜಕಾರಣ ಮಾಡಿಕೊಂಡು ಬರುತ್ತಿದ್ದಾರೆ" ಎಂದು. ತಾವೂ ಒಂದು ದೂರನ್ನು ದಾಖಲಿಸಿದ್ದಾರೆ. ಹೀಗೆ 'ಬಂ' ಮತ್ತು 'ಕುಬಂ' ಬೆಂಬಲಿಗರು ತಮ್ಮ ನಾಯಕರ ಮಾತುಗಳನ್ನು ನಿಜಕ್ಕೂ ಸೀರಿಯಸ್ಸಾಗಿಯೇ ತೆಗೆದುಕೊಂಡು ರಣಕಹಳೆ ಮೊಳಗಿಸುತ್ತಿದ್ದಾರೆ.

ಸೊರಬ ಕ್ಷೇತ್ರದಲ್ಲಿ ತನಗೆ ಎದುರಾಳಿಯೇ ಇಲ್ಲದಂತೆ ಬದುಕಿದ್ದ 'ಬಂ' ತಮ್ಮ ನಂತರ ಮಗನನ್ನೇ ತಂದು ನಾಟಿ ಹಾಕಿ ಬೆಳೆಸುವುದಕ್ಕಿಂತ ಇನ್ನಾರನ್ನೇ ಬೆಂಬಲಿಸಿದ್ದರೂ ಇಂತಹ ಸ್ಥಿತಿ ಬರುತ್ತಿರಲಿಲ್ಲ. ಈಗ ತಮ್ಮ ವೈರಿ ಮಗನ ವಿರುದ್ಧ ಮತ್ತೊಬ್ಬ ಮಗನನ್ನು ತಂದು ನಿಲ್ಲಿಸಿ ಕಾಳಗವೇರ್ಪಡಿಸಿರುವ 'ಬಂ' ಮುಂದಿನ ಚುನಾವಣೆಯಲ್ಲಿ ಈ ಕ್ಷೇತ್ರವನ್ನು ಕರ್ನಾಟಕದ ಕುತೂಹಲದ ರಣಭೂಮಿಯಾಗಿಸಲಿದ್ದಾರೆ. ಆಗ ಇಲ್ಲಿಂದ ಹೊರಡುವ ಕಂದಪದ್ಯ, ಸೀಸಪದ್ಯಗಳನ್ನು ನೆನೆದರೆ ಬಬ್ರುವಾಹನ ಕಾಳಗ ನೆನಪಿಗೆ ಬರುತ್ತದೆ.

ಇಷ್ಟರ ನಡುವೆಯೂ 'ಬಂ'ದು ನಾಡುಮೆಚ್ಚುವಂತಹ ಎದುರುಬದುರಾ ರಾಜಕಾರಣವೆಂದು ಒಪ್ಪಲೇಬೇಕಿದೆ. ಬುದ್ಧಿಮಾಂದ್ಯರಂತಿರುವ ತನ್ನ ನಾಲ್ಕು ಮಕ್ಕಳನ್ನು ಕರ್ನಾಟಕ ಮುಕ್ಕಲು ಬಿಟ್ಟು ಅತ್ಯಂತ ಎಚ್ಚರಿಕೆಯಿಂದ ಅವರನ್ನು ಕಾಯುತ್ತಿರುವ ದೇವೇಗೌಡರಿಗೆ ಹೋಲಿಸಿದರೆ 'ಬಂ' ನಿಜಕ್ಕೂ 'ವಿಶೇಷ ಗುಣಗಳ' ನಾಯಕ! ಅದಕ್ಕಿಂತಲೂ ತಂದೆಗೆ ಶೆಡ್ಡು ಹೊಡೆದು ರಾಜಕಾರಣ ಮಾಡುತ್ತಿರುವ ಕುಮಾರ್ ಬಂಗಾರಪ್ಪನ ಧೈರ್ಯವನ್ನಂತೂ ಮೆಚ್ಚಲೇಬೇಕು!

ಎಷ್ಟೇ ಆಗಲಿ ಬಂಗಾರಪ್ಪನವರ ಮಗ ಅಲ್ಲವೆ!


-ವರದಿಗಾರ



ಸಿಕ್ಕಿಬಿದ್ದ ಲಂಚಕೋರ

ಇವನು ಸಿ.ಬಿ. ನಾಗರಾಜು ದಾವಣಗೆರೆಯ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಬೇತೂರು ರಸ್ತೆಯಲ್ಲಿರುವ ತಾಲ್ಲೂಕು ಪಂಚಾಯ್ತಿ ಕಚೇರಿಗೆ ನಿಯಮಿಸಲ್ಪಟ್ಟ ವಿಸ್ತರಣಾಧಿಕಾರಿ. ಇತರೆ ಜವಾಬ್ದಾರಿಗಳೊಂದಿಗೆ, ಹೊಸದಾಗಿ ನೌಕರಿ ಪಡೆದುಕೊಂಡವರಿಗೆ ಸಿಂಧುತ್ವ ಪ್ರಮಾಣಪತ್ರ ನೀಡಲು ಸಂಬಂಧಿಸಿದ ಅಭ್ಯರ್ಥಿಗಳ ಊರುಗಳಿಗೆ ಹೋಗಿ ತನಿಖೆ ಮಾಡಿ ಅವರ ವರ್ಗವನ್ನು ದೃಢೀಕರಿಸಿ ವರದಿ ಸಲ್ಲಿಸುವುದು ಇವನ ಕೆಲಸ. ಈ ಬಾರಿ ಶಿಕ್ಷಕರ ಹುದ್ದೆಗೆ ಆಯ್ಕೆಯಾದವರು ವರ್ಗ ದೃಢೀಕರಣದ ವರದಿಗಾಗಿ ವಿಸ್ತರಣಾಧಿಕಾರಿ ನಾಗರಾಜನನ್ನು ಅವಲಂಬಿಸಬೇಕಾಗಿತ್ತು. ಈ ತನಿಖಾ ವರದಿಯನ್ನು ನೀಡಬೇಕಾದ ನಾಗರಾಜ ಕಚೇರಿಯಲ್ಲೇ ಕುಳಿತು ವರದಿ ನೀಡುತ್ತಿದ್ದ; ಪುಗಸಟ್ಟೆಯಲ್ಲ! ಪ್ರತಿಯೊಂದು ಅರ್ಜಿಗೆ ಎರಡು ಸಾವಿರ ರೂಪಾಯಿಗಳ ಲಂಚವನ್ನು (ನಾಗರಾಜ ಹೇಳುವಂತೆ ಫೀಜು) ನಿಗದಿಗೊಳಿಸಿಕೊಂಡಿದ್ದ. ಮೂಲತಃ ಚನ್ನಗಿರಿ ತಾಲೂಕಿನವನಾದ ನಾಗರಾಜ ಕೂಡ್ಲಿಗಿಯಿಂದ ದಾವಣಗೆರೆಗೆ ವರ್ಗವಾಗಿ ಬಂದಿದ್ದ. ಇಲ್ಲಿಂದಲೂ ಬೇರೆಡೆಗೆ ವರ್ಗವಾಗಿದ್ದರೂ ತಿನ್ನಲು ಹೇಸಿಗೆ ದಂಡಿಯಾಗಿ ಇಲ್ಲಿ ಸಿಗುತ್ತಿದ್ದುದರಿಂದ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಇಲ್ಲಿಯೇ ಉಳಿದುಕೊಂಡಿದ್ದ. ಸಮಯ ಒಂದೇ ರೀತಿ ಇರುವುದಿಲ್ಲವಲ್ಲ, ಮೊನ್ನೆ 7.2.2007 ರಂದು 1500 ರೂ. ಲಂಚವನ್ನು ಪಡೆದುಕೊಂಡು ಸಿ.ಬಿ. ನಾಗರಾಜ್ ಹೀನಾಯವಾಗಿ ಸಿಕ್ಕುಬಿದ್ದಿದ್ದಾನೆ.

'ಸುಮ್ಮನೆ' ಸಿದ್ದಪ್ಪ ಮತ್ತು ಇಂಜಿನಿಯರ್ ಹನುಮಂತರೆಡ್ಡಿಯಂತಹ ಕುಳಗಳನ್ನು ಯಶಸ್ವಿಯಾಗಿ ರೈಡ್ ಮಾಡಿದ್ದ ಲೋಕಾಯುಕ್ತ ಎಸ್ಪಿ ಕೆ.ಎಸ್. ನಾಯಕ್ ಹಾಗೂ ಇನ್ಸ್‌ಪೆಕ್ಟರ್ ಡಿ.ಎಚ್. ಗಂಗಾಧರ್‌ರವರು ಕೈದಾಳ್ ಕೃಷ್ಣಮೂರ್ತಿಯ ಅಹವಾಲನ್ನು ಸ್ವೀಕರಿಸಿ ಕರಾರುವಾಕ್ಕಾಗಿ ಯೋಜನೆಯನ್ನು ರೂಪಿಸಿ ತಯಾರಾಗಿದ್ದರು. ಇದಕ್ಕೆ ಮೊದಲೇ ಕೃಷ್ಣಮೂರ್ತಿ ತನ್ನ ಸ್ನೇಹಿತರ ಮೊಬೈಲ್‌ನಿಂದ ನಾಗರಾಜನಿಗೆ ಫೋನ್ ಮಾಡಿ, 1500 ರೂ. ಮಾತ್ರ ಹೊಂಚಲು ಸಾಧ್ಯವಾಗಿದೆ.... ಅದನ್ನೇ ತಂದುಕೊಡುತ್ತೇನೆ ಎಂದು ಮುಂತಾಗಿ ಮಾತನಾಡಿ ನಾಗರಾಜನ ವಾಯ್ಸ್ ರೆಕಾರ್ಡ್ ಮಾಡಿಕೊಂಡಿದ್ದರು. 7 ರಂದು ಬೆಳಗ್ಗೆ ಬರಿಗೈಲಿ ನಾಗರಾಜನ ಹತ್ತಿರ ಹೋಗಿ ಮಧ್ಯಾಹ್ನ ಹಣ ತರುತ್ತೇನೆ ಎಂದು ಸಮಯವನ್ನೂ ನಿಗದಿಗೊಳಿಸಿಕೊಂಡಿದ್ದರು. ಹೀಗೆ ಎಲ್ಲ ಪೂರ್ವ ಸಿದ್ಧತೆಯೊಂದಿಗೆ ಕೃಷ್ಣಮೂರ್ತಿ 1500 ರೂ.ಗಳನ್ನು ವಿಸ್ತರಣಾಧಿಕಾರಿ ನಾಗರಾಜನಿಗೆ ಕೊಟ್ಟಿದ್ದಾರೆ. ಆ ಹಣವನ್ನು ನಾಗರಾಜ ಎರಡೂ ಕೈಯ್ಯಲ್ಲಿ ಎಣಿಸುತ್ತಾ ಕಚೇರಿಯ ಮಹಡಿ ಮೆಟ್ಟಲಿಳಿದು ಬಂದಿದ್ದಾನೆ.




ಲೋಕಾಯುಕ್ತ ಎಸ್ಪಿ ನಾಯಕ್

ಇದನ್ನೇ ಕಾಯುತ್ತಿದ್ದ ಲೋಕಾಯುಕ್ತ ಇಲಾಖೆಯವರು ನಾಗರಾಜನನ್ನು ಹಿಡಿದು ಅವನ ಕಚೇರಿಗೇ ಎಳೆದುಕೊಂಡು ಹೋಗಿದ್ದಾರೆ. ಏನೆಲ್ಲ ಕೊಸರಾಡಲು ಪ್ರಯತ್ನಿಸಿದರೂ ನಾಗರಾಜ ಆಧಾರ ಸಮೇತ ಸಿಕ್ಕುಬಿದ್ದಿದ್ದಾನೆ.

ದಾವಣಗೆರೆ

ದಾವಣಗೆರೆ ತಾಲ್ಲೂಕು ಕೈದಾಳ್ ಗ್ರಾಮದ ಕೈದಾಳ್ ಕೃಷ್ಣಮೂರ್ತಿ ಮೂರ್‍ನಾಲ್ಕು ವರ್ಷಗಳಿಂದ ಇಲ್ಲಿನ ಪ್ರಗತಿಪರ ಸಂಘಟನೆಗಳ ನಾಯಕತ್ವವನ್ನು ವಹಿಸಿಕೊಂಡು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದವರು. ಕಡುಬಡತನದ ಹಾಗೂ ಭೂರಹಿತ ಕುಟುಂಬದಿಂದ ಬಂದ ಈತನ ಟಿ.ಸಿ.ಎಚ್. ಓದಿಗಾಗಿ ಅವರ ಕುಟುಂಬದವರು ದನಕರು-ಮೇಕೆಗಳನ್ನೆಲ್ಲ ಮಾರಿಕೊಂಡಿದ್ದರು. ಈ ಬಾರಿಯ ಶಿಕ್ಷಕರ ಹುದ್ದೆಗೆ ಈತ ಆಯ್ಕೆಯಾಗಿ ಯಾದಗಿರಿ ತಾಲ್ಲೂಕಿನ ಆರ್ಯಶಂಕರದೊಡ್ಡಿ ಎಂಬ ಕುಗ್ರಾಮಕ್ಕೆ ಈತನನ್ನು ನೇಮಕ ಮಾಡಲಾಗಿ ಸಿಂಧುತ್ವ ಪ್ರಮಾಣ ಪತ್ರವನ್ನು ಮಾಡಿಸಲು ಸಂಬಂಧಿಸಿದ ಕಚೇರಿಗಳಿಗೆಲ್ಲ ಅಲೆದು ಕೊನೆಗೆ ವಿಸ್ತರಣಾಧಿಕಾರಿ ಸಿ.ಬಿ. ನಾಗರಾಜನಿಂದ ವರ್ಗಾ ದೃಢೀಕರಣ ಪತ್ರಕ್ಕೆ ವರದಿ ಮಾಡಿಸಲು ಎರಡು ಮೂರು ದಿನ ಅಲೆದಿದ್ದಾರೆ. 'ಎರಡು ಸಾವಿರ ಫೀಜು ಕೊಟ್ಟರೆ ಮಾತ್ರ, ಕೆಲಸ ಮಾಡಿಕೊಡುತ್ತೇನೆ' ಎಂಬ ಉತ್ತರ ನಾಗರಾಜನಿಂದ ಬಂದಾಗ 'ತಂದು ಕೊಡ್ತೀನಿ' ಎಂದಷ್ಟೇ ಹೇಳಿ, ತನ್ನ ಜೊತೆಗಿನ [illegible] ಸ್ನೇಹಿತರಿಗೂ ಈ ವಿಷಯವನ್ನು ಹೇಳಿ, ಲೋಕಾಯುಕ್ತ ಎಸ್ಪಿ ಕೆ.ಎಸ್. ನಾಯಕ್‌ರೊಂದಿಗೆ ನಾಗರಾಜನನ್ನು [illegible] ಹಾಕಲು [illegible]



ಕೈದಾಳ್ ಕೃಷ್ಣಮೂರ್ತಿ

ಅಧಿಕಾರಿಗಳ ಹತ್ತಿರ ಕೆಲಸ ಮಾಡಿಸಿಕೊಳ್ಳಲು ಹೋಗಿ ಕ್ಷೀಣದನಿಯಲ್ಲಿ ಅಂಗಲಾಚುತ್ತಿದ್ದ ಸಾಮಾನ್ಯ ಜನರಿಗೆ ಈ ಘಟನೆಯು ಸ್ವಲ್ಪಮಟ್ಟಿಗೆ ಧೈರ್ಯ ನೀಡುವುದರೊಂದಿಗೆ ಲಂಚಕೋರ ಅಧಿಕಾರಿಗಳ ಎದೆಯಲ್ಲಿ ನಡುಕ ಹುಟ್ಟಿಸಿದೆ. ಆದರೆ ಈ ವರ್ಷದಲ್ಲೇ ಶಿಕ್ಷಕರ ನೌಕರಿ ಪಡೆದುಕೊಂಡ ನೂರಾರು ಮಂದಿ ವಿಸ್ತರಣಾಧಿಕಾರಿ ನಾಗರಾಜನಿಗೆ ಎರಡೆರಡು ಸಾವಿರದಂತೆ ಹಣವನ್ನು ಈಗಾಗಲೇ ಕೊಟ್ಟುಬಿಟ್ಟದ್ದಾರೆ ನ್ನಲಾಗುತ್ತಿದೆ. ಹಣವನ್ನು ಕೊಟ್ಟವರು ನಾಗರಾಜನಿಂದ ಅದನ್ನು ಕಕ್ಕಿಸಬೇಕು. ಹಾಸ್ಟೆಲ್‌ಗಳ ಮಹಿಳಾ ವಾರ್ಡನ್‌ಗಳು ಕಚೇರಿ ಕೆಲಸಕ್ಕಾಗಿ ಇವನ ಹತ್ತಿರ ಬಂದರೆ ಗಂಟೆಗಟ್ಟಲೆ ಸತಾಯಿಸಿ ತನ್ನ ರಸಿಕತೆಯನ್ನು ಮೆರೆಯುತ್ತಿದ್ದ ನಾಗರಾಜ ಉನ್ನತ ಸಂಪರ್ಕಗಳನ್ನು ಹೊಂದಿರುವ ಪ್ರಭಾವಿ ವ್ಯಕ್ತಿ ಎಂದು ಹೇಳಲಾಗುತ್ತಿದೆ. ಲೋಕಾಯುಕ್ತರಿಗೆ ಸ್ವಯಂ ಅಧಿಕಾರವನ್ನು ಕೊಡಲು ಇನ್ನೂ ಮೀನಮೇಷ ಎಣಿಸುತ್ತಿರುವ [illegible] ರೆಡ್‌ಹ್ಯಾಂಡಾಗಿ ಸಿಕ್ಕುಬಿದ್ದ ಲಂಚಕೋರ ನೌಕರರ [illegible] ಸರ್ಕಾರದ ಮೇಲಿನ ಭರವಸೆಯನ್ನು ಕೈಬಿಡ[illegible]

-ವರದಿಗಾರ

ತಪ್ಪು ಲೆಕ್ಕಗಳನ್ನು ಹೊರಗೆಳೆದಾಗ ಹೆಗಡೆ ಮೇಲೆಯೇ ಸುಳ್ಳು ಆರೋಪ ಮಾಡಿದ್ದಳು. ಓಂಕಾರಪ್ಪನೂ ಒಳ್ಳೆಯ ಮನುಷ್ಯ. ಅವಳನ್ನು ಊರುಬಿಡಿಸೋಕೆ ನಾನೇನು ಪಾಳೆಗಾರನೇ? ನನಗೆ ಅವಳೇ ಬೇಕಾ? ಬೇರೆ ಬೇಕಾದಷ್ಟು ಮಾಡಬಹುದು. ನಾನು ಯಾವುದೇ ತನಿಖೆ-ವಿಚಾರಣೆಗೆ ಸಿದ್ಧ. ನಿಷ್ಪಕ್ಷಪಾತವಾಗಿ ತನಿಖೆ ನಡೆಯಲಿ, ಇದರಿಂದ ನಾಶಾಗೋದು ಅವಳಿಗೇ ಹೊರತು ನನಗಲ್ಲ.. ಸಂಗೀತಳ ಕೋಚ್ ವೀರೇಶ ಮುಂತಾದವರು ಇದನ್ನೆಲ್ಲ ಮಾಡಿಸುತ್ತಿದ್ದಾರೆ...." ಎಂದು ಮುಂತಾಗಿ ಎಚ್.ಎಸ್. ಶಿವಶಂಕರ್ ಹೇಳುತ್ತಾರೆ.

ತನ್ನಿಂದಾಗಲೀ, ತನ್ನ ಕಡೆಯವರಿಂದಾಗಲೀ ಏನೂ ತಪ್ಪು ನಡೆದಿಲ್ಲ ಎನ್ನುವ ರೀತಿಯಲ್ಲಿ ಶಿವಶಂಕರ್ ಮಾತನಾಡುತ್ತಾ "ನಾನು ಒಂದು ಬಾರಿ ಮಾತ್ರ ಸಂಗೀತಳನ್ನು ನೋಡಿದ್ದು. ಉಳಿದಂತೆ ರಾತ್ರಿ 11 ಗಂಟೆಯ ಸಮಯದಲ್ಲಿ ಮಾತ್ರ ಹೋಟೆಲಿಗೆ ಊಟಕ್ಕೆ ಹೋಗುತ್ತೇನೆ" ಎಂದು ಹೇಳುತ್ತಾರೆ. ಆದರೆ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಕೆಲಸ ಮಾಡುತ್ತಿದ್ದ ಸಂಗೀತಳ ಮೇಲೆ ನಡೆಯುತ್ತಿದ್ದ ಕಿರುಕುಳ ಇವರಿಗೆ ಗೊತ್ತಿಲ್ಲದಿರಬಹುದು. ಎರಡು ವರ್ಷಗಳ ಕಾಲ ಕೆಲಸ ಮಾಡಿದ ಸಂಗೀತಳ ಲೆಕ್ಕಪತ್ರ ಹಾಗೂ ನಡವಳಿಕೆ ಸರಿ ಇರದೇ ಇದ್ದಿದ್ದರೆ ಪ್ರಾರಂಭದಲ್ಲೇ ಕ್ರಮ ಕೈಗೊಳ್ಳಬಹುದಿತ್ತಲ್ಲವೇ? ನಿರ್ಗತಿಕ ಹುಡುಗಿಯೊಬ್ಬಳು ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಆಡಳಿತ ವರ್ಗದವರ ಹಾಗೂ ಗಿರಾಕಿಗಳ ಕಿರುಕುಳಕ್ಕೆ ಗುರಿಯಾಗಿರಲಾರಳೆಂದು ಒಪ್ಪಲು ಸಾಧ್ಯವಾಗುವುದಿಲ್ಲ. ಆದರೆ ಎಚ್.ಎಸ್. ಶಿವಶಂಕರ್ ವರ್ಷಗಟ್ಟಲೆ ದಿನನಿತ್ಯ ಫೋನಿನಲ್ಲಿ ಲೈಂಗಿಕ ಕಿರುಕುಳ ನೀಡುತ್ತಿದ್ದರೆಂಬುದು [illegible] ನಿಜವಿರಬಾರದು. ಏಕೆಂದರೆ ಇದೇ ಹೋಟೆಲಿನ [illegible] ಆಗರ್ಭ ಶ್ರೀಮಂತಿಕೆ [illegible] ಹುಡುಗಿಯೊಬ್ಬಳನ್ನು ಒಲಿಸಿಕೊಳ್ಳಲು, ಇಲ್ಲವೆ ಖರೀದಿ ಮಾಡಲು ಪ್ರಯತ್ನಿಸುತ್ತಾನೆ. ಇದೆಲ್ಲವನ್ನು ಬಿಟ್ಟು ಬರೀ ಫೋನಿನಲ್ಲಿ ಮಾತ್ರ ಮಾತನಾಡಿ ಲೈಂಗಿಕ ಕಿರುಕುಳ ನೀಡುತ್ತಿದ್ದನೆಂದರೆ ನಂಬುವುದು ಹೇಗೆ?

ತಾನು ಕೆಲಸ ಮಾಡುತ್ತಿದ್ದ ಪರಿಸರದಿಂದ ತೀರಾ ಕೀಳುಮಟ್ಟದ ನಿಂದನೆಗಳಿಂದಾಗಿ, ತಾನು ಮಾಡಿಕೊಂಡಿರುವ ಕೆಲವು ಎಡವಟ್ಟುಗಳಿಂದಾಗಿ, ತನ್ನ ಬಡತನದ ಪರಿಸ್ಥಿತಿಯಿಂದ ಹತಾಶಳಾಗಿ ಸಂಗೀತ ಹೀಗೆ ಮಾತನಾಡುತ್ತಿರಬಹುದು. ಆದರೆ ರಾಜಕಾರಣಿಯಾದ ಎಚ್.ಎಸ್. ಶಿವಶಂಕರ್ ಜವಾಬ್ದಾರಿ ಏನಾಗಬೇಕು? ತನ್ನ ಬಲವನ್ನೆಲ್ಲ ಉಪಯೋಗಿಸಿ ಸಂಗೀತಳ ಬಗ್ಗೆ ಅಪಪ್ರಚಾರ ಮಾಡುವುದು ಸರಿಯಾ? ಇಂಥ ಸಂದರ್ಭಗಳಲ್ಲಿ ನಿರ್ಲಿಪ್ತವಾಗಿದ್ದು ನಡೆಯುವ ತನಿಖೆಗಳಿಗೆ ತಲೆಬಾಗಿ ತನ್ನ ಸಾಚಾತನವನ್ನು ತೋರಿಸಿಕೊಳ್ಳಬೇಕು. ಅದು ಬಿಟ್ಟು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ ಸಂಗೀತಳ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆನ್ನುವುದಾಗಲೀ, ಸಂಗೀತಳ ಮನೆಯ ಪರಿಸ್ಥಿತಿಯ ಬಗ್ಗೆ ನಾಲಿಗೆ ಹರಿಬಿಟ್ಟು ಮಾತನಾಡುವುದಾಗಲೀ ಮಾಡಬಾರದು. ತಮ್ಮ ಕುಟುಂಬದ ಸುತ್ತ ಶಾಮನೂರು ಶಿವಶಂಕರಪ್ಪನಂತಹ ಪ್ರಭಾವಿಗಳ ರಾಜಕೀಯ ಶತ್ರುತ್ವವನ್ನು ಕಟ್ಟಿಕೊಂಡಿರುವಾಗ, ಅವರೆಲ್ಲ ಇಂತಹ ಗಾಸಿಪ್ಪುಗಳನ್ನೇ ಬಳಸಿಕೊಂಡು ತುಳಿಯಲು ತಯಾರಾಗಿರುವ ಕೋಮುವಾದಿಗಳಿರುವಾಗ ಇಂತಹ ಸೂಕ್ಷ್ಮ ವಿಷಯಗಳನ್ನು ಸಮಾಧಾನದಿಂದ ಬಗೆಹರಿಸಿಕೊಳ್ಳಬೇಕು. ಪತ್ರಿಕೆಗಳಲ್ಲಿ ಬರೆದವರ ಮೇಲೆಲ್ಲ ಬರೀ ಮಾನನಷ್ಟ ಮೊಕದ್ದಮೆಗಳ ಅಸ್ತ್ರಗಳನ್ನು ಪ್ರಯೋಗಿಸುವುದನ್ನೇ ಕಸುಬಾಗಿಸಿಕೊಂಡರೆ ಶಿವಶಂಕರ್‌ರ ರಾಜಕೀಯ ಭವಿಷ್ಯಕ್ಕೆ ಒಳ್ಳೆಯದಲ್ಲ.

-ಚಂದ್ರಶೇಖರ ತೋರಣಘಟ್ಟ

ಓದು ಅಥವಾ ವಿಮರ್ಶೆ ಎಂದು ಇಡಿಯಾದ ಓದು. ಅದು ಕೃತಿಯನ್ನು ಒಟ್ಟಾಗಿ ಒಂದಾಗಿ ಕಾಣುವ ಕಾಣ್ಕೆ. ಓದಿನ ಕಾಣ್ಕೆಯಲ್ಲಿ ನಾವು ಆನೆಯನ್ನು ಇಡಿಯಾದ ಸೃಷ್ಟಿ ವಿಶೇಷವಾಗಿ ಕಾಣುತ್ತೇವೆ. ಆನೆಯನ್ನು ನಾವು ಬಿಡಿಯಾಗಿ ಕಂಡಾಗ, ಕುರುಡರ ಕಾಣ್ಕೆಯಂತೆ ನಮಗೆ ಆನೆ ಕಂಬ (ಕಾಲು), ಮೊರ (ಕಿವಿ), ಗೋಡೆ (ಹೊಟ್ಟೆ)ಗಳಾಗಿ ಗೋಚರಿಸುತ್ತದೆ. ಆನೆಯನ್ನು ಇಡಿಯಾಗಿ ಕಂಡ ಪ್ರೇಕ್ಷಕನಿಗೆ ಅದು 'ಸೃಷ್ಟಿ ಕಾಲ್ಗೊಂಡಿ'ದಂತಹ ಮಹತ್ತಿನ, ಅದ್ಭುತದ ಕಾಣ್ಕೆ ವಿಶೇಷವಾಗುತ್ತದೆ. ಆನೆಯನ್ನು ಇಡಿಯಾಗಿ ಕಂಡವನೆ ಅದು ಆಕಾಶಕ್ಕೆ ಕಾಲು ಬಂದುದೆಂದು ಹೇಳಬಲ್ಲ ದಾರ್ಶನಿಕ, ದೃಷ್ಟಾರನಾಗುತ್ತಾನೆ-ಆಕಾಶಕ್ಕೆ ಕಾಲು ಕೊಟ್ಟು ಅದನ್ನು ಭೂಮಿಗಿಳಿಸುತ್ತಾನೆ. ಭೂಮ್ಯಾಕಾಶಗಳನ್ನು ಒಂದು ಮಾಡಿ ಆನೆ ಮಾಡುತ್ತಾನೆ. ಸೃಷ್ಟಿಯ ಅದ್ಭುತವನ್ನು ಸಾಕ್ಷಾತ್ಕರಿಸುತ್ತಾನೆ.

"ರಾಮಾಯಣದ ಓದು" ರಾಮಸೀತೆಯರ ಕಥೆಯನ್ನು ಕಾಣುವ ಪ್ರಯತ್ನ ಮಾಡುತ್ತದೆ ಎಂದು ತಿಳಿಯುತ್ತೇನೆ. ಗಂಡಹೆಂದಿರಲ್ಲಿ ಇರಬೇಕಾಗಿದ್ದ ಆತ್ಮೀಯತೆ, ಪ್ರೀತಿ, ಒಬ್ಬರಿಗೊಬ್ಬರು ಪ್ರಾಣವನ್ನೂ ಕೊಡಬಲ್ಲ ಅನ್ಯೋನ್ಯತೆ-ಇವು ಗಂಡುಸಾದ ರಾಮನಲ್ಲಿ ಹೆಂಡತಿಯಾದ, ಹೆಣ್ಣಾದ ಸೀತೆ ಬಗೆಗೆ ಇದೆ ಎಂಬುದು ನಮ್ಮೆಲ್ಲರ ಸಾವಿರಾರು ವರ್ಷದ ನಂಬಿಕೆ. ಆದರೆ ನಾವು ಕಾವ್ಯವನ್ನು ಬಿಚ್ಚುಗಣ್ಣಿನಿಂದ, ಓದಿನ ಪ್ರಾಮಾಣಿಕತೆಯಲ್ಲಿ, ಓದುಗರಿಗಾಗಿ ಓದಿದಾಗ ರಾಮನಿಗೆ ಸೀತೆಯ ಬಗ್ಗೆ ಅಪೇಕ್ಷೆಗಿಂತಲೂ ಉಪೇಕ್ಷೆಯೇ ಹೆಚ್ಚಾಗಿ ಕಾಣುವುದು. ಅಪೇಕ್ಷೆ ಸುಳ್ಳೋ ಎನ್ನುವಷ್ಟು ಉಪೇಕ್ಷೆ ಒತ್ತಾಗಿ ಕಂಡುಬರುವುದು, ಸಹಜವಾಗಬಲ್ಲುದಾಗಿದೆ; ಅಷ್ಟೇ ಅಲ್ಲ, ಆ ಉಪೇಕ್ಷೆಯ ಪರಮಾವಧಿ ಸೀತೆಯನ್ನು ಬೆಂಕಿಗೆ ಹಾಕುವ, ಕಾಡಿಗಟ್ಟುವ ಅಮಾನುಷತೆ, ಬರ್ಬರತೆಯನ್ನೂ ಪಡೆದುಕೊಳ್ಳಬಹುದಾಗಿದೆ. ರಾಮಾಯಣದಲ್ಲಿನ ರಾಮನ ಸತ್ಯ ಓದಿನ ಸಾಕ್ಷ್ಯದ್ದಾಗಿದ್ದರೆ, ಅದು ಸಾರ್ಥಕವಾದ "ಓದು ಅಥವಾ ವಿಮರ್ಶೆ"ಯಾಗುತ್ತದೆ.

ಓದು ಎಂದೂ ವಾದವಾಗಲಾರದು. ವಾದದೊಡನೆ ಓದು ವಿಕಾರವಾಗುತ್ತದೆ, ವಿಕಪಕ್ಷೀಯವಾಗುತ್ತದೆ, ತರ್ಕವಾಗಿಬಿಡುತ್ತದೆ. ರಾಮಾಯಣದ 'ಓದು'ವಾದವಾಗಿದ್ದುದೇ ಆದರೆ ಅದಕ್ಕೆ ಯಾವಾಗಲೂ ಪ್ರತಿವಾದದ ಭಯವಿದೆ. ಪ್ರತಿವಾದಿಗಳು, ನಮ್ಮ ಸಂಪ್ರದಾಯದಲ್ಲಿರುವ ಕವಿಗಳು, ಸಂಗೀತ ವಿದ್ವಾಂಸರುಗಳು, ರಾಜಾಸ್ಥಾನಗಳಲ್ಲಿ ಒಬ್ಬರನ್ನೊಬ್ಬರು ವಾದದಲ್ಲಿ ಪಾಂಡಿತ್ಯದಲ್ಲಿ ಕಿತ್ತು ತಿನ್ನುವಂತೆ, ಆ ಓದಿನ ವಾದವನ್ನು ಹರಿದು ಹಂಚುತ್ತಾರೆ. ಆದರೆ, 'ರಾಮಾಯಣದ ಓದು' ರಾಮಾಯಣದ ಸಾಕ್ಷ್ಯದಲ್ಲೇ ನಿಂತ ಪ್ರಾಮಾಣಿಕ ಪ್ರಯತ್ನವಾಗಿದ್ದರೆ ಮಾತ್ರ ಅದಕ್ಕೆ ಯಾವ ಭಯವೂ ಇಲ್ಲವಾಗುತ್ತದೆ.

ಇಲ್ಲಿ ನಾನು ರಾಮಾಯಣದ ಒಂದು ಪ್ರಸಂಗವನ್ನೂ ಓದುತ್ತಿದ್ದೇನೆ. ಸೀತೆ ಲಕ್ಷ್ಮಣನನ್ನು ದೂರಿ, ಹೀನಾಯವಾಗಿ ಅವನ ಮೇಲೆ ಲೈಂಗಿಕ ಆರೋಪಣೆ ಮಾಡಿ "ನೀನು ನನಗಾಗಿ ಒಂಟಿಯಾಗಿ ರಾಮನ ಹಿಂದೆ ಬಂದಿದ್ದೀಯಾ, ನೀನೂ ಭರತನೂ ಈ ಸಂಚು ಮಾಡಿರಬೇಕು. ಆದರೆ ನಾನು ನಿನಗೆ ಸರ್ವಥಾ ಸೇರುವವಳಲ್ಲ" ಎಂದು ಪರಿಪರಿಯಾಗಿ ನಿಂದಿಸುತ್ತಾಳೆ. ಈ ಲೈಂಗಿಕ ಆರೋಪಣೆ ಎಷ್ಟು ಅನ್ಯಾಯದ್ದೆಂದರೆ, ಸೀತೆಯ ಅಂತರ್ಯದಲ್ಲಿ ಎಲ್ಲಿಯೋ ಹುದುಗಿಕೊಂಡಿದ್ದ ಲಕ್ಷ್ಮಣನ ಬಗೆಗಿನ ಪ್ರೇಮ ಅಥವಾ ಲೈಂಗಿಕ ಚಿಂತನೆ ಈ ಸಂದರ್ಭದ ನೆವದಲ್ಲಿ ಚಿಮ್ಮಿ ಹೊರಬಂದಿತೇನೋ ಎಂದು ಶಂಕಿಸುವಂಥದ್ದು. ಸೀತೆಯ ಆ ಲೈಂಗಿಕ ಸಂವೇದನಾ ಶಂಕೆಗೆ ಪೂರಕವಾಗಿ ಲಕ್ಷ್ಮಣ ಅತ್ತ ಹೋದ ಮರುಕ್ಷಣವೇ ರಾವಣನು ಸನ್ಯಾಸಿಯ ವೇಷದಲ್ಲಿ ಸೀತೆಯನ್ನು ಕಂಡು ಲೈಂಗಿಕವಾಗಿ ಅವಳ ಅಂಗಾಂಗ ವರ್ಣನೆಯನ್ನು ಮಾಡುತ್ತಿರಲು, ಸೀತೆ ರಾವಣನ ಆ ಮಾನಸಿಕ ಲೈಂಗಿಕ ದುರಾಕ್ರಮಣವನ್ನು, ತನ್ನ ಮೇಲೆ ಶಬ್ದದ ಮುಖೇನ ನಡೆಯುವ ರೇಪ್‌ಅನ್ನು, ಗುಪ್ತವಾಗಿ ಆನಂದಿಸುವುದು. ರಾವಣನ ಈ ಮಾತುಗಳನ್ನು ಗಮನಿಸಿ:

ಸಮಾಶ್ಶಿಖರಿಣಸ್ನಿಗ್ಧಾ · ಪಾಂಡುರಾಶದನಾಸ್ತವ
ವಿಶಾಲೇವಿಮಲೇನೇತ್ರೇ ರಕ್ತಾಂತೇಕೃಷ್ಣ ತಾರಕೇ
ವಿಶಾಲಂಜಘನಂಪೀನಮೂರೂಕರಿಕರೋಪಮಾ
'ಏತಾವುಪಚಿತೌವೃತ್ತೌ ಸಂಹತೌಸಂಪ್ರವಲ್ಗಿತೌ
ಪೀನೋನ್ನತಮುಖಾಕಾಂತೌ ಸ್ನಿಗ್ಧೌತಾಲಫಲೋಪಮಾ
ಮಣಿಪ್ರವೇಕಾಭರಣಾ ರುಚಿರೌತೇಪಯೋಧರಾ
ಚಾರುಸ್ಮಿತೇ! ಚಾರುಮತಿ! ಚಾರುನೇತ್ರೇ! ವಿಲಾಸಿನಿ!
ಮನೋಹರಸಿಮೇಕಾಂತೇ! ನದೀಕೂಲಮಿವಾಂಭಸಾ
ಕರಾಂತಮಿತಮಧ್ಯಾಸಿ ಸಂಕೇಶೀಸಂಹಸ್ತನೀ'
(ಅರಣ್ಯ 46, 17-21)

ಎಲೌ ಸ್ತ್ರೀಯೆ! ನಿನ್ನ ದಂತಗಳು ಹೆಚ್ಚುಕಡಿಮೆಯಿಲ್ಲದೆ ಒಂದೇ ಸಮನಾದುದಾಗಿ ಒಳ್ಳೆಯ ತುದಿಭಾಗವುಳ್ಳುವಾಗಿ ನುಣ್ಣಗೂ ಬೆಳ್ಳಗೂ ಇರುವುವು. ನಿನ್ನ ನೇತ್ರಗಳು ಬಹುವಿಶಾಲವಾಗಿವೆ. ಮಾತ್ರವಲ್ಲದೆ ಮಾಲಿನ್ಯವಿಲ್ಲದುವು. ಕೊನೆಗಳಲ್ಲಿ ಕೆಂಪು ಬಣ್ಣವುಳ್ಳವೂ.

ಬಹು ಕಪ್ಪಾಗಿ ತಾರಕೆಗಳುಳ್ಳವೂ ಆಗಿವೆ. ನಿನ್ನ ಜಘನ ಪ್ರದೇಶವು ಬಹುವಿಶಾಲವಾಗಿದೆ. ಊರು ಪ್ರದೇಶಗಳೋ?

ಆನೆಯ ಸೊಂಡಿಲನ್ನು ಹೋಲುತ್ತವೆ! ಎಲೌ ಪುಣ್ಯವತಿಯೇ! ನಿನ್ನ ಸ್ತನಗಳು ಉನ್ನತವಾಗಿಯೂ, ಗುಂಡಾಗಿಯೂ, ಮಧ್ಯದಲ್ಲಿ ಅವಕಾಶವಿಲ್ಲದೆ ಒಂದಕ್ಕೊಂದು

ಸೇರಿಕೊಂಡಿರುವುವೂ, ಭಾರಾತಿಶಯದಿಂದ ಬಳುಕುತ್ತಿರುವುವೂ.

ಚೆನ್ನಾಗಿ ಬಲಿತು ಉನ್ನತಗಳಾದ ಚೂಚುಕ ಪ್ರದೇಶಗಳುಳ್ಳವೂ


ಸ್ಪೃಹೆಯನ್ನುಂಟು ಮಾಡುತ್ತಿರುವವೂ, ಬಹುಗಟ್ಟಿಯಾಗಿರುವವೂ, ಗಾತ್ರದಲ್ಲಿ ದೊಡ್ಡ ತಾಳೆಯಫಲದಂತಿರುವುವೂ.

ನವರತ್ನಗಳ ಆಭರಣಗಳಿಂದಲಂಕೃತವಾದವೂ, ಬಹುಸುಂದರವೂ

ಆಗಿವೆ. ನೀನು ಬಹುಸೊಗಸಾದ ನಸುನಗೆಯಿಂದ ಕೂಡಿರುವೆ, ನಿನ್ನ ದಂತಗಳೂ ನೇತ್ರಗಳೂ ಬಹುರಮಣೀಯವಾಗಿವೆ. ನೀನು ಮಹಾ ವಿಲಾಸವತಿಯು. ಓ ಮನೋಹಾರಿಣಿಯೇ! ಎಲೌ ಭಾಗ್ಯಶಾಲಿನಿಯೇ!

ಮೇಲೆ ಹೇಳಿದ ಶೃಂಗಾರದಿಂದೊಡಗೂಡಿದವಳಾಗಿ ನದೀ

ಪ್ರವಾಹವು ತೀರವನ್ನು ಕೊರೆಯುವಂತೆ ನೀನೆನ್ನ ಮನವನ್ನು



ಸೂರೆಗೊಳ್ಳುತ್ತಿರುವೆ. ಸುಂದರಿ ನೀನು ಸಣ್ಣಗಿರುವ ಮಧ್ಯಪ್ರದೇಶವುಳ್ಳವಳು; ಬಹು ರಮಣೀಯವಾದ ಕೇಶರಾಶಿಯುಳ್ಳವಳು, ಒಂದಕ್ಕೊಂದು ಸೇರಿಕೊಂಡಿರುವ ಸ್ತನದ್ವಯವುಳ್ಳವಳು.

(ಮೋಟಗಾನಹಳ್ಳಿಯವರ ಭಾಷಾಂತರ)

ಈ ಸಂದರ್ಭವನ್ನು ನೋಡಿ: ದುಃಖದಿಂದ ಕಂಗಾಲಾದ ಸೀತೆ ಲಕ್ಷ್ಮಣನನ್ನು ಅಟ್ಟಿದ್ದಾಳೆ. ಮರುಕ್ಷಣದಲ್ಲೇ ಒಬ್ಬ ಬ್ರಾಹ್ಮಣ (ದ್ವಿಜ) ಬಂದಿದ್ದಾನೆ. ಬಂದವನೇ ಅವಳ ಶೃಂಗಾರ ವರ್ಣನೆ ಮಾಡುತ್ತಾನೆ. ಸೀತೆ ಅದನ್ನು ಆಲಿಸುವಷ್ಟು ವ್ಯವಧಾನ ಉಳ್ಳವಳಾಗಿದ್ದಾಳಷ್ಟೇ ಅಲ್ಲ, ಆ ಬ್ರಾಹ್ಮಣನು ತನ್ನ ಅಂಗಾಂಗ ವರ್ಣನೆಯನ್ನು ಲೈಂಗಿಕವಾಗಿ ಮಾಡುತ್ತಿರುವಾಗ ಅದನ್ನು ಅನುಮೋದಿಸುವಂತೆ, ಆನಂದಿಸುವಂತೆ ಅವಳ ದೇಹಭಾಗಗಳು ಲೈಂಗಿಕವಾಗಿ ಸ್ಪಂದಿಸುತ್ತವೆ. ರಾವಣನ ಕಾಮಪ್ರಚೋದಕ ವರ್ಣನೆಗೆ ಸೀತೆಯ ಸ್ತನಗಳು ಉದ್ರಿಕ್ತವಾಗುತ್ತವೆ, ಅಲಗುತ್ತವೆ- "ಸಂಪ್ರವಲ್ಗಿತೌ..... ಪೀನೋನ್ನತಮುಖಾ" ಎಂದರೆ ಚೆನ್ನಾಗಿ ಅಲಗುತ್ತವೆ, ಉಬ್ಬಿ ಉದ್ರಿಕ್ತ ಚೂಚುಕಗಳಲ್ಲಿ ಎದ್ದು ನಿಲ್ಲುತ್ತವೆ, ಮೇಲ್ಮುಖವಾಗಿ ನಿಮಿರುತ್ತವೆ. ಇಲ್ಲಿ ರಾವಣನು ತನ್ನ ಕಣ್ಣಮುಂದೆ ನಡೆಯುವ ಕಾಮೋದ್ರಿಕ್ತ ಸ್ತನಗಳ ಭೌತಿಕ ವ್ಯಾಪಾರವನ್ನು ವಿವರವಾಗಿ ಚಿತ್ರಿಸುತ್ತಾ ಸವಿಯುತ್ತಿದ್ದಾನೆ. ಸೀತೆಯು ಗುಪ್ತವಾಗಿ ಆ ಲೈಂಗಿಕ ವರ್ಣನೆಯನ್ನು ಸವಿಯುತ್ತಾ "ಚಾರುಸ್ಮಿತ"ಳಾಗುತ್ತಾಳೆ, ಹಾಗೂ ಆ "ನಸುನಗು" ಅಥವಾ "ಮಂದಹಾಸ" ಬೀರುವ ಅವಳ ಹಲ್ಲಿನ ಸೌಂದರ್ಯವನ್ನು ರಾವಣನ ಸವಿಯುವ ಕಣ್ಣುಗಳಿಗೆ ಅಪ್ರಯತ್ನವಾಗಿ ನೀಡುತ್ತಾಳೆ-"ಹೇ ವಿಲಾಸಿನಿ, ನಿನ್ನ ಹುಸಿನಗೆಯ ಸೊಗಸೇನು! ಹಲ್ಲಿನ ಸೊಗಸೇನು! ಕಣ್ಣಿನ ಸೊಗಸೇನು"(20)

ಡಾ. ಪ್ರೋಲಂಕೆ ರಾಮಮೂರ್ತಿಯವರ

9 ಸೀತಾಯಣ

ಇಲ್ಲಿ ವಾಲ್ಮೀಕಿಯ ವ್ಯಾಖ್ಯೆ ಹೀಗಿದೆ: 'ದುರಾತ್ಮನಾದ ರಾವಣನು ವೈದೇಹಿಯನ್ನು' ಹೀಗೆ ಹೊಗಳಿ ಮಾತಾಡಲು, ಅವನು ಬ್ರಾಹ್ಮಣ ವೇಷದಲ್ಲಿರುವುದನ್ನು ಸೀತೆ ಗಮನಿಸಿದಳು. (ಅರಣ್ಯ 46, 32) ಅಂದರೆ ಸೀತೆ ಅವನು ಬ್ರಾಹ್ಮಣನಾದ್ದರಿಂದ ಸಹಿಸಿಕೊಂಡಳು ಎಂಬ ಇಂಗಿತ ಇಲ್ಲಿದ್ದಂತಿದೆ. ಮುಂದೆ ರಾವಣನು ಅವಳ ವೃತ್ತಾಂತವನ್ನು ಕೇಳಲು ಸೀತೆ "ಎಷ್ಟಾದರೂ ಇವನು ಬ್ರಾಹ್ಮಣ. ಅತಿಥಿಯಾಗಿ ಬಂದಿದ್ದಾನೆ. ಹೇಳದಿದ್ದರೆ ನನ್ನನ್ನು ಶಪಿಸಿ ಬಿಟ್ಟಾನು ಎಂದು ಆಲೋಚಿಸಿ ಹೀಗೆಂದಳು." (ಅದೇ 47, 2).

ಇಲ್ಲಿ ರಾವಣನು 'ಬ್ರಾಹ್ಮಣ'ನಾಗಿರುವುದರಿಂದ ಸೀತೆ ಸಹಿಸಿದಳು. ಉತ್ತರ ಕೊಟ್ಟಳು ಎನ್ನುವ ಮಾತು ಸಮಂಜಸವಾಗಿ ಕಂಡರೂ ಸೀತೆ ಏಕೆ ತನ್ನ ಅಂಗಾಂಗ ವರ್ಣನೆಯ ಲೈಂಗಿಕತೆಯನ್ನು ಅನುಭವಿಸಿದಳು, ಉದ್ರಿಕ್ತಳಾದಳು, ನಸುನಕ್ಕಳು ಎನ್ನುವ ಪ್ರಶ್ನೆ ಉಳಿದುಬಿಡುತ್ತದೆ. ಆ ವರ್ಣನೆ ಅವಳಿಗೆ ಎಷ್ಟು ಸಮ್ಮೋಹಕವೆಂದರೆ ಅವಳು ರಾಮನ ಬಗೆಗಿನ ಕಳವಳವನ್ನು ಮರೆತುಬಿಡುತ್ತಾಳೆ; ಬ್ರಾಹ್ಮಣನಿಗೆ 'ಹೇ ಬ್ರಾಹ್ಮಣ ಇದು ಆಸನ ಕುಳಿತಿಕೊ. ಇದು ಪಾದ್ಯ ಸ್ವೀಕರಿಸು. ಉತ್ತಮವಾದ ಕಂದಮೂಲಾದಿ ವನ್ಯಾಹಾರವು ಸಿದ್ಧವಾಗಿದೆ. ನಿನಗೋಸ್ಕರ ಇಲ್ಲಿ ಇಟ್ಟಿದ್ದೇನೆ. ಸಾವಧಾನವಾಗಿ ಭಕ್ಷಿಸು' (ಅದೇ 36, 35) ಎಂದು ಹೇಳುತ್ತಾಳೆ. ತನ್ನ ವೃತ್ತಾಂತವನ್ನು ದೀರ್ಘವಾಗಿಯೇ ಹೇಳುತ್ತಾಳಲ್ಲದೆ, 'ಎಲೈ ಬ್ರಾಹ್ಮಣನೇ, ನಿನ್ನ ಹೆಸರೇನು? ಗೋತ್ರ ಯಾವುದು? ವಂಶ ಯಾವುದು ದಿಟವಾಗಿ ಹೇಳು. ಈ ದಂಡಕಾರಣ್ಯದಲ್ಲಿ ಏಕಾಕಿಯಾಗಿ ಏಕೆ ಸಂಚರಿಸುತ್ತಿದ್ದೀಯೆ?' (ಅದೇ 47, 24) ಎಂದು ಕುಶಲಪ್ರಶ್ನೆ ಮಾಡುತ್ತಾ ಕೂಡುತ್ತಾಳೆ.

ವಾಲ್ಮೀಕಿ ಜಾನಪದ ಸೀತೆ

ರಾವಣನ ಕಾಮಪ್ರಚೋದಕ ವರ್ಣನೆಗೆ ಸೀತೆಯ ಸ್ತನಗಳು ಉದ್ರಿಕ್ತವಾಗುತ್ತ ಅಲಗುತ್ತವೆ- ''ಸಂಪ್ರವಲ್ಗಿತೌ.....ಪೀನೊನ್ನತಮುಖಾ'' ಎಂದರೆ ಚೆನ್ನಾಗಿ ಅಲಗುತ್ತ ಉಬ್ಬಿ ಉದ್ರಿಕ್ತ ಚೂಚುಕಗಳಲ್ಲಿ ಎದ್ದು ನಿಲ್ಲುತ್ತವೆ, ಮೇಲ್ಮುಖವಾಗಿ ನಿಮಿರುತ್ತ ಇಲ್ಲಿ ರಾವಣನು ತನ್ನ ಕಣ್ಣಮುಂದೆ ನಡೆಯುವ ಕಾಮೋದ್ರಿಕ್ತ ಸ್ತನಗಳ ಭೌ ವ್ಯಾಪಾರವನ್ನು ವಿವರವಾಗಿ ಚಿತ್ರಿಸುತ್ತಾ ಸವಿಯುತ್ತಿದ್ದಾನೆ. ಸೀತೆಯು ಗುಪ್ತವಾಗಿ ಲೈಂಗಿಕ ವರ್ಣನೆಯನ್ನು ಸವಿಯುತ್ತಾ ''ಚಾರುಸ್ಮಿತ''ಳಾಗುತ್ತಾಳೆ....

ಇಲ್ಲಿ ನಾವು ಗಮನಿಸಬೇಕಾದ್ದು ಸೀತೆ, ಲಕ್ಷ್ಮಣ ತನ್ನ ಬಗ್ಗೆ ಲೈಂಗಿಕ ಯೋಚನೆ ಮಾಡಿದ್ದಾನೆಂದು ಊಹಿಸಿ ಕೆಂಡ ಕಾರಿದವಳು, 'ಬ್ರಾಹ್ಮಣ' ಪ್ರತ್ಯಕ್ಷವಾಗಿ ಅವಳನ್ನು ಲೈಂಗಿಕವಾಗಿ ಅಂಗಾಂಗವಿನ್ಯಾಸ ಮತ್ತು ಚಲನವಲನಗಳಲ್ಲಿ ಮೆಲುಕು ಹಾಕುತ್ತಿರಲು ಅವನನ್ನು ತಡೆಯುವುದಾಗಲೀ ಅಥವಾ ತನ್ನ ದೇಹಭಾಗಗಳನ್ನು ಮುಚ್ಚಿಕೊಳ್ಳುವುದಾಗಲೀ ಮಾಡುವುದಿಲ್ಲ, ಏಕೆಂದರೆ ಮುಂದೆ ಅಶೋಕವನದಲ್ಲಿ ರಾವಣನನ್ನು ಕಂಡೊಡನೆ 'ಆ ವಿಶಾಲಾಕ್ಷಿಯು ತನ್ನ ಉದರ ಮತ್ತು ಸ್ತನಗಳು ಕಾಣದಂತೆ ತೊಡೆಗಳನ್ನೂ ತೋಳುಗಳನ್ನೂ ಬಾಗಿಸಿಕೊಂಡು ಕುಳಿತು' (ಸುಂ. 19. 3) ಕೊಳ್ಳುತ್ತಾಳೆ; ರಾವಣನೂ ಅವಳನ್ನು ಕುರಿತು ಎಲೌ ಸುಂದರಿ ನನ್ನನ್ನು ಕಂಡು, ಅವಯವಗಳನ್ನು ಮುಚ್ಚಿಕೊಳ್ಳುವುದೇಕೆ? ಮುದುರಿಕೊಳ್ಳುವುದೇಕೆ? ('ಮಾಂದೃಷ್ಟ್ವಾನಾಗನಾಸೋರು ಗುಹಾಮಾನಾಸ್ತನೋದರಮ್') (ಅದೇ 20, 2) ಎಂದು ಕೇಳುತ್ತಾನೆ. ಸೀತೆ ಬ್ರಾಹ್ಮಣನನ್ನು ಕಂಡು ಹೀಗೇಕೆ ಮಾಡಲಿಲ್ಲ?

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ವಿಷಯವೇನೆಂದರೆ ಬ್ರಾಹ್ಮಣನು ಬ್ರಾಹ್ಮಣನಾದುದರಿಂದಲೇ ಸೀತೆಗೆ ತನ್ನನ್ನು ಕಾಮಿಸಲು



ಯೋಗ್ಯ ಅಥವಾ ಅರ್ಹನಾಗುತ್ತಾನೆ; ಆದ್ದರಿಂದಲೇ ಅವಳು ಅವನ ಕಾಮಕ್ಕೆ ಪ್ರಭಾವಿತಳಾಗಿ ತಾನು ಕಾಮದಿಂದ ಪ್ರತಿಕ್ರಿಯಿಸುತ್ತಾಳೆ. ಸೀತೆ ರಾವಣನನ್ನು ಒಲ್ಲೆನೆನ್ನುವುದಕ್ಕೆ ಪ್ರಬಲವಾದ ಕಾರಣ ಅವನು ರಾಮನಂತೆ "ಆರ್ಯ"ನಲ್ಲ, ಅವನು 'ರಾಕ್ಷಸ' ಎನ್ನುವ ಆರ್ಯದ್ರಾವಿಡ ಪ್ರಭೇದವೇ ಕಾರಣವಿರುವಂತೆ ಕಾಣುತ್ತದೆ. ಸೀತೆಗೆ ರಾವಣನನ್ನು ವರಿಸಲು ಪ್ರೇರೇಪಿಸಿದಾಗ ಸೀತೆ ಹೇಳುತ್ತಾಳೆ- 'ಸಮಾನು ಪೀರಾಕ್ಷಸ್ಯ ಭಾರ್ಯಾಭವಿತು ಮರ್ಹತಿ' ಮನುಷ್ಯ ಸ್ತ್ರೀಯು ಎಂದಿಗೂ ರಾಕ್ಷಸನಿಗೆ ಭಾರ್ಯೆಯಾಗಲಾರಳು' (ಅ 24, 8; 25, 3). ಈ ಮಾತನ್ನು ಎರಡು ಸಲ ರಾಕ್ಷಸಿಯರಿಗೆ ಒತ್ತಿ ಹೇಳುತ್ತಾಳೆ.

ಆದಾಗ್ಯೂ ಸೀತೆ, ಬ್ರಾಹ್ಮಣ ಸನ್ಯಾಸಿ ತಾನು ರಾ ನೆಂದು ಹೇಳಿ ತನ್ನ ನಿಜರೂಪವನ್ನು ತಳೆದಾಗ ಅ ತನ್ನ ಮೇಲೆ ಮಾಡುವ ಲೈಂಗಿಕ ಅತ್ಯಾಚಾರ ಆಗಗೊಡದೆ ಅವನನ್ನು ಶಪಿಸುವುದಾಗಲೀ ತಾನು ಘೋರತೆಗೆ ಮೂರ್ಛೆ ಹೋಗುವುದಾಗಲಿ ಮಾಡುವ ಸೀತೆ ತಾನು ಪತಿವ್ರತೆಯೆಂದೂ, ತನ್ನ "ತೇಜಸ್ಸಿ" ಅವನನ್ನು ಸುಟ್ಟಾಕಬಲ್ಲೆನೆಂದು ನಂಬಿದಳು; ಅ ರಾವಣನಿಗೆ ಅಶೋಕವನದಲ್ಲಿ ಹೀಗೆನ್ನುತ್ತಾಳೆ: ತೇಜಸ್ಸಿನಿಂದಲೇ ನಿನ್ನನ್ನು ಸುಟ್ಟುಹಾಕಬಲ್ಲೆ, ಆದರೆ ರಾಮನು ಅನುಮತಿ ಕೊಟ್ಟಿಲ್ಲವೆಂದೂ, ತಪಃಶಕ್ತಿ ವಾಗುವುದೆಂದೂ ಸುಮ್ಮನಿದ್ದೇನೆ (ಸುಂ. 22, ಆದರೆ ರಾವಣನು ತನ್ನ ನಿಜರೂಪದಲ್ಲಿ ಸೀತ ಮುಡಿಗೆ ಕೈಹಾಕುತ್ತಾನೆ. ಅವಳ ತೊಡೆಗಳ ಹಿಂಭಾಗ ಹಿಡಿದು ಎತ್ತಿ ತನ್ನ ತೊಡೆಯಲ್ಲಿ ಹೇರಿಕೊಳ್ಳುತ್ತ "ಅವಳ ಕೇಶಪಾಶವನ್ನು ಎಡಗೈಯಿಂದ ಹಿಡಿದ ಬಲಗೈಯಿಂದ ಅವಳ ತೊಡೆಗಳ ಹಿಂಭಾಗವ ಹಿಡಿದನು..... ಅವಳ ಹಿಂಭಾಗವನ್ನು ಹಿಡಿದು ಹೊ ರಥದೊಳಗೆ ಹೇರಿದನು' (ಅರಣ್ಯ 49, 17-21) ರಾವಣನು ಸೀತೆಯ ರೇಪ್ ಮಾಡುತ್ತಾನೆ: ಆದಾ ಸೀತೆ ಅವನಿಗೆ ಶಾಪ ಹಾಕುವುದಿಲ್ಲ, ಆ ಅತಿಕ್ರಮ ಮೂರ್ಛೆಯೂ ಹೋಗುವುದಿಲ್ಲ, ರಾಮನಂತಹ ಪುರು ತಂದೆಯ ಸಾವನ್ನು ಕೇಳಿ ಮೂರ್ಛೆ ಹೋಗುತ್ತಾ ಆದರೆ ಸೀತೆಗೆ ತನ್ನ ಮಾನಾಪಹರಣ-ಮು

ಕೈಹಾಕುವುದು, ದೇಹದ ಗುಹ್ಯ ಭಾಗವಾದ ತೊಡೆ ಹಿಂಭಾಗವನ್ನು ತುಡುಕುವುದು, ತೊಡೆಯೇರಿಸಿಕೊ ವುದು ಪ್ರಖರವಾದ ಲೈಂಗಿಕ ಕ್ರಿಯೆಗಳು ಏನೂ ಅ ಮಹಾಭಾರತದಲ್ಲಿ ದುರ್ಯೋಧನ ದ್ರೌಪದಿಯ ಮು ಕೈಹಾಕಿ ತನ್ನ ಮೃತ್ಯುವಿಗೆ ಕಾರಣನಾಗುತ್ತಾನೆ. ಮುಡಿ ಸತಿಯ ಸಂಕೇತ; ಅದನ್ನು ಮುಟ್ಟುವ ಅಧಿಕಾ ಪ್ರಿಯಕರನಿಗೇ, ಗಂಡನಿಗೇ ಮೀಸಲಾದದ್ದು. ಮರಾ ಗೀತೆಯೊಂದರಲ್ಲಿ ರಾಧೆಯ ಸಖಿ ರಾಧೆಯನ್ನು ಕುರಿ "ಯಾರು ನಿನ್ನ ತುರುಬನ್ನು ಬಿಚ್ಚಿದರು" ಎಂದು ಕೃಷ್ಣ ಕುರಿತು ಲಲ್ಲೆಯಾಡುತ್ತಾಳೆ. ಆದರೆ ಸೀತೆ ತನ್ನ ಮುಡಿಯ ಕೆಣಕಿದ ರಾವಣನನ್ನು ದೂರುತ್ತಾಳಾಗಲಿ ಮತ್ತೇ ಮಾಡುವುದಿಲ್ಲ, ಒಂದು ರೀತಿಯಲ್ಲಿ ಅವಳು ಅವ ಬ್ರಾಹ್ಮಣ ವೇಷದಲ್ಲಿದ್ದಾಗ ತನ್ನ ದೇಹಭಾಗಗಳ ವರ್ಣಿಸುತ್ತಾ ಸವಿಯುತ್ತಿರುವಾಗ ತಾನೂ ಆಂತರಿಕವಾ ಆನಂದಿಸುತ್ತಿದ್ದಂತೆ, ಈಗಲೂ ಅವನ ನಿಜಸ್ವರೂ ಪರಾಕ್ರಮದಲ್ಲಿ ಅವನ ಅನುಗ್ರಹದ ಸ್ಪರ್ಶವನ್ನು-ತೊಡೆ ಹಿಂಭಾಗವನ್ನು 'ಪ್ರತಿಜಗ್ರಹಿಸು'ವುದನ್ನು, ತೊಡೆಗೇ ಕೊಳ್ಳುವುದನ್ನು, ಮುಡಿಹಿಡಿಯುವುದನ್ನು-ದೂರ ಹಿನ್ನೆಲೆಯಲ್ಲೇ ಗುಪ್ತವಾಗಿ ಸವಿಯುತ್ತಿರುವ ಸಾಧ್ಯತೆ ಏಕೆಂದರೆ ರಾವಣನ ನಿಜಸ್ವರೂಪವನ್ನು ವಾಲ್ಮೀ ಸೀತೆಯೆದುರು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾ 'ಸಿಟ್ಟಿನಿಂದ ಕಿಡಿಯಾದ ಆ ತೇಜಸ್ವಿಯು ರಕ್ತನೇತ್ರ ಸುವರ್ಣಭೂಷಿತನೂ ನೀಲಮೇಘದಂತೆ ಕೃಷ್ಣದೇಹ ಆಗಿ ಗೋಚರಿಸಿದನು.' (ಅರಣ್ಯ 49, 7). ರಾವ ಸೌಂದರ್ಯ 'ಪರಾಕ್ರಮ' ತೇಜಸ್ಸುಗಳು ಎ ಮನೋಹರವಾಗಿವೆಯೆಂದರೆ ಹನುಮಂತ ಅಶೋಕವನದಲ್ಲಿ ಅವನನ್ನು ಮಂತ್ರಮುಗ್ಧನಂತೆ ನೋಡು ನಿಲ್ಲುತ್ತಾನೆ- 'ಹಾಲಿನ ನೊರೆಯಂತೆ ಶುಭ್ರವಾದ ಕೂದ ಭುಜಕೀರ್ತನೆಯಲ್ಲಿ ಸಿಕ್ಕಿಕೊಂಡಾಗ, ಅದ ಸರಿಪಡಿಸಿಕೊಳ್ಳುತ್ತ ವಿಲಾಸದಿಂದ ಬರುತ್ತಿದ್ದ ರಾವಣ ಪುಷ್ಪಧನುಸ್ಸೊಂದಿಲ್ಲದ ಸಾಕ್ಷಾತ್ ಮನ್ಮಥನಂತೆ ತೋರುತ್ತಿದ್ದನು. (ಸುಂ. 18, 23-24) ಅಂದರೆ ವಾಲ್ಮೀ ರಾವಣನನ್ನು ಧೀರೋದಾತ್ತ ನಾಯಕನಂತೆಯೇ ಅ ಪರಾಕ್ರಮ, ತೇಜಸ್ಸು, ಸೌಂದರ್ಯ, ಪ್ರಭೆಗಳನ್ನು ಸಾರಿ ಆದ ಪದಗಳಲ್ಲಿ ವಿಶೇಷಣಗಳಲ್ಲೇ ಚಿತ್ರಿಸಿರುವು

ನೋಡಿದರೆ ರಾವಣನು ಸೀತೆಗೆ ಅನುರೂಪನೋ ಎನ್ನುವ ಅನಿಸಿಕೆ ನಮ್ಮಲ್ಲಿ ಸಹಜವಾಗಿ ಮೂಡಬಲ್ಲುದಾಗಿದೆ. ಇಲ್ಲಿ ರಾವಣನು ಸೀತೆಯ ಮುಡಿ, ತೊಡೆ, ನಿತಂಬಗಳಿಗೆ ಕೈ ಹಾಕಿ ತೊಡೆಯೇರಿಸಿಕೊಂಡು ಆಕಾಶದಲ್ಲಿ ಹೋಗುತ್ತಿರುವಾಗ ಸೀತಾರಾವಣರು ಹೇಗೆ ಪರಸ್ಪರ ಅನುರೂಪಿಗಳಾಗಿ ಕಾಣುತ್ತಾರೆ, ಹೇಗೆ ಅವರಿಬ್ಬರ ವರ್ಣನೆ ಅವರನ್ನು ಮನೋಹರವಾದ ಜೋಡಿಯನ್ನಾಗಿ ಮಾಡಿಬಿಡುತ್ತದೆ, ಹೇಗೆ ಪ್ರಕೃತಿಯ ಉಪಮೆಗಳು ಅವರನ್ನು ಸಹಜವಾಗಿ ಸಾದೃಶಗೊಳಿಸುತ್ತವೆ ಎನ್ನುವುದನ್ನು ಗಮನಿಸಿ:

ಪದ್ಮದಂತೆಯೂ ಸ್ವರ್ಣದಂತೆಯೂ ಸ್ವಚ್ಛವರ್ಣಳಾಗಿ
ಚಿನ್ನದ ಒಡವೆಗಳನ್ನು ಧರಿಸಿದ್ದ ಜಾನಕಿಯು ರಾವಣನ
ಪಾರ್ಶ್ವ
ದಲ್ಲಿ ಮೋಡದ ಬಳಿಯಲ್ಲಿ ಮಿನುಗುವ ಮಿಂಚಿನಂತೆ
ಕಾಣಿಸಿ
ದಳು. ಆ ರಾಕ್ಷಸನು ಸೀತೆಯನ್ನು ಅಪಹರಿಸಿಕೊಂಡು
ಹೋಗುವಾಗ, ಅವಳು ಶಿರಸ್ಸಿನಲ್ಲಿ ಮುಡಿದಿದ್ದ ಹೂವು
ಮಳೆ
ಯಂತೆ ಪುಷ್ಪವೃಷ್ಟಿಯಂತೆ ಭೂತಳದ ಮೇಲೆ ತೂರಿತು.
ಸುತ್ತಲೂ ತೂರಿದ ಹೂಗಳ ರಾಶಿಯು ದಶಗ್ರೀವನ
ಗಮನ
ವೇಗದಿಂದ ಸೆಳೆಯಲ್ಪಟ್ಟು ಅವನ ಹಿಂದೆ ಹಾರಿಹೋಗು
ತ್ತಿತ್ತು.
ಹಾಗೆ ಹಾರಿಹೋಗುವ ಹೂವಿನ ಧಾರೆಯು
ಉನ್ನತವಾದ
ಮೇರುಪರ್ವತವನ್ನು ಹಿಂಬಾಲಿಸಿ ಬಳಸುವ ವಿಮಲ
ಧಾರಾ
ಪುಂಜದಂತೆ ಕಂಗೊಳಿಸಿತು. ವೈದೇಹಿಯ ಪಾದದಿಂದ
ರತ್ನ
ಭೂಷಿತವಾದ ಕಾಲಂದಿಗೆಯು ಕಳಚಿ ಕುಲುಕುಲು
ಎಂದು
ಇಂಪಾಗಿ ಧ್ವನಿಗೈಯುತ್ತಾ ಮಿಂಚಿನ ಗೊಂಚಲಿನಂತೆ
ಬಿದ್ದಿತು. ಮರದ ಚಿಗುರೆಲೆಯಂತೆ ಅರುಣ ವರ್ಣಳಾಗಿದ್ದ
ವೈದೇಹಿಯಿಂದ ರಾವಣನಿಗೆ ಒಂದು ಶೋಭೆಯುಂಟಾ
ಯಿತು.
(ನೀಲಾಂಗನಾದ) ಆ ರಾಕ್ಷಸೇಶ್ವರನು ನಡುವಿಗೆ ಚಿನ್ನದ
ಸರಪಳಿಯಿಂದ ಭೂಷಿತವಾದ ಆನೆಯಂತೆ ಗೋಚರಿಸಿ
ದನು.
ತನ್ನ ದೇಹಕಾಂತಿಯಿಂದ ದೊಡ್ಡ ಉಲ್ಕೆಯಂತೆ ಬೆಳಗುತ್ತಿದ್ದ
ಸೀತೆಯನ್ನು ಕುಬೇರಾನುಜನು ಆಕಾಶಮಾರ್ಗದಲ್ಲಿ
ಒಯ್ಯು
ತ್ತಿದ್ದನು. ಅಗ್ನಿಯಂತೆ ಹೊಳೆಯುತ್ತಿದ್ದ ಸೀತೆಯ
ಆಭರಣಗಳು ಝಣ ಝಣ ಎಂದು ಶಬ್ದ ಮಾಡುತ್ತಾ
ಭೂಮಿಗೆ
ಬಿದ್ದವು; ಪುಣ್ಯವು ಮುಗಿದು ಧರೆಗಿಳಿವ ತಾರೆಗಳಂತೆ,
...ದವು
ಚಂದ್ರನಂತೆ ಚಂದವಾದ ಮುತ್ತಿನ ಸರವು ಜಾನಕಿಯ

ಮಧ್ಯದಿಂದ ಜಾರಿ ಬೀಳುವಾಗ, ಗಗನದಿಂದಿಳಿಯುವ
...ಗೆ
ಯೋ ಎಂಬಂತೆ ಕಂಗೊಳಿಸಿತು.
(ಅರಣ್ಯ 52, 26-35)

ಈ ವರ್ಣನೆಯಲ್ಲಿ ನಮಗೆ ಮೊದಲು ಕಣ್ಣಿಗೆ ಬೀಳುವ ...ತೆ ಪ್ರಕೃತಿಯ ಉಪಮಾನಗಳು, ರೂಪಕಗಳು ಅವರೀ ...ರನ್ನು ಪರಸ್ಪರ ಶೋಭಾಯಮಾನರನ್ನಾಗಿ ಅನುರೂಪಿ ...ನ್ನಾಗಿ ಮಾಡಿ, ಆ ಅನುರೂಪ ಸಹಜಗೊಳಿಸುವುದು. ...ಡನೆಯದು ಆ ವರ್ಣನೆಯಲ್ಲಿ ಪಂಚಭೂತಗಳೂ ...ರುವುದರಿಂದ-ಪೃಥ್ವಿ ('ಭೂತಳ'), ಆಪ್ಸ ('ಗಂಗೆ')ವಾಯು ...ಮನವೇಗ' 'ಹಾರಿಹೋಗು') ತೇಜ ('ಅಗ್ನಿಯಂತೆ') ಆಕಾಶ ...ರೆಗಳಂತೆ') ರಾವಣ ಸೀತೆಯರ ಜೋಡಿ ಒಂದು ವಿಶಿಷ್ಟ ...ಯ ಸಮಾಗಮವು ಹೌದೆನ್ನಿಸುವುದು ಮತ್ತು ...ರನೆಯದಾಗಿ, ಒಟ್ಟಾಗಿ ರಾವಣ ಸೀತೆಯರ 'ಸಮಾಗಮ' ...ವರೆ ಸೀತೆಯ ಮುಡಿಯ ಹೂವು, ಅವಳ ಕಾಲಂದುಗೆ, ...ಆಭರಣಗಳು, ಸ್ತನಮಧ್ಯದಿಂದುರುಳುವ ಮುತ್ತಿನ ...ಇವೆಲ್ಲವೂ ರಾವಣನು ಅವಳನ್ನು ತನಗವಚಿ ...ಡುಕೊಂಡು ಹಾರಿ ಹೋಗುತ್ತಿರುವಾಗ ಅವಳ ...ಯಿಂದ ಸಡಿಲಿ ಬೀಳುತ್ತಿರುವುದು; ಪ್ರಿಯೆಯೊಬ್ಬಳು ...ಕರನ ಪ್ರೇಮ ಸಮಾಗಮದಲ್ಲಿ ವಿವಸ್ತ್ರಳಾಗುವಂತೆ, ...ಮುಡಿಯ ಹೂ ಮೈಯ ಆಭರಣಗಳನ್ನು ಒಂದೊಂದಾಗಿ ...ಕೊಳ್ಳುವಂತೆ, ಒಂದು ರತಿ ಸಮಾಗಮವಾಗಿ ಧ್ವನಿಸು ...ವಿಶೇಷವೇನೆಂದರೆ, ಈ ಹೂ ಆಭರಣದುಕೂಲಗ ...ಶೋಭಾಯಮಾನವಾಗಿ ಕಂಗೊಳಿಸುತ್ತಾ-ಸ್ತನದಿಂದ ...ವ ಮುತ್ತಿನ ಸರ ಆಕಾಶಗಂಗೆಯಾಗುವಂತೆ-ರತಿಭೋಗ ...ಜೃಂಭಿಸುವುದು. ಈ ಸಂದರ್ಭವನ್ನು ಸೀತಾಪಹರಣ ...ಸಾಧ್ಯ ಅರಿಯದಿದ್ದಲ್ಲಿ ಇದೊಂದು ವಿಶಿಷ್ಟ ಶೃಂಗಾರ ...ವೇಶವೆಂದೂ ರತಿಭೋಗದ ವಿಜೃಂಭಣೆಯೆಂದೂ ...ಗೋಚರವಾಗಿ ಸಾರುತ್ತಿದ್ದೆನು.

(ಮುಂದುವರೆಯುವುದು)

ಉಡುಪಿಯ ಹೊಸ ಮೌಲ್ಯ-
'ದನಗಳನ್ನು ರಕ್ಷಿಸಿ-ಜನಗಳು ಸತ್ತರೆ ಸಾಯಲಿ'



ಸಮೀಪದ ಕಾಪುವಿನ ಮೂಳೂರು ಗ್ರಾಮದ ನಿವಾಸಿ ಅಬ್ದುಲ್ ಖಾದರ್ 30 ರ ಹರೆಯದವರು; 4 ಮಕ್ಕಳ ತಂದೆ, ಸಂಸಾರ ವಂದಿಗ. ಹೌದು, ಮುಸ್ಲಿಮನಾದರೂ ನಮ್ಮ ನಿಮ್ಮಂತೆ ಒಬ್ಬ ಮನುಷ್ಯ ಎಂದು ಹೇಳಿದ ಹಾಗೆ.


ತಾ. 9.2.2007 ರ ಉದಯವಾಣಿ (ಮಣಿಪಾಲ ಆವೃತ್ತಿ) ಪತ್ರಿಕೆಯಲ್ಲಿ 'ಕಾರಿನಲ್ಲಿ ದನ ಸಾಗಾಟ: ಬಂಧನ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಒಂದು ಸುದ್ದಿ ಹೀಗಿದೆ: 'ಬ್ರಹ್ಮಾವರ, ಫೆ. 8: ಇಲ್ಲಿಗೆ ಸಮೀಪದ ಹಾವಂಜೆ ಕೊಳಲ ಗಿರಿಯ ಗೂಳಿ ಎಂಬಲ್ಲಿ ಮಾರುತಿ ಓಮ್ನಿಯಲ್ಲಿ ಕಸಾಯಿಖಾನೆಗೆ ದನ ಸಾಗಿಸುತ್ತಿದ್ದ ಮೂವರನ್ನು ಬುಧವಾರ ಬಂಧಿಸಲಾಗಿದೆ. ಬಂಧಿತರು ಕಾಪುವಿನ ನಿವಾಸಿ ಅಬ್ದುಲ್ ಖಾದರ್ ಮತ್ತು ಸುಜಿತ್, ರಾಜೇಶ್ ಶೆಟ್ಟಿ ಎಂಬವರಾಗಿದ್ದು ಓಮ್ನಿಯಲ್ಲಿ 8 ದನಕರುಗಳನ್ನು ಸಾಗಿಸುತ್ತಿದ್ದ ಸಂದರ್ಭದಲ್ಲಿ ಗ್ರಾಮಸ್ಥರು ತಡೆದು ಥಳಿಸಿ ಪೊಲೀಸರಿಗೆ ದೂರು ನೀಡಿದ್ದರು. ದನಕರುಗಳನ್ನು ನೀಲಾವರದ ಗೋ ಶಾಲೆಗೆ ಕಳುಹಿಸಲಾಗಿದೆ' (ಪುಟ 12). ವರದಿಯ ಪೂರ್ಣಪಾಠ ಇದು. ಕೇವಲ ಮೂರು ವಾಕ್ಯಗಳ ಈ ವರದಿ ಒಳಗೊಂಡಿರುವ ಸಮಕಾಲೀನ ಸಂಸ್ಕೃತಿಯ ಕಥನಗಳನ್ನು ಗಮನಿಸಿ. ಅಬ್ದುಲ್ ಖಾದರ್ ಎಂಬ- ಆತನ ಹೆಸರೇ ಜಗಜ್ಜಾಹೀರು ಪಡಿಸುವಂತೆ-ಬಂಧಿತ ಓರ್ವ ಮುಸ್ಲಿಮ್. ಮುಸ್ಲಿಮ್‌ನೊಬ್ಬ ದನಕರು ಸಾಕಿದರೆ ಅದು ಕಸಾಯಿಗೆ; ವಾಹನದಲ್ಲಿ ಸಾಗಿಸಿದರೆ ಅದು ಕಸಾಯಿ ಖಾನೆಗೆ ಎಂಬುದು ನಿಶ್ಚಯ. ಕರಾವಳಿಯಲ್ಲಂತೂ ಈ ಮಾತಿನ ವಿರುದ್ಧ ಅಪೀಲೇ ಇಲ್ಲ. ವರದಿಯಲ್ಲಿ ಹೇಳಲಾಗಿರುವ ಉಡುಪಿಗೆ ಸಮೀಪದ ಗ್ರಾಮ ಗಳಾದ ಹಾವಂಜೆ, ಕೊಳಲಗಿರಿ, ಗೂಳಿಯ ಗ್ರಾಮಸ್ಥರು- ಅವರು ಹಿಂದೂಗಳು ಎಂದು ಬೇರೆ ಹೇಳಬೇಕಾಗಿಲ್ಲ-ಗೋಹಂತಕ ಖಾದರ್‌ನನ್ನು ಥಳಿಸಿ ನಂತರ ಆತನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ; ಅವರೆಲ್ಲರೂ ಧರ್ಮಾತ್ಮರು, ಜೊತೆಗೆ ಕಾನೂನು ಪಾಲಿಸುವ ಪ್ರಜೆಗಳೂ ಹೌದು. ಉದಯವಾಣಿ ಪ್ರಕಾರ ಖಾದರ್‌ನನ್ನು ಬಂಧಿಸಲಾಗಿದೆ; ಗೋವುಗಳು ಗೋಶಾಲೆಯಲ್ಲಿವೆ ಮತ್ತು ಇಲ್ಲಿ ಎಲ್ಲರೂ ಕ್ಷೇಮ; ಆದರೆ ನಿಜ ಸಂಗತಿ ಏನು?

ಘಟನೆಯ ವಿವರ

ಮೇಲೆ ಕಾಣಿಸಿದ ವರದಿಯಲ್ಲಿ ಹೇಳಲಾಗಿರುವ ಘಟನೆ ನಡೆದದ್ದು ತಾ. 7.2.2007, ಬುಧವಾರ ಮುಂಜಾನೆ 4 ಗಂಟೆಯ ಸುಮಾರಿಗೆ; ಅಂದರೆ ಅಪವೇಳೆಯಲ್ಲಿ .ಒಂದು ವರ್ಷದ ಹಿಂದೆ, ಮೂಲ್ಕಿಯ ಸಮೀಪ ದನ ಸಾಗಿಸುತ್ತಿದ್ದ ಒಂದು ಟೆಂಪೋವನ್ನು ಸುಟ್ಟು, ವಾಹನದಲ್ಲಿದ್ದವರ ಮೇಲೆ ಭಜರಂಗಿಗಳು ಹಲ್ಲೆ ನಡೆಸಿದ್ದೂ ಮುಂಜಾನೆ ಇದೇ ಹೊತ್ತಿಗೆ. ಆ ಇರುಳಲ್ಲಿ ಸುಮಾರು 20-30 ಜನ ಅಲ್ಲಿ ತಲವಾರು ದೊಣ್ಣೆಗಳೊಂದಿಗೆ ರೆಡಿಯಾಗಿದ್ದರು ಮಾತ್ರವಲ್ಲ; ಪ್ರಮುಖ ಪತ್ರಿಕೆಯೊಂದರ ಫೋಟೋ ಗ್ರಾಫರನೂ ಅಲ್ಲಿದ್ದ! ಮೇಲೆ ಹೇಳಿದ ಅಬ್ದುಲ್ ಖಾದರ್‌ನನ್ನು ಮೊನ್ನೆ ಥಳಿಸಿದ ತಂಡದಲ್ಲೂ ಸುಮಾರು 20 ಜನ ತರುಣರಿದ್ದು ಇವರ ಕೈಯಲ್ಲೂ ತಲವಾರು, ರಾಡುಗಳಿದ್ದವು. ಉದಯವಾಣಿ ವರದಿ ಪ್ರಕಾರ ಇವರು 'ಗ್ರಾಮಸ್ಥರು'! ಕರಾವಳಿಯ ಹಳ್ಳಿಗಳ ಗ್ರಾಮಸ್ಥರು ಬೆಳಗಿನ ಜಾವ, ತಲವಾರು, ರಾಡುಗಳನ್ನು ಹಿಡಿದುಕೊಂಡು ವಾಕಿಂಗ್ ಹೋಗು ತ್ತಾರೋ ಎಂದು ಮಾತ್ರ ಕೇಳಬೇಡಿ. ಈ 'ಗ್ರಾಮಸ್ಥ'ರ ಹಲ್ಲೆಗೊಳಗಾದ ಅಬ್ದುಲ್ ಖಾದರ್ ಯಾರು? ಉದಯವಾಣಿ ಅದನ್ನು ತಿಳಿಸದೇ ಇದ್ದರೂ ಆತನೂ ಒಬ್ಬ ಗ್ರಾಮಸ್ಥನೆ. ಉಡುಪಿಗೆ

ಕರಾವಳಿಯ ಊರುಗಳಲ್ಲಿ ಈಗ ಈ ಸರಳ ಸತ್ಯಗಳನ್ನೇ ಮತ್ತೆಮತ್ತೆ ಒತ್ತಿ ಹೇಳಬೇಕಾದ ಅಗತ್ಯವಿದೆ. ಖಾದರ್ ಅವರ ಕುಟುಂಬ ಲಾಗಾಯ್ತಿನಿಂದಲೂ ಮೂಳೂರಿ ನಲ್ಲಿಯೇ ವಾಸವಾಗಿದ್ದುಕೊಂಡು ದನದ ವ್ಯಾಪಾರ ಅವರ ಕುಟುಂಬದ ಉದ್ಯೋಗ; ಅವರು ತೆಂಗಿನಕಾಯಿ ವ್ಯಾಪಾರವನ್ನೂ ಮಾಡುವುದುಂಟು. ಮೊನ್ನೆ ಬುಧವಾರ ಮುಂಜಾನೆ 4 ಗಂಟೆಯ ಸುಮಾರಿಗೆ ಖಾದರ್ ತಮ್ಮ ಮಾರುತಿ ಓಮ್ನಿ ಗೂಡ್ಸ್ ಗಾಡಿಯಲ್ಲಿ 2 ದನ ಮತ್ತು 6 ಕರುಗಳನ್ನು ಉಡುಪಿಯಿಂದ ಸುಮಾರು 10 ಕಿ.ಮೀ. ದೂರದ ಕೊಳಲಗಿರಿಯಿಂದ ತಮ್ಮೂರಿಗೆ ಸಾಗಿಸುತ್ತಿದ್ದರು. ಆ ದನಕರುಗಳನ್ನು ಅವರು ಹಾವಂಜೆಯ ಗೂಳಿ ಮತ್ತು ಮಡಿ ಗ್ರಾಮದ ಎರಡು ಮನೆಗಳವರಿಂದ (ಅವರು ಹಿಂದೂಗಳು) ಖರೀದಿಸಿದ್ದರು. ಆ ಮನೆ ಯವರೇ ದಲ್ಲಾಳಿಗಳ ಮುಖಾಂತರ ಹೇಳಿ ಕಳುಹಿಸಿ ದ್ದರಿಂದ ತಾನು ಗಾಡಿ ತೆಗೆದುಕೊಂಡು ಅಲ್ಲಿ ಹೋದ ದ್ದಾಗಿ ಖಾದರ್ ನನಗೆ ತಿಳಿಸಿದರು. ಇವರ ಗಾಡಿಯನ್ನು ಹಾವಂಜೆಯ ಗೂಳಿ ಎಂಬಲ್ಲಿ ದಾರಿಯಲ್ಲಿ ಕಲ್ಲುಗಳನ್ನು ಅಡ್ಡ ಇಟ್ಟು ತಡೆದು, ಸುಮಾರು 20 ಜನರ ಗುಂಪು ತಲವಾರು ದೊಣ್ಣೆಗಳಿಂದ ಇವರ ಮೇಲೆ ಹಲ್ಲೆ ನಡೆಸಿತು. ಓಮ್ನಿಯಲ್ಲಿ ಖಾದರ್ ಜೊತೆ ಕೂತಿದ್ದ ಅವರ ಸ್ನೇಹಿತ ಸುಜಿತ್ (ಆತ ಹಿಂದೂ ಮತ್ತು ಅವರಿಗೂ ಖಾದರ್‌ರ ದಂಧೆಗೂ ಏನೂ ಸಂಬಂಧವಿರಲಿಲ್ಲ) ಕೂಡ ಏಟು ತಿಂದ. ಖಾದರ್ ಅವರ ತಲೆಯಲ್ಲಿ ಎರಡು ಮೂರು ಕಡೆ ಆಳವಾದ ಗಾಯಗಳಾಗಿದ್ದು ಮೈಮೇಲೂ ಬಾಸುಂಡೆಗಳೆದ್ದಿವೆ. ಇವರ ಮೇಲೆ ಹಲ್ಲೆ ಮಾಡಿದವರೇ ನಂತರ ಬ್ರಹ್ಮಾವರ ಪೊಲೀಸ್ ಠಾಣೆಗೆ ಫೋನ್ ಮುಖಾಂತರ ಇವರ ವಿರುದ್ಧ ದೂರು ಕೊಟ್ಟಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಖಾದರ್‌ರನ್ನು ಆಸ್ಪತ್ರೆಗೆ ಸೇರಿಸಿ (ಸುಜಿತ್ ಸ್ಥಳದಿಂದ ಆ ವೇಳೆಗೆ ಪಲಾಯನ ಮಾಡಿದ್ದರು) ಗೋಹತ್ಯಾ ನಿಷೇಧ ಕಾಯ್ದೆ ಮತ್ತು ಪ್ರಾಣಿಹಿಂಸೆ ನಿಷೇಧ ಕಾಯ್ದೆ ಅನ್ವಯ ಅವರಿಬ್ಬರ ಮೇಲೆ ಕೇಸು ದಾಖಲಿಸಿ ದ್ದಾರೆ. ಅವರ ಮೇಲೆ ಹಲ್ಲೆ ನಡೆಸಿದವರ ಪೈಕಿ, ಗದ್ದ ರಾಜೇಶ್ ಮತ್ತು 8 ಜನರ ಮೇಲೆ ಕ್ರಿಮಿನಲ್ ಕಾಯ್ದೆಯ ಸೆಕ್ಷನ್ 143 (ಅಕ್ರಮ ಕೂಟ), 147 ಮತ್ತು 148 (ದೊಂಬಿ), 323, 326 (ಮರಣಾಂತಿಕ ಹಲ್ಲೆ), 341 (ಅಕ್ರಮ ತಡೆ) 506 (ಕ್ರಿಮಿನಲ್ ಪ್ರಚೋದನೆ)ಗಳ ಅಡಿಯಲ್ಲಿ ಕೇಸು ದಾಖಲಾಗಿದೆ. ಇವರೆಲ್ಲರಿಗೂ ಜಾಮೀನು ದೊರೆಯುತ್ತದೆ ಮತ್ತು ಕಾಲಕ್ರಮದಲ್ಲಿ ಕೇಸಿನಿಂದ ಖುಲಾಸೆಯೂ ಆಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಅಬ್ದುಲ್ ಖಾದರ್ ಈಗ ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ದ್ದಾರೆ. ಅವರು ಇನ್ನು ಕೆಲವು ದಿನ ಆಸ್ಪತ್ರೆಯಲ್ಲಿ ಇರಬೇಕಾಗಿ ಬರಬಹುದು. ಆಸ್ಪತ್ರೆಯಲ್ಲಿ ತನ್ನ ಹಾಗೂ ಗೆಳೆಯ ಸುಜಿತ್ ಬಳಿ ಇದ್ದ ನಗದು ಹಣ ಮತ್ತು ಮೊಬೈಲುಗಳನ್ನು ಕೂಡ ಗುಂಪಿನಲ್ಲಿದ್ದವರು ದೋಚಿದ್ದಾರೆ ಎಂದು ಖಾದರ್ ಆಸ್ಪತ್ರೆಯಲ್ಲಿ ನನಗೆ ತಿಳಿಸಿದರು.

ಅಬ್ದುಲ್ ಖಾದರ್ ಅವರದ್ದು ಒಂದು ವಿಚಿತ್ರ ಸನ್ನಿವೇಶ. ಅವರ ಹೊಟ್ಟೆಪಾಡಿನ ಉದ್ಯೋಗವೇ ಈಗ ಕರಾವಳಿಯಲ್ಲಿ ಮೇಲುಗೈ ಸಾಧಿಸಿರುವ ಹಿಂದೂತ್ವ ವಾದಿಗಳ ಕಣ್ಣಿನಲ್ಲಿ ಅಪರಾಧವೆನ್ನಿಸಿಕೊಂಡಿದೆ. ಅವರು ಅದನ್ನು ಕದ್ದುಮುಚ್ಚಿ ಹೊತ್ತಿಲ್ಲದ ಹೊತ್ತಿನಲ್ಲಿ ಮಾಡ ಬೇಕಾಗಿದೆ. ಅವರನ್ನು ಥಳಿಸಿದವರು ಉದಯವಾಣಿ ಹೇಳುವ ಹಾಗೆ, "ಗ್ರಾಮಸ್ಥರು" ಖಂಡಿತ ಅಲ್ಲ. ಆ ಗುಂಪಿನಲ್ಲಿದ್ದ ಹಲವರು ಹಿಂದೆಯೂ ಇಂತಹ ಪ್ರಕರಣ ಗಳಲ್ಲಿ ಭಾಗಿಯಾಗಿದ್ದು, ಭಜರಂಗದಳದ ಕಾರ್ಯಕ್ರಮ ಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿದ್ದವರು. ಈ ಭಜರಂಗಿಗಳು ಮತ್ತು ಇವರಿಗೆ ಕುಮ್ಮಕ್ಕು ಕೊಡುತ್ತಿರುವ ಕರಾವಳಿಯ ಮಠಾಧೀಶರುಗಳು ಸಂಪೂರ್ಣ ಗೋಹತ್ಯಾ ನಿಷೇಧಕ್ಕಾಗಿ ಮೇಲಿಂದ ಮೇಲೆ ಬಲವಂತ ಮಾಡು ತ್ತಿದ್ದಾರೆ. ಗೋವು ಹಿಂದೂಗಳಿಗೆ ದೇವರು ಮತ್ತು ತಾಯಿಗೆ ಸಮಾನ ಎಂಬ ಇವರ ವಾದ ಯಥಾರ್ಥವೇ ಆಗಿದ್ದಲ್ಲಿ ಇವರು ಗೋವುಗಳ ಮಾರಾಟ ನಿಷೇಧಕ್ಕೆ ಯಾಕೆ ಕರೆ ಕೊಡುತ್ತಿಲ್ಲ? ದೇವರನ್ನಾಗಲೀ ತಾಯಿಯನ್ನಾಗಲೀ ಮಾರುವುದುಂಟೆ? ತಮ್ಮ ನಿರುಪ ಯೋಗಿ ಜಾನುವಾರುಗಳನ್ನು ಮಾರುವುದು ಅವುಗಳನ್ನು ಸಾಕಿಕೊಂಡಿರುವವರಿಗೆ ಒಂದು ವ್ಯವಹಾರ ಹಾಗೂ ಬಹಳ ಅಗತ್ಯವಾದ ಒಂದು ವರಮಾನದ ಮೂಲ. ಖಾದರ್ ಅಂತಹವರಿಗೆ ಅದು ಒಂದು ಉದ್ಯೋಗ ಮತ್ತು ಹೊಟ್ಟೆಪಾಡು. ಆಸ್ಪತ್ರೆಯಲ್ಲಿ ತಲೆಗೆ ಬಿಳಿ ಬ್ಯಾಂಡೇಜು ಸುತ್ತಿಕೊಂಡು ಮಲಗಿದ್ದ ಖಾದರ್ ಅವರಿಗೆ, ಕರಾವಳಿಯಲ್ಲಿ ಈ ಹಿಂದೆ ದನ ಸಾಗಾಟಕ್ಕೆ ಸಂಬಂಧಿಸಿ ದಂತೆ ನಡೆದ ಘಟನೆಗಳು ಗೊತ್ತಿಲ್ಲವೆ ಎಂದು ನಾನು ಕೇಳಿದೆ. ಎರಡು ವರ್ಷಗಳ ಹಿಂದೆ ನಡೆದ ಆದಿ ಉಡುಪಿಯ ಹಾಜಬ್ಬ ಹಸನಬ್ಬರ ಬೆತ್ತಲೆ ಪ್ರಕರಣವನ್ನೂ ನಾನು ಅವರಿಗೆ ತಿಳಿಸಿದೆ. ಖಾದರ್ ಅವರಿಗೆ ತನ್ನ ವೃತ್ತಿಯ ಅಪಾಯಗಳು ನನಗಿಂತ ಚೆನ್ನಾಗಿ ಗೊತ್ತಿತ್ತು. ಯಾಕೆಂದರೆ ಆದಿ ಉಡುಪಿ ಪ್ರಕರಣದ ಹಾಜಬ್ಬ ಅಬ್ದುಲ್ ಖಾದರ್ ಅವರಿಗೆ ಹೆಣ್ಣು ಕೊಟ್ಟ ಮಾವ! ಸ್ವತಃ ಖಾದರ್ ಅವರೇ ಈ ವಿಷಯ ತಿಳಿಸಿದಾಗ ನಾನು ದಂಗಾಗಿಹೋದೆ. ಹಾಜಬ್ಬ, ಹಸನಬ್ಬ, ಅಬ್ದುಲ್



ಖಾದರ್ ಇತರ ಮುಸ್ಲಿಮ್ ಕುಟುಂಬಗಳು ಕೇವಲ ತಮ್ಮ ಜೀವನೋಪಾಯಕ್ಕೆಂದು ನಡೆಸುವ ಉದ್ಯೋಗದ ಕಾರಣಕ್ಕೆ ಇಷ್ಟು ನೋವು, ಅವಮಾನಗಳನ್ನು ಅನುಭವಿಸಬೇಕೆ? ಬಡವರ ಹೊಟ್ಟೆಪಾಡಿನ ಬಗ್ಗೆ ಕರಾವಳಿಯ ಹಿಂದೂತ್ವವಾದಿಗಳು ಮತ್ತು ಪತ್ರಿಕೆ ಗಳವರಿಗೆ ಯಾಕೆ ಇಷ್ಟು ತಾತ್ಸಾರ? ಯಾವ ಮುಸ್ಲಿಮನೂ ಹಿಂದೂಗಳನ್ನು ನೋಯಿಸಲೋಸುಗ ಗೋಹತ್ಯೆಯನ್ನು ಮಾಡುವುದಿಲ್ಲ. ಬಡ ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಅದು ಅಗ್ಗದ ಮಾಂಸಾಹಾರ. ಗೋವುಗಳನ್ನು ಸಾಕಿದವರಿಗೆ, ಅವು ಮುದಿಯಾದ ಮೇಲೆ ಮಾರುವುದೂ ಅನಿವಾರ್ಯ. ಕರಾವಳಿಯ ಜಾಣರಿಗೆ ಇಂದು ಈ ಸರಳ ಸತ್ಯಗಳೂ ಕಾಣಿಸುತ್ತಿಲ್ಲ. ಅಥವಾ ಇದು ಮುಸ್ಲಿಮರನ್ನು ಹೊಡೆಯಲು ಯಾವ ಬಡಿಗೆಯಾದರೂ ಸರಿ ಎಂಬ ಧೋರಣೆಯೇ?

-ಜೆ. ರಾಜಶೇಖರ್

ಕಾವೇರಿ ನದಿಗೇ ದಿಗ್ಬಂಧನ ಹಾಕಿಸಿ!!

ಕಾವೇರಿ ನ್ಯಾಯಮಂಡಳಿಯ ಐತೀರ್ಪು ಹೊರ ಬಂದಿದೆ.

ಅದು ಕರ್ನಾಟಕದ ಪರವಾಗಿಯಂತೂ ಇಲ್ಲ ಎಂಬುದು ಸ್ಫಟಿಕ ಸ್ಪಷ್ಟ; ಕರ್ನಾಟಕದ ವಿರೋಧ ಆಗಿದೆಯೇ? ಇದೇ ಗೊಂದಲ.

ತಮಿಳುನಾಡಿಗೆ 419 ಟಿಎಂಸಿ ನೀರು, ಕರ್ನಾಟಕಕ್ಕೆ 270 ಟಿಎಂಸಿ ನೀರು. ಇದು ತೀರ್ಪು. ಇದರ ಒಳ ವಿವರಗಳು ತಿಳಿದಿಲ್ಲ.

ಸಿಡಿದೆದ್ದಿತು ಕರ್ನಾಟಕದ ವೀರಪಡೆ. ಟೀವಿ ಚಾನೆಲ್‌ಗಳಿಗೆ ಸುಗ್ಗಿ. ಮೂಲೆ ಸೇರಿದ್ದ ರಾಜಕಾರಣಿಗಳಿಗೂ ಮರುಜೀವ. ನೀರಾವರಿ ತಜ್ಞರು ಎಂದು ಕರೆದುಕೊಳ್ಳುವ ವರಿಗೆ ಚಾನೆಲ್‌ಗಳ ನೂಕುನುಗ್ಗಲು.

ಕ್ಯಾತೇಗೌಡ ಇಂತಹ ಒಬ್ಬ ನಾಯಕ. ಚಳವಳಿಗೆ ಬರಬರನೆ ನುಗ್ಗುತ್ತಿದ್ದವ ಕಣ್ಣಿಗೆ ಬಿದ್ದ.

'ಕ್ಯಾತ ಬಾಲಾ ಇಲ್ಲಿ.'

'ಏನ್ಸಾ?'

'ಕರ್ನಾಟಕಕ್ಕೆ ಅನ್ಯಾಯ ಆಗದೇನ್ಲ?'

'ಮತ್ತೆ ಅವರಿಗೆ ನಾನೂರು ಚಿಲ್ಲರೆ ಟಿಎಂಸಿ, ನಮಗೆ ಇನ್ನೂರು ಚಿಲ್ಲರೆ ಟಿಎಂಸಿ ಅಂದ್ರೆ ಸರೀನಾ ಸಾ? ಇನ್‌ಟರ್ಮ್ ರಿಪೋರ್ಟ್‌ಲಿ ಇನ್ನೂರ ಐದು ಟಿಎಂಸಿ ಅಂದಿದ್ರು. ಈಗ ಏಕ್‌ದಂ ನೂನೂರು ಚಿಲ್ಲರೆಗೆ ಏರಿಸವ್ರೆ. ಎಲ್ಲಿಂದ ಎಲ್ಲಿಗೆ ಸಾ.'

ತೀರ್ಪು ಹೊರಬಂದ ದಿವಸ ನಮ್ಮ ಕೆಲವು ಶಾಸಕರು ಹೇಳಿದಂತೆಯೇ ಇತ್ತು ಅವನ ಹೇಳಿಕೆ!

'ಕ್ಯಾತ?'

'ಏನ್ಸಾ?'

'ಒಂದು ಟಿಎಂಸಿ ಅಂದರೆ ಎಷ್ಟು?'

'ಟಿಎಂಸಿ ಅಂದರೆ ಟಿಎಂಸಿ' ಅಂತ ಸಿಡುಕಿದ! ನಂತರ 'ಸಾಟೀ ಮಾಯ್ತದೆ ಬತ್ತೀನಿಸಾ' ಎಂದು ಹೊರಡಲು ಆತುರ ತೋರಿಸಿದ.

'ವಸಿ ನಿಂತ್ಕಳೋ ಮಾರಾಯ, ಅದ್ಯಾಕಂಗಾಡೀಯ?'

'ಸಾ ಸಂಜೀಕೆ ಮಾತಾಡುವ. ಈಗ ನಾನೋಗ್ಬೇಕು. ರೈಲು ಬರೋ ಟೇಮಾಯ್ತು. ಲೇಟಾದ್ರೆ ಕೆಲ್ಸ ಕೆಟ್ಹೋಯ್ತದೆ.'

'ಯಾವೂರಿಗೋಯ್ತಿದೀಯ?'

'ಯಾವೂರಿಗೂ ಇಲ್ಲ ಸಾ. ರೈಲು ತಡಿಯಾಕೆ ಹೋಯ್ತಿದೀನಿ. ಲೇಟಾದ್ರೆ ಬ್ಯಾರೆಯೋರು ಎಂಜಿನ್ ಮೇಲೆ ನಿಂತ್ಬುಡ್ತಾರೆ' ಅಂತ ಚಡಪಡಿಸಿದ.

'ಯಾರು ನಿಂತರೇನು, ರೈಲು ತಡೆ ಅಂತೂ ಆಯ್ತದಲ್ಲ?'

'ಸರಿಯಾಗಿ ಹೇಳಿದ್ರಿ ಸಾ ನೀವೂವೆ. ಟೀವಿಲಿ ನಾನು ಬರೋದು ಬ್ಯಾಡ್ವಾ?' ಎನ್ನುತ್ತ ಬರಬರನೆ ಹೊರಟ.

ಅದೂ ನಿಜವೆ. ರೈಲು ಬಂದ ನಂತರ ಅವನು ನಿಲ್ದಾಣ ತಲುಪಿದರೆ ಟಿವಿ ಕ್ಯಾಮೆರಾದವರು ರೀಲು ಸುತ್ತಿಕೊಂಡು ಬೇರೆ ಕಡೆಗೆ ಹೊರಟುಬಿಟ್ಟಿರ್ತಾರೆ, ಬೇರೆ ಕಡೆ ದೃಶ್ಯಾವಳಿಗಳ ಸೆರೆ ಹಿಡಿಯೋಕೆ.

ಕ್ಯಾತ ಅತ್ತ ಹೋದ ನಂತರ ಹಾಗೇ ಪೇಟೆ ಬೀದೀಲಿ ನಡೆಯುತ್ತಾ ಹೊರಟೆ. ಅಲ್ಲಲ್ಲಿ ಉರಿಯುತ್ತಿರುವ ಬೆಂಕಿ ಕಾಣಿಸಿತು. ಕೆಲವು ಕಡೆ ಟೈರು ಸುಡುತ್ತಿದ್ದರು. ಒಂದು ಕಡೆ ಗಿರೀಶ್ ಕಾರ್ನಾಡ್ ಪ್ರತಿಕೃತಿ ಸುಡುತ್ತಾ ಇದ್ದರು. ಅವರು ಅದ್ಯಾವುದೋ ಟಿವಿ ಚಾನೆಲ್‌ನಲ್ಲಿ ನ್ಯಾಯಮಂಡಳಿ ತೀರ್ಪನ್ನು ತಿಗಬಾಯಿ ಮುಚ್ಚಿಕೊಂಡು ಕರ್ನಾಟಕ ಒಪ್ಪಿಕೋಬೇಕು ಅನ್ನುವ ಅರ್ಥದ ಮಾತನ್ನು ಹೇಳಿದ್ದರಂತೆ. ಅವರು ಅದ್ಯಾವ ಹಿನ್ನೆಲೆಯಲ್ಲಿ ಹೇಳಿದರೋ, ಅವರಿಗೆ ಅದೆಂತಹ ಒತ್ತಡ ಬದ್ದಿತ್ತೋ ಗೊತ್ತಿಲ್ಲ, ಅಂತೂ ಹಾಗೆ ಹೇಳಿದ್ದರಂತೆ. ಇನ್ನೊಂದು ಕಡೆ ತಮಿಳುನಾಡು ಮುಖ್ಯಮಂತ್ರಿ ಪ್ರತಿಕೃತಿಯನ್ನ ಚಪ್ಪಲಿ ಕಾಲುಗಳಿಂದ ತುಳೀತಾ ಇದ್ದರು. ಅದು ಯಾಕೆ ಅಂದರೆ ಇಂತಹ ಅನ್ಯಾಯದ ತೀರ್ಪು ಬರಬೇಕಾದರೆ ಅವನೇ ಕಾರಣ ಅಂತೆ. ನನಗೆ ಆಶ್ಚರ್ಯ ಆಯಿತು.

'ಇದು ಯಾಕಪ್ಪ ಹೀಗೆ ಮಾಡ್ತಿದೀರಿ' ಅಂತ ಒಬ್ಬನ್ನ ಕೇಳಿದೆ.

'ನಿಮಗೇನ್ರಿ ಅದನ್ನ ಕಟ್ಕೊಂಡು?'

'ಅಲ್ಲ ಅದು ಕರುಣಾನಿಧಿ ಅಲ್ವ?'



'ಹೌದು, ಅವನ್ನೇ ತುಳಿತಿರೋದು.'

'ಅದೆ ಯಾಕೆ ಅಂತ?'

'ಹೆಚ್ಗೆನೀರು ತಗಂಡವ್ನಲ್ಲ ಅದ್ಕೆ.'

'ಅಲ್ಲ ಅವನ ರಾಜ್ಯ ಅವನು ಪ್ರಯತ್ನಿಸಿದ. ನಮ್ಮ ಮುಖ್ಯಮಂತ್ರೀನೂ ಯಾಕೆ ಹಂಗೆ ಮಾಡಬಾರದಿತ್ತು?

'ಆದ್ರೆ ಮಾಡಿಲ್ವಲ್ಲ ಏನು ಮಾಡ್ತೀರಿ?'

'ಹಂಗಾರೆ ಚಪ್ಪಲಿ ತುಳಿತಕ್ಕೆ ಒಳಗಾಗಬೇಕಾದವರು ಯಾರು? ಕರುಣಾನಿಧೀನೋ ನಮ್ಮ ಮುಖ್ಯಮಂತ್ರಿಗಳೊ?'

ದುರುಗುಟ್ಟಿ ನೋಡಿದ. ಅವನು ನೋಡಿದ ರಭಸದಲ್ಲೇ ಓ ಇವನು ಆಡಳಿತಾರೂಢ ಪಕ್ಷದವನು ಅಂತ ಖಾತರಿ ಆಯಿತು. ಸುದ್ದಿ ವಿಕೃತ ರೂಪ ಪಡೆದು 'ಈ ಧೂರ್ತ ಕುಮಾರಣ್ಣನ್ನ ಚಪ್ಪಲೀಲಿ ಹೊಡಿ ಅಂದ' ಅಂತ ಎಲ್ಲಿ ಹರಡಿಬಿಡುತ್ತೋ, ನನ್ನ ದೇಹದ ಕ್ಷೇಮದಿಂದ ತಲೆ ಮರೆಸಿಕೊಳ್ಳುವುದು ಮೇಲು ಅಂತ ಜಾಗ ಖಾಲಿ ಮಾಡಿದೆ.

ದಳದವರಿಗಿಂತ ನಾವೇನು ಕಡಿಮೆ ಇಲ್ಲ ಎಂಬುದನ್ನು ಸಾಬೀತು ಮಾಡಲು ಕಾಂಗ್ರೆಸ್‌ನವರು ಪ್ರತಿಭಟನೆ ಮಾಡುತ್ತಿದ್ದ ಸ್ಥಳಕ್ಕೆ ಹೋದೆ. ಅಲ್ಲಿ ಕುಮಾರಣ್ಣನ ತೆಗಳಿಕೆ, ಅಂಬರೀಶಣ್ಣನ ಹೊಗಳಿಕೆ ನಿರಂತರವಾಗಿ ನಡೆಯುತ್ತಿತ್ತು. ಸಮೀಪದಲ್ಲೇ ಇದ್ದ ಹೋಟೇಲಿಗೆ ಹೋಗಿ ಕಾಫಿಗೆ ಆರ್ಡರ್ ಮಾಡಿ ಸಿಗರೇಟು ಹಚ್ಚಿದೆ.

ಎದುರಗಡೇನೆ ಟಿವಿ ಇತ್ತು. ಅದೇನು ಕಾಕತಾಳೀಯ ನ್ಯಾಯವೋ ಅಂಬರೀಶಣ್ಣಾರು ಅಲ್ಲಿ ಟಿವಿ ಕ್ಯಾಮೆರಾ ಎದುರು ನಿಂತಿದ್ದರು. 'ಅದೇನು ಪದೇಪದೇ ರಾಜೀನಾಮೆ ನೀಡ್ತೀರಾ ಅಂತ ಕೇಳ್ತೀರಾ, ಅದು ಬಿಟ್ಟು ಬೇರೆ ಕೇಳಿ ಹೇಳ್ತೀನಿ' ಅಂತಿದ್ರು ಅಣ್ಣಾರು. ಅದೂ ಸರೀನೆ ಅನ್ನಿ. ಅದೇನೋ ಹೇಳ್ತಾರಲ್ಲ ಹೋಗಿ ಬಂದು ಮೂಗೀನ ಅದೇನೋ ಮಾಡ್ನ ಅಂತಾವ, ಹಂಗೆ ಮತ್ತೆ ಕೆದಕಿದ್ದನ್ನೇ ಕೆದಕುತ್ತಾ ಇದ್ದರೆ ಯಾರಿಗೆ ಬೇಸರ ಆಗುವುದಿಲ್ಲ ಹೇಳಿ. ಅತ್ತೂ ಕರೆದು ಪಡೆದುಕೊಂಡಿರೋ ಮಂತ್ರಿ ಪದವೀನ ಬಿಡ್ತೀರಾ ಅಂತ ಕೇಳಿದರೆ ಅವರು ಏನು ಹೇಳಬೇಕು? 'ಅಂತಹ ಪರಿಸ್ಥಿತಿ ಬಂದರೆ ಕೊಡ್ತೀನಿ' ಅಂತ ಹೇಳ್ತಾರೆ. ಪ್ರಶ್ನೆ ಕೇಳಿದವರಿಗೂ ಗೊತ್ತು ಅವರು ರಾಜೀನಾಮೆ ನೀಡಲ್ಲ ಅಂತ. ಅವರಿಗೂ ಗೊತ್ತು ಯಾವ ಸಂದರ್ಭ ಬಂದರೂ ಅಪರೂಪಕ್ಕೆ ಸಿಕ್ಕಿರೋ ಈ ಅಧಿಕಾರಾನ ಕಳೆದುಕೊಳ್ಳುವಂತಹ ಮೂರ್ಖ ಅಲ್ಲ ಅಂತ. ಆದರೂ ಅವರು 'ಕೊಡ್ತೀರಾ' ಅಂತ ಕೇಳ್ತಾರೆ; ಇವರು 'ಕೊಡ್ತೀನಿ' ಅಂತಾರೆ! ಇದೇ ಕಾವೇರಿ ಗಲಾಟೇಲಿ ಸಂಸದ ಅಂಬರೀಶ್ ರಾಜೀನಾಮೆ ಬಿಸಾಕಿದ್ದರು, ಆದರೆ ಹಾಗೆ ಮಾಡಿದ್ದು ಸ್ಪೀಕರ್ ಅವರಿಗಲ್ಲ, ಕಾಂಗ್ರೆಸ್ ಅಧ್ಯಕ್ಷರಿಗೆ! ಇದು ಹಾಗಿರಲಿ. ಇದನ್ನು ಬಿಟ್ಟು ಬೇರೆ ವಿಷಯ ಇದ್ದರೆ ಕೇಳಿ ಅಂತ ಅಂಬರೀಶಣ್ಣಾರು ಕೇಳಿದ್ದಕ್ಕೆ ಬೇರೆ ಯಾವ ಸಂಗತಿಯನ್ನೂ ಪ್ರಸ್ತಾಪಿಸಿದ್ದು ತಿಳೀಲಿಲ್ಲ. ವರದಿಗಾರರ ಬಳಿಯೇ ಬೇರೆ ಪ್ರಶ್ನೆಗಳು ಇರಲಿಲ್ಲವೋ, ಅಥವಾ ಇವರನ್ನು ಕೇಳಿದರೆ ಯಾವ ಸಮಸ್ಯೆಗೂ ಹೊಸ ಹೊಳವು ಬೀಳುವ ಸಂದರ್ಭ ಇರಲ್ಲ ಎಂದೋ ಎಲ್ಲರೂ ಸುಮ್ಮನಾದರು.

ಯಾವುದೇ ರಾಜ್ಯಮಟ್ಟದ ಸಮಸ್ಯೆ ತಲೆದೋರಿದರೂ ಆಡಳಿತ ನಡೆಸುವ ಪಕ್ಷದ ವರಿಷ್ಠರು 'ಸರ್ವಪಕ್ಷ ಸಭೆ' ಅಂತ ಕರೆದು ಅವರ ಅಭಿಪ್ರಾಯ ಕೇಳಿದಂತೆ ಮಾಡಿ, ತಮಗೆ ತೋಚಿದ್ದನ್ನು ಅನುಷ್ಠಾನಗೊಳಿಸುವುದು ಲಾಗಾಯ್ತಿನಿಂದಲೂ ನಡೆದು ಬಂದಿರೋ ಸಂಪ್ರದಾಯ. ಹಾಗೇನೆ ಕುಮಾರಸ್ವಾಮಿಯವರು ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪಿನ ಬಗ್ಗೆ ನಿರ್ಧಾರ ಕೈಗೊಳ್ಳಲು ಕರೆದಿದ್ದ ಸರ್ವಪಕ್ಷಗಳ ಸಭೆಯ ತೀರ್ಮಾನ ಟಿವಿಯಲ್ಲಿ ಬರುತ್ತಿತ್ತು, ಅದನ್ನು ನೋಡುತ್ತಿದ್ದಂತೆ ನನಗೆ ಅನ್ನಿಸಿದ್ದು ಏನು ಅಂದರೆ.....

ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಮುಗಿದಿದೆ. ಈ ಅವಧಿಯಲ್ಲಿ ಅದರ ಕಾರ್ಯ ಚಟುವಟಿಕೆ ಗಮನಿಸಿದವರಿಗೆ ಒಂದು ಮನದಟ್ಟಾಗಿರಲೇಬೇಕು. ಅದೇನು ಅಂದರೆ ಈ ಸರ್ಕಾರಕ್ಕೆ ಜ್ಯೋತಿಷ್ಯದಲ್ಲಿ ನಂಬಿಕೆ, ಹೋಮ ಹವನಗಳಲ್ಲಿ ಶ್ರದ್ಧೆ ದೇವರಲ್ಲಿ ಭಕ್ತಿ ಇದೆ. ಈ ಸರ್ಕಾರ ಉಳಿದಿರುವುದೂ ಅದರ ಆಧಾರದ ಮೇಲೇ ಎಂಬ ನಂಬಿಕೆ ಹಲವರದ್ದು. ಆದುದರಿ ಕುಮಾರಸ್ವಾಮಿ ಈ ರಾಜ್ಯದ ಮುಖ್ಯಮಂತ್ರಿ ಆಗುತ್ತಾ ಭವಿಷ್ಯ ನುಡಿದ ಜ್ಯೋತಿಷಿಯನ್ನು ಕರೆತಂದು, ಗ್ರಹಗಳನ್ನು ರಾಜ್ಯಕ್ಕೆ ಒಳಿತನ್ನು ಮಾಡ ಮನೆಗಳಲ್ಲಿ ಕೂರಿಸಿ, ಎಲ್ಲ ದೇವಾಲಯಗಳ ಹೋಮ ಹವನ, ಪೂಜೆ ಪುನಸ್ ನಡೆಸುವಂತೆ ಆಜ್ಞೆ ಹೊರಡಿಸುವುದು; ಕಾ ನದಿ ತಮಿಳುನಾಡಿಗೆ ಹರಿಯದಂತೆ ದಿಗ್ಬ ಹಾಕಿಸುವುದು. ಇದರಿಂದ ಮಾತ್ರ ಉದ್ಭವಿಸಿರುವ ಸಮಸ್ಯೆಗೆ ಪರಿಹಾರ ಸಿಗು ಈ ಬಗ್ಗೆ ಸಂಶಯ ಬೇಡ. ಹಿಂದೆ ಮುಖ್ಯಮ ಆಗಿದ್ದ ರಾಮಕೃಷ್ಣ ಹೆಗಡೆ ಅವರು ಬರಗಾಲ ಬಂ ಕರ್ಜನ್ಯ ಜಪ ಮಾಡಿಸಿದ್ದನ್ನೂ, ಎಸ್.ಎಂ. ಕೃಷ್ಣರ ಇಂತಹದ್ದೇ ಸಂದರ್ಭದಲ್ಲಿ ಚರ್ಚು, ಮಸೀದಿ, ದೇವಾ ಗಳಲ್ಲಿ ಪ್ರಾರ್ಥನೆ ಮಾಡಿಸಿದ್ದನ್ನು ಸ್ಮರಿಸಬಹುದಾ ಇದು ವ್ಯರ್ಥ ಕಸರತ್ತು ಎಂದು ಕೆಲವರಿಗೆ ಅನ್ನಿಸಬಹು ಅದರಿಂದ ಮಳೆಯೂ ಬಂದಿಲ್ಲ ಎಂಬುದೂ ಸಂಗತಿಯೇ. ಆದರೆ ಅದರಿಂದಾಗಿ ಅವರೀರ್ವ ಮಾಧ್ಯಮಗಳು ಪ್ರಚಾರ ನೀಡಿದ್ದನ್ನೂ, ಮೇಧಾವಿಗಳೆ ಹೊಗಳುತ್ತಿರುವುದನ್ನೂ ಗಮನಿಸಬೇಕು. ಇಂತಹದ್ದೇ ಆಸ್ತಿಕ ಮಹಾಶಯರಿಂದ ಕುಮಾರಸ್ವಾಮಿಯವ ಸಿಗುವುದರಲ್ಲಿ ಯಾವುದೇ ಸಂಶಯ ಇಲ್ಲ!

ನ್ಯಾಯಮಂಡಳಿಯ ತೀರ್ಪು ಮರಣಶಾಸನ ನಿಜ ಆಗಿರುವುದು ರೈತರಿಗಲ್ಲ! ಆದರೆ ಸಾಹಿತ್ಯ ಮತ್ತು ಸಂ ಇಲಾಖೆಗೆ! ರಾಜ್ಯ ಸರ್ಕಾರ ಬೆಳಗಾವಿಯ ವಿಶ್ವಕ ಸಮ್ಮೇಳನವನ್ನು ಮುಂದೂಡಿ ಇಲಾಖೆಗೆ ಘನಘೋ ಅನ್ಯಾಯ ಮಾಡಿದೆ! ಐಶ್ವರ್ಯ ರೈ ಅನ್ನು ತಮ್ಮ ಯಲ್ಲಿಟ್ಟುಕೊಂಡು ಉಪಚರಿಸಿ ತಮ್ಮ ಜನ್ಮ ಸಾ ಮಾಡಿಕೊಳ್ಳಬೇಕೆಂದಿದ್ದವರಿಗೆ, ಈ ಜನ್ಮವೇ ವ್ಯರ್ಥ ಎನಿ ಬಹುದು! ಇಲಾಖಾ ಕೃಪಾಪೋಷಿತ ಸಾಹಿತ್ಯ ಸಂಸ್ಕೃ ಅದ್ವರ್ಯರುಗಳಿಗೆ ತಮ್ಮ ಪ್ರಚಂಡ ಪ್ರದರ್ಶನದ ಅವಕಾಶ ವಂಚಿತ ಆಗಿರುವುದು ಹಾಗಿರಲಿ. ಇಲಾಖ ಕೃಪೆ ಇದ್ದಂತೆ ಅದು ಮತ್ತೆ ಎಲ್ಲಿಯಾದರೂ ದೊರೆಯು ಅದನ್ನು ಅನುಭವಿಸುವ ಭಾಗ್ಯ ಈ ಭಾಗದ ಜನ ಇಲ್ಲದೇ ಹೋಯಿತಲ್ಲಾ ಎಂಬ ಕೊರಗಂತೆ! ಗುಪ್ತ ಅನಿವಾಸಿ ಕನ್ನಡಿಗರೊಂದಿಗೆ ಸಾಂಸ್ಕೃತಿಕ ವಿನಿಮಯ ಕ ಮಾಡಿಕೊಂಡಿದ್ದ ಕೆಲವು ಅಧಿಕಾರಿಗಳಿಗೆ ನಿರಾಶ ಕಾರ್ಮೋಡವೇ ಕವಿದಿದೆಯಂತೆ! ಹಣದ ವಿಷಯ ಸಮ್ಮೇಳನ ನಡೆದಿದ್ದರೆ ಅದಕ್ಕೆ ತಗುಲಿದ ಖರ್ಚು ಲೆಕ್ಕ ತೋರಿಸುತ್ತಿದ್ದರು. ಈಗ ಸಮ್ಮೇಳನದ ಪೂರ್ವಭ ಹಣ ಬಿಡುಗಡೆ ಅಂತ ತೋರಿಸುತ್ತಾರೆ! ಇಂತಹ ಬೇನಾ ರಸೀದಿ ಸೃಷ್ಟಿಸೋದರಲ್ಲಿ ಇಲಾಖೆಗೆ ಶಾನೆ ಅನು ಇದೆ.

ಹೋಟೆಲಿನಿಂದ ಹೊರಬಂದು ಮನೆ ಕಡೆಗೆ ಹೋ ರೈಲು ತಡೆ ನಡೆಸಲು ಹುಮ್ಮಸ್ಸಿನಲ್ಲಿದ್ದ ಒಬ್ಬ ಹು ಸಿಕ್ಕಿದ.

'ರೈಲು ತಡೆ ಆಯ್ತೇನೋ' ಅಂದೆ.

'ಪೋಸ್ಟ್‌ಪೋನ್ ಆಯ್ತು ಸಾ. ನಾಳೀಕೆ ಅದು

'ಯಾಕೋ ಮಂಗ' ಅಂದೆ.

'ಇವತ್ತು ಆ ಟೈಮಲಿ ಭಾರತ-ಶ್ರೀಲಂಕಾ ಕ್ರಿ ಮ್ಯಾಚ್ ಅದೆ ಸಾ' ಅಂದ ಅವ!

-ಎಚ್.ಎಲ್. ಕೇಶವಮೂ

ಅಲ್ಪಸಂಖ್ಯಾತರನ್ನು ದ್ವೇಷಿಸುವುದು ವಿರಾಟರ ಏಕಮೇವ ಅಜೆಂಡಾ

'ಲಂಕೇಶ್' ನಲ್ಲಿ ಮೂಡಿಬಂದ 'ಗುರುಪಾದಪ್ಪನ ಪಾದಪೂಜೆ' ಲೇಖನ ಚೆನ್ನಾಗಿತ್ತು. ನಮ್ಮ ರಾಜಕೀಯ ನಾಯಕರ ಮಕ್ಕಳು ಯಾವ ಬಾರ್‌ನಲ್ಲಿ ಕೂತುಕೊಂಡು ಕುಡಿದು, ಗುಂಡು ಹಾರಿಸಿದರೂ ಅವರು ಬಚಾವ್ ಆಗುತ್ತಾರೆ. ಇದು ಯಾಕೆ ಆಗುತ್ತದೆಂದರೆ ಗೂಂಡಾಗಿರಿ, ಮೋಸ, ಅತ್ಯಾಚಾರ, ಅನಾಚಾರಗಳನ್ನು ಅಳವಡಿಸಿಕೊಂಡಿದ್ದರೆ ಮಾತ್ರ ಆತ ರಾಜಕೀಯವಾಗಿ ಬೆಳೆಯುತ್ತಾನೆ, ಯಾಕೆಂದರೆ ಅವೇ ಇವತ್ತಿನ ರಾಜಕೀಯದ ಅಸ್ತ್ರಗಳು. ಅದಕ್ಕೆ ಅಲ್ಲವೇ ಇವತ್ತು ಪೊಲೀಸ್ ಠಾಣೆಯ ಗೋಡೆ ಮೇಲಿರುವ ಮುಖಗಳು ಹುಟ್ಟುಹಬ್ಬವನ್ನೋ, ಇನ್ನೇನನ್ನೋ ಆಚರಿಸಿಕೊಳ್ಳುತ್ತಾ ಬೀದಿಬೀದಿಗಳಲ್ಲಿ ಬ್ಯಾನರ್‌ಗಳ ಮೇಲೆಯೂ ರಾರಾಜಿಸುವುದು?

- ಮುತ್ತಣ್ಣ ಪೂಜಾರ್, ಕದಲೂಬಾಳು

ಜನವರಿ 31ರ ಸಂಚಿಕೆಯಲ್ಲಿ ಶಿವಸುಂದರ್‌ರವರ ಲೇಖನ 'ಗೋಲ್ವಾಲ್ಕರ್‌ನ ಚಿಂತನೆಯ ಮುಳ್ಳಿನ ಗೊಂಚಲು' ಚಿಂತನಾರ್ಹವಾಗಿತ್ತು. ಆಧುನಿಕ ಹಿಂದೂ ಧರ್ಮದ ಹರಿಕಾರ ಸ್ವಾಮಿ ವಿವೇಕಾನಂದರ ಚಿಂತನೆಗೂ, ಗೋಲ್ವಾಲ್ಕರರ ಮನುವಾದಿ ಚಿಂತನೆಗೂ ಯಾವುದೇ ಸಂಬಂಧವಿಲ್ಲ. ಹಿಂದೂ ಸಮಾವೇಶಗಳಿಗೆ ವಿವೇಕಾನಂದರ, ಅಂಬೇಡ್ಕರ್, ಬಸವಣ್ಣರ ಚಿತ್ರಪಟ ತೂಗಿಸಿದ ಮಾತ್ರಕ್ಕೆ ಗೋಲ್ವಾಲ್ಕರ್ ಚಿಂತನೆ ಸಾಫ್ ಆಗುತ್ತದೆಯೇ?

ಸ್ವಾಮಿ ವಿವೇಕಾನಂದರದು ವಿರಾಟ್ ಚಿಂತನೆ. ಜಗತ್ತೆಲ್ಲವನ್ನೂ ತಮ್ಮ ಕಬಂಧಬಾಹುಗಳಲ್ಲಿ ಸೇರಿಸಿಕೊಂಡ ದೈತ್ಯ ಸನ್ಯಾಸಿ. ಅವರಾಡಿದ ಸ್ನೇಹಮಯೀ ಹಿಂದೂ ಸಂದೇಶ ಇಡೀ ವಿಶ್ವಕ್ಕೆ, ಮಾನವಕುಲಕ್ಕೆ ಮಾರ್ಗದರ್ಶನ. ಆ ಮಹಾನುಭಾವನ ಯಾವುದಾದರೂ ಒಂದು ತತ್ವವನ್ನು ಇಂದಿನ ವಿರಾಟ್ ಹಿಂದೂ ಸಮಾವೇಶದವರು ಇಂಪ್ಲಿಮೆಂಟ್ ಮಾಡುತ್ತಿದ್ದಾರೆಯೇ. ಇಲ್ಲ, ಅವರಿಂದ ಅದು ಸಾಧ್ಯವಿಲ್ಲ, ಏಕೆಂದರೆ ಆ ಮಹಾನುಭಾವನ ತತ್ವ ಅಳವಡಿಸಿದರೆ ವಿರಾಟ್ ಸಮಾವೇಶಗಳ ಸಂಪೂರ್ಣ ಸ್ಟ್ರಕ್ಚರ್ ಮತ್ತು ಪಾಲಿಸಿ ಬದಲಾಯಿಸಬೇಕಾಗುತ್ತದೆ. ಇದು 'ವಿರಾಟ'ರಿಗೆ ಆಗದ ಮಾತು.

ವಿರಾಟರಿಗೆ ಈಗಿರುವುದು ಅಲ್ಪಸಂಖ್ಯಾತರನ್ನು ದ್ವೇಷಿಸುವ ಏಕಮೇವ ಅಜೆಂಡಾ ಮಾತ್ರ. ಅದಕ್ಕೆ ಪೂರಕವಾಗಿ, ಮಾರಕವಾಗಿ 'ಗುರೂಜಿ ಸಾಹಿತ್ಯ' ಇದೆ. ಅದನ್ನು ಉಪಯೋಗಿಸಿಕೊಂಡು ಅವರೆಲ್ಲ ಈಗ ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ.

ರಾಷ್ಟ್ರದ ಬರ್ನಿಂಗ್ ಇಶ್ಯೂಗಳಾದ ಭ್ರಷ್ಟಾಚಾರ, ಬಡತನ, ನಿರುದ್ಯೋಗ, ಅನಕ್ಷರತೆ, ವೇಶ್ಯಾವೃತ್ತಿ, ಜಾತೀಯತೆ, ಅಸ್ಪೃಶ್ಯತೆ, ಪರಿಸರನಾಶ... ಹೀಗೆ ಹತ್ತು ಹಲವಾರು ಸಮಸ್ಯೆಗಳನ್ನು ಬದಿಗೊತ್ತಿ ಅದನ್ನು ಸ್ವಲ್ಪವಾದರೂ ಪರಿಹರಿಸಲು ಪ್ರಯತ್ನಿಸದೇ, ಅಷ್ಟೇನೂ ಪ್ರಮುಖವಲ್ಲದ ದತ್ತಾತ್ರೇಯ, ಗೋಹತ್ಯೆ ಈದ್ಗಾಗಳ ಹಿಂದೆ ಗಿರಕಿ ಹೊಡೆದು ಪ್ರಯೋಜನವೇನು?

ರಹಮತ್ ಅಲಿ (ಬಾವ)
ಮಾಲ್ದಾರೆ, ಕೊಡಗು


'ಬಂ ಮತ್ತೆ ಕಾಂಗ್ರೆಸ್‌ಗೆ' ವರದಿಯು ಅತ ಸ್ಥಿತಿಯಲ್ಲಿ ವಿಲವಿಲನೆ ಒದ್ದಾಡುತ್ತಿರುವ ರಂಗುರಂಗಿ ರಾಜಕಾರಣಿ ಎಸ್. ಬಂಗಾರಪ್ಪನವರು ರಾಜಕೀಯವಾ ಅಧೋಗತಿಯತ್ತ ಸಾಗುತ್ತಿರುವುದನ್ನು ಚಿತ್ರಿಸಿದೆ.

ಟೊಂಗೆಯಿಂದ ಟೊಂಗೆಗೆ ಜಿಗಿಯುವ ಮಂಗನ ಬಂಗಾರಪ್ಪ ಪಕ್ಷದಿಂದ ಪಕ್ಷಕ್ಕೆ ಹಾರಿ ಈಗ ಸವಕ ನಾಣ್ಯದಂತಾಗಿದ್ದಾರೆ. ಇಂತಹ ಸವಕಲು ನಾಣ್ಯದಿ ಕರ್ನಾಟಕದಲ್ಲಿ ಸೈಕಲ್ ಸವಾ ಸಾಧ್ಯವಿಲ್ಲವೆಂಬ ಕಟುಸತ್ಯ ಅರಿ ರುವ ಉತ್ತರ ಪ್ರದೇಶದ ಸಿಂ ಗಳು 'ಬಂ' ಬಗ್ಗೆ ಭ್ರಮನಿರಸ ಗೊಂಡಿದ್ದಾರೆ. 'ಬಂ' ಜಮಾ ಮುಗಿದಿರುವುದಕ್ಕೆ ಇದೇ ಸಾಕ್ಷಿ

'ಲಂಕೇಶ್' ಅತ್ಯಂತ ಗುಣಮಟ್ಟದ ಪತ್ರಿಕೆಯಾಗಿ ಹೊರಹೊಮ್ಮುತ್ತಿರುವುದು ಓದುಗರಾದ ನಮಗೆ ಅತೀವ ಸಂತಸವನ್ನು ಉಂಟುಮಾಡಿದೆ.


-ಶರಣಪ್ಪ ಪಾಟೀಲ, ಕೊಪ್ಪ

ನಿರೂಪಣೆ: ಸದಾಶಿವ ಶೆಣೈ 39



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಭೂಗತ ಜಗತ್ತಿನ ಪರಿಚಯ





'ಓಂ' ಚಿತ್ರದಲ್ಲಿ ಭೂಗತ ಜಗತ್ತಿನ ಜನ ನಟಿಸಿದ್ದು ನಿಮಗೆಲ್ಲ ಗೊತ್ತೇ ಇದೆ. ಈ ಚಿತ್ರದ ಚಿತ್ರೀಕರಣದ ಸಮಯದಲ್ಲಿ ಜೇಡರಹಳ್ಳಿ ಕೃಷ್ಣಪ್ಪ, ತನ್ವೀರ್, ಕೊರಂಗು ಮತ್ತು ಬೆಕ್ಕಿನ ಕಣ್ಣು ರಾಜೇಂದ್ರ.... ಹೀಗೆ ನನಗೆ ಮೊದಲ ಬಾರಿಗೆ ಭೂಗತ ಜಗತ್ತಿನ-ಜನರ ಪರಿಚಯವಾಯ್ತು...

"ಏನಯ್ಯಾ ಇವ್ನ.... ಈ ಹುಚ್ ಉಪೇಂದ್ರ ಹೀಗೆ ಮಾಡ್ತಿದಾನಲ್ಲ" ಎಂದು ಅಪ್ಪಾಜಿ ನಗುನಗುತ್ತಾ ನನ್ನನ್ನು ಕೇಳಿದರು. "ಯಾಕಪ್ಪಾ?" ಎಂದು ನಾನು ಅವರನ್ನು ಕೇಳಿದೆ.

'ಓಂ' ಚಿತ್ರದ ಫೋಟೋ ಸೆಷನ್ ಸಂದರ್ಭದಲ್ಲಿ ಅಪ್ಪಾಜಿ ನನ್ನನ್ನು ಉಪೇಂದ್ರ ಬಗ್ಗೆ ಕೇಳಲು ಕಾರಣವೂ ಇತ್ತು. ಈ ಚಿತ್ರದ ಫೋಟೋ ಸೆಷನ್ ನಡೆದದ್ದು ಅಪ್ಪಾಜಿ ಮನೆಯ ಅಂಗಳದಲ್ಲಿ. ಅಂದು ಅಂಗಳಕ್ಕೆಲ್ಲಾ ನೀರನ್ನು ಹಾಕಿಸಿ ಎಂದಿದ್ದರು ಉಪೇಂದ್ರ. ಅಲ್ಲಿ ಎರಡು-ಮೂರು ಲೈಟ್ಸ್ ಕೂಡ ಅರೇಂಜ್ ಮಾಡಿದ್ದರು. ಬೆಳಗ್ಗೆನೇ ಉಪೇಂದ್ರ ನನಗೆ ಒಂದು ಸೂಚನೆಯನ್ನು ಕೊಟ್ಟಿದ್ದರು. "ಶಿವಣ್ಣ, ಸಾಯಂಕಾಲದ ಹೊತ್ತಿಗೆ ನೀವು ಒಂಥರಾ ಕರಾಬ್‌ಆಗಿ ಬರ್ಬೇಕು, ಅದು ಹೆಂಗೆ ಬರುತ್ತೀರೋ ನನಗೆ ಗೊತ್ತಿಲ್ಲ. ಆದರೆ ಎಷ್ಟು ಕರಾಬ್‌ಆಗಿ ಕಾಣಿಸ್ತೀರೋ ಅಷ್ಟು ಒಳ್ಳೇದು" ಎಂದಿದ್ದರು.

ಅವರ ಮಾತಿಗೆ ಬೆಲೆ ಕೊಟ್ಟ ನಾನು ನನ್ನ ಮನೆಯಲ್ಲಿದ್ದ ಹಳೆಯ ಪ್ಯಾಂಟೊಂದನ್ನು ಹಾಕಿಕೊಂಡಿದ್ದೆ. ಮುಖಕ್ಕೆ ಅರ್ಧಂಬರ್ಧ ಮೇಕಪ್ ಮಾಡಿಕೊಂಡಿದ್ದೆ. ತಲೆಕೂದಲನ್ನು ಚೆನ್ನಾಗಿ ಕೆದರಿ ಹಾಗೆಯೇ ಬಂದುಬಿಟ್ಟಿದ್ದೆ. ನನ್ನ ಈ ಅವತಾರವನ್ನು ನೋಡಿ ಅಪ್ಪಾಜಿಗೆ ಏನನ್ನಿಸಿತೋ. ಆಗಲೇ ಅವರು "ಏನಯ್ಯಾ ಇವ್ನ.... ಈ ಹುಚ್ ಉಪೇಂದ್ರ ಹೀಗೆ ಮಾಡ್ತಿದಾನಲ್ಲ" ಎಂದದ್ದು.

ಫೋಟೋ ಸೆಷನ್‌ಗೆ ಕರಾಬ್ ಆಗಿ ಬಂದ ನನ್ನನ್ನು ನೋಡಿ ಉಪೇಂದ್ರ "ಸಖತ್ತಾಗಿದೆ ಶಿವಣ್ಣ, ಏನೂ ಛೇಂಜ್ ಮಾಡ್ಬೇಡಿ" ಎಂದು ಹೇಳುತ್ತಾ ನನ್ನ ಕೈಗೆ ಲಾಂಗ್ ಕೊಟ್ಟರು. ನಾನು ಉಪೇಂದ್ರ ಹೇಳಿದಂತೆ ಲಾಂಗನ್ನು ಕೈಯಲ್ಲಿ ಹಿಡಿದು ನಿಂತೆ. ಫೋಟೋಗ್ರಾಫರ್ ಚಕಚಕಾಂತ ನೂರಾರು ಫೋಟೋಗಳನ್ನು ತೆಗೆದರು. ಇದೆಲ್ಲ ನಡೆಯುತ್ತಿದ್ದಾಗ ಅಪ್ಪಾಜಿ ನನ್ನನ್ನು ವಿಚಿತ್ರವಾಗಿ ನೋಡುತ್ತಿದ್ದರು. ಅವರಿಗೆ ಇದೆಲ್ಲ ಇಷ್ಟವಾಗುತ್ತಿಲ್ಲವೋ ಏನೋ ಎಂದು ಮನಸ್ಸಿನಲ್ಲೇ ಅಂದುಕೊಂಡೆ.

ಫೋಟೋ ಸೆಷನ್ ಆದನಂತರ "ನಮ್ಮ ಕಾಲದಲ್ಲೆಲ್ಲಾ ಈ ಥರ ಫೋಟೋ ಸೆಷನ್ ಇರಲಿಲ್ಲ ಕಂದಾ... ನೋಡಯ್ಯ ಅವ್ನನ್ನ.... ಈ ಹುಡ್ಗ ಏನೇನ್ ಮಾಡ್ತಾನೆ ನೋಡು. ಈತ ಕೆಲಸದಲ್ಲಿ ಎಷ್ಟು ಇನ್‌ವಾಲ್ವ್ ಆಗುತ್ತಿದ್ದಾನೆ ನೋಡು" ಎಂದು ಉಪೇಂದ್ರರನ್ನು ಹೊಗಳಿದರು.

ಅಪ್ಪಾಜಿ ಹೇಳಿದ್ದು ಸರಿಯಾಗೇ ಇತ್ತು. ಫೋಟೋ ಸೆಷನ್ ಮಾಡುವಾಗ ಉಪೇಂದ್ರ ಎಷ್ಟು ಇನ್‌ವಾಲ್ವ್ ಆಗಿದ್ದರೆಂದರೆ ನನಗೆ ಸಿನಿಮಾ ಶೂಟಿಂಗ್ ಮಾಡಿದ ಅನುಭವವಾಯಿತು. ದಟ್ ಇಸ್ ವೈ ಐ ಸ್ಟಾರ್ಟೆಡ್ ಲೈಕಿಂಗ್ ಉಪೇಂದ್ರ. ಅವರು ತಮ್ಮ ಕೆಲಸದಲ್ಲಿ ಪ್ರಾಮಾಣಿಕವಾಗಿ ಮುಗ್ನರಾಗುತ್ತಾರೆ. ನಿಜ ಹೇಳಬೇಕೆಂದರೆ ನಾನು ಅವರಷ್ಟು ರಿಯಲಿಸ್ಟಿಕ್ ಆದ ಮತ್ತೊಬ್ಬ ನಿರ್ದೇಶಕನನ್ನು ನೋಡೇ ಇಲ್ಲ. ನಾನು ಹೀಗಂತ ಹೇಳಿದರೆ ನನ್ನ ಚಿತ್ರ ನಿರ್ದೇಶಿಸಿರುವ ಇತರೆ ನಿರ್ದೇಶಕರಿಗೆ ಬೇಸರವಾಗಬಹುದು. ಆದರೆ ಇದು ಸತ್ಯ?.

ಜನ ಸ್ವೀಕರಿಸದೇ ಇರುವುದನ್ನು ಸ್ವೀಕರಿಸುವ ರೀತಿಯಲ್ಲಿ ನಿರೂಪಿಸುವ ಶಕ್ತಿ ಉಪೇಂದ್ರ ಅವರಿಗಿದೆ. ಹೀಗಾಗಿಯೇ ನಾನು 'ಓಂ' ಚಿತ್ರ ನಿರ್ಮಾಣವಾಗುತ್ತಿದ್ದ ಸಮಯದಲ್ಲಿ "ಉಪೇಂದ್ರ ಕನ್ನಡ ಚಿತ್ರರಂಗದ ಮಣಿರತ್ನಂ" ಎಂದು ಹೇಳಿಕೆ ನೀಡಿದ್ದೆ.

ನಾನು ಆರಂಭದಲ್ಲೇ ಹೇಳಿದಂತೆ ಈ ಚಿತ್ರ ಮಾಡಬೇಕೇ ಬೇಡವೇ ಎಂದು ನಮ್ಮ ಮನೆಯಲ್ಲಿ ಚರ್ಚೆ ಆಗಿತ್ತು. ಒಂದಿಬ್ಬರು ಇಂತಹ ರೌಡಿಸಂ ಕತೆಯ ಚಿತ್ರ ಬೇಡವೆಂದು ಅಪಸ್ವರ ಎತ್ತಿದರೂ ಅಪ್ಪಾಜಿ ಮಾತ್ರ "ಯಾಕಪ್ಪೋ ಮಾಡ್ಬಾರ್ದು" ಎಂದು ಬೆಂಬಲಿಸಿದ್ದರು.

ಭೂಗತ ಜಗತ್ತಿನ ಒಳ ಮಜಲುಗಳನ್ನು ಬೆಳ್ಳಿ ಪರದೆಯ ಮೇಲೆ ಬಿಂಬಿಸಿದ ಕೀರ್ತಿ ಉಪೇಂದ್ರ ಅವರಿಗೆ ಸಲ್ಲಬೇಕು. ಅಷ್ಟೇ ಅಲ್ಲ, ಆ ತರಹದ ಚಿತ್ರಗಳಲ್ಲಿ ಎಂದೆಂದಿಗೂ 'ಓಂ' ಮೊದಲ ಸ್ಥಾನದಲ್ಲಿರುತ್ತದೆ. 'ಓಂ' ನಂತರ ಹಲವಾರು ಭೂಗತ ಜಗತ್ತಿನ ಕಥಾವಸ್ತುವುಳ್ಳ ಚಿತ್ರಗಳು ಬಂದಿರಬಹುದು. ಅದು 'ಜೋಗಿ' ಇರಬಹುದು, ಅಥವಾ 'ಕರಿಯ' ಇರಬಹುದು, ಅಥವಾ ಇನ್ನಾವುದೋ ಚಿತ್ರ ಇರಬಹುದು. ಆದರೂ 'ಓಂ' ಈಸ್ ಅಲ್ಟಿಮೇಟ್. ಭೂಗತ ಜಗತ್ತಿನ ಕತೆಗಳಿಗೆ ಓಂಕಾರ ಹಾಡಿದ್ದೇ ನಮ್ಮ 'ಓಂ' ಚಿತ್ರ.

ನನಗೆ ಲಾಂಗ್ ಹಿಡಿಯಲು ಕಲಿಸಿದ್ದೇ ಉಪೇಂದ್ರ. ಹಾಗೆಯೇ ಆ ಚಿತ್ರದಲ್ಲಿನ ರೌಡಿಗಳು ಮಾತನಾಡುವ ಶೈಲಿ ಕೂಡ. ಅದೆಲ್ಲ ನನಗೆ ಎಷ್ಟು ಹೊಸದಾಗಿತ್ತೆಂದರೆ, ಒಂದು ರೀತಿಯಲ್ಲಿ ಭೂಗತ ಜಗತ್ತಿನಲ್ಲಿ ಒಮ್ಮೆ ಸುತ್ತಾಡಿಕೊಂಡು ಬಂದಂತಿತ್ತು. ಮರ ಸುತ್ತುವ ಪಾತ್ರಗಳನ್ನು ಲೀಲಾಜಾಲವಾಗಿ ಮಾಡುತ್ತಿದ್ದ ನನಗೆ ಇದೆಲ್ಲವೂ ಹೊಸ ಅನುಭವವನ್ನು ನೀಡಿತು.

ಆಗ ಸಹಜವಾಗಿಯೇ "ಏನ್ ಗುರುವೇ? ರೌಡಿಸಂ ಕಲಿತಿದ್ದೀಯಾ?. ಇದೆಲ್ಲಾ ನಿನಗೆ ಹೇಗೆ ಗೊತ್ತು?" ಎಂದು ಉಪ್ಪಿಯನ್ನು ಕೇಳಿದ್ದೆ. ಆಗ ಉಪ್ಪಿ ನಗುನಗುತ್ತಾ "ಇಲ್ಲಾ ಶಿವಣ್ಣಾ, ರೌಡಿಸಂ ಬಗ್ಗೆ ನನಗೇನು ಗೊತ್ತಿದೆ ಬದ್ನೇಕಾಯಿ. ಆದ್ರೆ ನಾನು ಕಾಲೇಜ್‌ನಲ್ಲಿ ಓದುತ್ತಿದ್ದಾಗ ಚೋಟಿಯೂ, ಪಕ್ಕಾ ಪೋರ್ಕಿಯೂ ಆಗಿದ್ದೆ. ಅದೆಲ್ಲ ಈಗ ಈ ಚಿತ್ರ ಮಾಡುವಾಗ ಉಪಯೋಗಕ್ಕೆ ಬರುತ್ತಿದೆ" ಎಂದು ಹೇಳಿದ್ದರು.

ಈ ಕತೆಯನ್ನು ವಾಸ್ತವವಾಗಿ ಕುಮಾರ್ ಗೋವಿಂದ್‌ಗಾಗಿ ಮಾಡಿದ್ದರು. ಆದರೆ "ಅವರಿಗೆ ಮಾಡಿದ ಕತೆಯನ್ನು ನಾನು ಮಾಡಿದರೆ ಚೆನ್ನಾಗಿರೊಲ್ಲ, ಅವರಿಗೊಮ್ಮೆ ಫೋನ್ ಮಾಡಿ ಕೇಳುತ್ತೇನೆ" ಎಂದು ಕುಮಾರ್ ಗೋವಿಂದ್‌ಗೆ ಫೋನಾಯಿಸಿದೆ.

"ಇಲ್ಲ ಶಿವಣ್ಣ.... ನೀವು ಮಾಡ್ತೀರ ಅಂದ್ರೆ ನನ್ಗೆ ಬಹಳ ಇಷ್ಟ. ನೀವ್ ಮಾಡೋಕೆ ನನ್ನ ಕೇಳ್ಬೇಕಾ? ನಾನು ಈ ಸಬ್ಜೆಕ್ಟ್ ಬಿಟ್‌ಬಿಟ್ಟಿದ್ದೀನಿ. ನೀವ್ ಮಾಡಿ ಶಿವಣ್ಣ" ಎಂದು ಕುಮಾರ್ ಗೋವಿಂದ್ ಪ್ರೋತ್ಸಾಹಿಸಿದ್ದರು. "ಈ ಕತೆಯನ್ನು ಮಾಡಿ, ಆದರೆ 'ಸತ್ಯ' ಎಂಬ ಚಿತ್ರದ ಟೈಟಲ್ ನನಗೇ ಬೇಕು. ಅದನ್ನ ಮಾತ್ರ ಕೊಡಲ್ಲ" ಎಂದೂ ಅವರು ಹೇಳಿದರು. ನಾನು ಅವರಿಗೆ ಥ್ಯಾಂಕ್ಸ್ ಹೇಳಿದೆ.

ಇದರ ಬಗ್ಗೆ ಉಪೇಂದ್ರ ಅವರಿಗೆ ಹೇಳಿದಾಗ ಅವರು "ಆ ಕತೆನೇ ಬೇರೆ. ಈ ಕತೆನೇ ಬೇರೆ. ಅವರು ಹೇಳಿದ್ದು ಒನ್ ಲೈನ್ ಕತೆ. ಅದಕ್ಕೆ ಸಂಪೂರ್ಣ ಬೇರೆಯದ್ದೇ ಆದ ಆಯಾಮವನ್ನು ನೀಡಿದ್ದೇನೆ. ಹೀಗಾಗಿ 'ಸತ್ಯ' ಟೈಟಲ್ ನಮಗೆ ಸೂಟ್ ಆಗಲ್ಲ. ಅದರ ಬದಲಿಗೆ 'ಓಂ' ಎಂದು ಹೆಸರಿಡೋಣ" ಎಂದರು.

'ಓಂ' ಎಂಬ ಹೆಸರೇಳಿದ ಕೂಡಲೇ ನಮ್ಮ ಮನೆಯಲ್ಲಿ ಎಲ್ಲರಿಗೂ ಇಷ್ಟವಾಯಿತು. "ಫೋಟೋ ಸೆಷನ್ ನೋಡಿದ್ರೆ ಹಂಗೆ ಮಾಡಿದ. ಸಿನಿಮಾದ ಹೆಸ್ರು ನೋಡಿದ್ರೆ ಹಿಂಗ್ ಇಟ್ಟಿಟ್ಟ. ಇವ್ನ ಬಳಿ ಬಂಡವಾಳ ಇದೆ ಕಂದಾ..." ಎಂದು ಅಪ್ಪಾಜಿ ಹೇಳಿದ್ದರು. 'ಓಂ' ಅಂತ ಚಿತ್ರಕ್ಕೆ ಹೆಸರಿಟ್ಟು ಪತ್ರಿಕೆಗಳಲ್ಲಿ ಜಾಹೀರಾತು ಬಂದ ತಕ್ಷಣ ಜನ ಮತ್ತು ಉದ್ಯಮದವರು ಈ ಚಿತ್ರದ ಬಗ್ಗೆ ಮಾತನಾಡಲು ಶುರುಮಾಡಿದರು. ಅಲ್ಲಿಂದಲೇ ಆ ಚಿತ್ರ ಒಂದು ರೀತಿಯಲ್ಲಿ ಟೇಕ್ ಆಫ್ ಆಯಿತು.

ಒಂದು ದಿನ ನಮ್ಮ ಮನೆಯ ಹಾಲ್‌ನಲ್ಲಿ ಒಂದು ಚಿಕ್ಕ ದೃಶ್ಯದ ಚಿತ್ರೀಕರಣ ನಡೆಯಿತು. ಅವತ್ತು ಅಪ್ಪಾಜಿ, ಅಮ್ಮ ಎಲ್ಲರೂ ಮನೆಯಲ್ಲಿದ್ದರು. ಆದರೆ ಯಾವ ದೃಶ್ಯ ಚಿತ್ರೀಕರಿಸುತ್ತೇನೆ ಎಂದು ಯಾರಿಗೂ ಹೇಳದ ಉಪೇಂದ್ರ ಅವತ್ತೂ ಹೇಳಲಿಲ್ಲ. ಅಷ್ಟೇ ಅಲ್ಲ ನಮ್ಮ ಮನೆಯ ಹಾಲ್‌ನೊಳಗೆ ಹೋಗಲು ಯಾರಿಗೂ ಬಿಡದೇ ಎಲ್ಲರನ್ನೂ ಹೊರಗಡೆ ನಿಲ್ಲಿಸಿಬಿಟ್ಟರು. ಕ್ಯಾಮೆರಾ ಮನ್ ಮತ್ತು ಕಲಾವಿದರು ಮಾತ್ರ ಒಳಗೆ ಹೋದೆವು. ಅದು ನೋಡಿದರೆ ಹುಡುಗಿಯನ್ನು ರೇಪ್ ಮಾಡುವ ದೃಶ್ಯ. ಆ ದೃಶ್ಯವನ್ನು ಚಿತ್ರೀಕರಿಸಿ ಹೊರಬಂದ ಬಳಿಕ ಅಮ್ಮನಿಗೂ, ಅಪ್ಪಾಜಿಗೂ ವಿಷಯ ತಿಳಿಯಿತು.

"ಏನಪ್ಪಾ, ಇಂಥಾ ದೃಶ್ಯವನ್ನು ನಮ್ಮ ಮನೆಯಲ್ಲಿ ಚಿತ್ರೀಕರಿಸಿದ್ರಾ...?" ಎಂದು ಇಬ್ಬರೂ ಬೇಸರ ಪಟ್ಟುಕೊಂಡರು. ಅಪ್ಪಾಜಿಗಂತೂ ಇಂತಹ ದೃಶ್ಯಗಳೆಂದರೆ ಇಷ್ಟವಾಗುತ್ತಿರಲಿಲ್ಲ. ಆದರೆ ಆ ದೃಶ್ಯ ಚಿತ್ರದ ಅಂತಃಸತ್ವ ಎಂದು ವಿವರಿಸಿದೆ. ಆದ್ರೂ "ಇಂಥ ದೃಶ್ಯ ನಮ್ಮ ಮನೆಯಲ್ಲಿ ಆಗಬಾರದಿತ್ತು" ಎಂಬುದು ಅಮ್ಮನ ಭಾವನೆಯಾಗಿತ್ತು.

ಇನ್ನೊಂದು ದೃಶ್ಯದಲ್ಲಿ ನಾನು ಅಂಡರ್‌ವೇರ್‌ನಲ್ಲಿ ನಟಿಸಬೇಕಿತ್ತು. ಆದರೆ ಬರೀ ಅಂಡರ್‌ವೇರ್‌ನಲ್ಲಿ ನಾನು ನಟಿಸುತ್ತೇನೋ ಇಲ್ಲವೋ ಎಂದು ಉಪೇಂದ್ರಗೆ ಸಂಶಯವಿತ್ತು. ಈ ಬಗ್ಗೆ ಅವರು ಸಹಾಯಕ ನಿರ್ದೇಶಕ ಮುರಳಿ ಜೊತೆ ಮಾತನಾಡುತ್ತಾ "ಶಿವಣ್ಣ ಇದಕ್ಕೆ ಒಪ್ಪಲ್ಲ ಅನ್ಸುತ್ತೆ. ಅದರ ಬದಲಿಗೆ ದೊಡ್ಡ ಚಡ್ಡಿ ಹಾಕ್ಸೋಣ" ಎಂದು ಹೇಳಿದರು. ಇದನ್ನು ದೂರದಿಂದಲೇ ಕೇಳಿಸಿಕೊಂಡ ನಾನು ಏನು ಮಾಡಿದೆ ಗೊತ್ತೇ? ನನ್ನ ಎಲ್ಲ ಉಡುಪುಗಳನ್ನು ಬಿಚ್ಚಿ ಬರೀ ಅಂಡರ್‌ವೇರ್‌ನಲ್ಲಿ ಉಪೇಂದ್ರನ ಎದುರು ನಿಂತೆ. ಉಪೇಂದ್ರನಿಗೆ ಅಚ್ಚರಿಯಾಯಿತು. ನಾನು ಹಾಗೆ ನಿಂತಿದ್ದನ್ನು ಅವರಿಗೆ ನಂಬಲಿಕ್ಕೇ ಆಗಲಿಲ್ಲ. ಇದನ್ನೆಲ್ಲಾ ನಾನು ಯಾಕೆ ಹೇಳುತ್ತಿದ್ದೇನೆಂದರೆ ಒಂದು ಚಿತ್ರಕತೆ ಇಷ್ಟವಾದರೆ, ನಾವು ಅದರಲ್ಲಿ ಇನ್ವಾಲ್ವ್ ಆದರೆ, ಇದೆಲ್ಲ ಸಾಧ್ಯ ಎಂಬುದನ್ನು ಹೇಳಲಿಕ್ಕೆ.


ಈ ಚಿತ್ರದಲ್ಲಿ ಭೂಗತ ಜಗತ್ತಿನ ಜನ ನಟಿಸಿದ್ದು ನಿಮಗೆಲ್ಲ ಗೊತ್ತೇ ಇದೆ. ಆಗಲೇ ಜೇಡರಹಳ್ಳಿ ಕೃಷ್ಣಪ್ಪ ತನ್ವೀರ್, ಕೊರಂಗು ಮತ್ತು ಬೆಕ್ಕಿನ ಕಣ್ಣು ರಾಜೇಂದ್ರ.. ಅವರೆಲ್ಲರ ಜೊತೆ ಮಾತನಾಡಲು ನನಗೆ ಅವಕಾಶ ಸಿಕ್ಕಿದ್ದು. ಅವರು ನನ್ನೊಂದಿಗೆ ಹೇಗೆ ವರ್ತಿಸುತ್ತಿದ್ದರು? ಅವರು ನನ್ನ ಬಳಿ ಏನೇನು ಹೇಳಿದರು? ಅದನ್ನೆಲ್ಲಾ ನಾನು ನಿಮಗೆ ಹೇಳಲೇಬೇಕು. ಅದು ಸಿನಿಮಾದೊಳಗಿನ ಇನ್ನೊಂದು ಸಿನಿಮಾ ಅಂತ ನೀವು ತಿಳಿಯಬಹುದು.

(ಮುಂದುವರೆಯುವುದು)

ಹೊಸಬರ ಹೊಡಿ

ಹಳಬರ ಬಡಿ

ಹೊಡಿ, ಬಡಿ, ಕಡಿ ಖ್ಯಾತಿಯ ಕತೆಗಾರ ಎಸ್.ಎಸ್. ಡೇವಿಡ್ ಮತ್ತೆ ಗಾಂಧಿನಗರದಲ್ಲಿ ಪ್ರತ್ಯಕ್ಷರಾಗಿದ್ದಾರೆ. ತಮ್ಮ ಹೊಸ ಚಿತ್ರಕ್ಕೆ 'ಕಿಂಗ್ ಫಿಶರ್' ಎಂಬ ಸುಂದರ ಹೆಸರಿಟ್ಟಿದ್ದರೂ ಈ ಬಾರಿಯೂ ಅದೇ ಸೆಕ್ಸ್, ಥ್ರಿಲ್ಲರ್ ಸೂತ್ರಕ್ಕೆ ಡೇವಿಡ್ ಗಂಟುಬಿದ್ದಿದ್ದಾರೆ. ಒಂದೇ ಒಂದು ಮೆಚ್ಚಬೇಕಾದ ವಿಷಯ ಎಂದರೆ ಚಿತ್ರದಲ್ಲಿ ನಟಿಸುತ್ತಿರುವ ನಾಲ್ಕೂ ಜನ ತರುಣರು ಇಕ್ಕತ್ತಿನ ಅಜುಬಾಜಿನಲ್ಲಿರುವ ಹೊಸಬರು. ಈ ಚಿತ್ರವನ್ನು ಏಕಕಾಲದಲ್ಲಿ ಡೇವಿಡ್ ತಮಿಳು, ತೆಲುಗು ಮತ್ತು ಕನ್ನಡದಲ್ಲಿ ನಿರ್ಮಿಸುತ್ತಿದ್ದಾರೆ. ಒಂದು ಕಡೆ ಸಲ್ಲದವರು ಇನ್ನೊಂದು ಕಡೆ ಸಲ್ಲಬಹುದು ಎಂಬ ಕಾರಣಕ್ಕಿರಬಹುದೇ ಎಂಬುದು ಮಾತ್ರ ಕುತೂಹಲ!



ಎಲ್ಲೆಲ್ಲೂ ಗಟ್ಟಿಮೇಳ

ಚಿತ್ರರಂಗದಲ್ಲೀಗ ಮದುವೆಯ ಸೀಸನ್. 'ಅರಸು' ಚಿತ್ರದ ಮುಖಾಂತರ ಗಾಂಧಿನಗರದಲ್ಲಿ ಸುದ್ದಿ ಮಾಡಿದ ಯುವ ನಿರ್ದೇಶಕ ಮಹೇಶ್ ಬಾಬು ಮೈಸೂರಿನಲ್ಲಿ ಮದುವೆಯಾಗಿದ್ದಾರೆ. ಅದೇ ರೀತಿ ನಿರ್ದೇಶಕ ಪ್ರೇಮ್ ರವರ ರೈಟ್ ಹ್ಯಾಂಡ್ ಆಗಿರುವ ದಶಾವತಾರ ಚಂದ್ರು ಕಳೆದ ತಿಂಗಳು ಕೆಲವೇ ಜನರ ಸಮ್ಮುಖದಲ್ಲಿ ಧರ್ಮಸ್ಥಳದಲ್ಲಿ ಮದುವೆಯಾಗಿದ್ದಾರೆ. ಈಗ ಎಲ್ಲರ ಕಣ್ಣು ಇರುವುದು ಪ್ರೇಮ್ ಮತ್ತು ರಕ್ಷಿತಾರ ಮದುವೆಯ ಕಡೆಗೆ. ಮಾರ್ಚ್ 8ರಂದು ಈ ಜೋಡಿ ಹಸೆಮಣೆಯೇರುವುದು ಬಹುತೇಕ ಖಾತ್ರಿಯಾಗಿದೆ.

ಈ ಮಧ್ಯೆ ಎರಡೆರಡು ಮದುವೆಯಾಗಿ ಏಳೆಂಟು ಬಂಗಲೆಗಳ ಮಾಲೀಕರಾಗಿದ್ದ ದ್ವಾರಕೀಶ್ ಕೆಲವು ವರ್ಷಗಳ ಹಿಂದೆ ಕೇರಾಫ್ ಫುಟ್ ಪಾತ್ ಆಗಿದ್ದುದು ಎಲ್ಲರಿಗೂ ಗೊತ್ತಿರುವ ವಿಷಯ. 'ಆಪ್ತಮಿತ್ರ' ಚಿತ್ರದ ಅಭೂತಪೂರ್ವ ಯಶಸ್ಸಿನ ನಂತರ ದ್ವಾರಕೀಶ್ ಕೋಟ್ಯಾಧಿಪತಿ ಆಗಿದ್ದಾರೆ. ಈಗ ಅವರು ಹೊಸ ಮನೆಯನ್ನು ಕಟ್ಟಿಸಿ ಅದಕ್ಕೆ 'ಅಭಿವಂದನೆ' ಎಂದು ಹೆಸರಿಟ್ಟಿದ್ದಾರೆ. ಸಾಹಸಕ್ಕೆ ಹೆಸರಾದ ಕುಳ್ಳನಿಗೆ ನಮ್ಮ ಅಭಿನಂದನೆಗಳು.

R.B.P. LANKESH, Kannada Weekly Price Rs. 10/- 21-2-2007 RNI No. KARKAN2005/14648 Regd.No.KA/BG(S)/2036/200

ಯುವಕರ ಲಗ್ಗೆ

ಕನ್ನಡ ಚಿತ್ರರಂಗಕ್ಕೆ ಯುವಕರು ತಂಡೋಪತಂಡವಾಗಿ ದಾಳಿಯಿಡುತ್ತಿದ್ದಾರೆ. ಇದಕ್ಕಿಂತಲೂ ವಿಶೇಷವೆಂದರೆ ಹೊಸ ನಾಯಕರನ್ನು ಪ್ರೇಕ್ಷಕರೂ ಸ್ವಾಗತಿಸುತ್ತಿದ್ದಾರೆ.






'ಮುಂಗಾರು ಮಳೆ' ನಾಯಕ ಕಾಮಿಡಿ ಗಣೇಶ್ ಈಗ 25 ಲಕ್ಷ ರೂ. ಸಂಭಾವನೆ ಪಡೆಯುತ್ತಿದ್ದಾನೆ. 'ನೆನಪಿರಲಿ' ಖ್ಯಾತಿಯ ಪ್ರೇಮ್ ಅಷ್ಟೇನು ಯುವಕನಲ್ಲದಿದ್ದರೂ ಚಿತ್ರರಂಗದಲ್ಲಿ ಈಗಲೂ ಚಾಲ್ತಿಯಲ್ಲಿರುವ ವಯೋವೃದ್ಧ ಮತ್ತು ಮಧ್ಯವಯಸ್ಕ ನಾಯಕ ನಟರಿಗೆ ಹೋಲಿಸಿದರೆ ಈತ ಯುವಕನೇ. ಗಣೇಶ್ ನಂತರ ಹೆಚ್ಚು ಚಾಲ್ತಿಯಲ್ಲಿರುವ ಪ್ರೇಮ್ ಈಗಾಗಲೇ ನಾಲ್ಕು ಚಿತ್ರಗಳಿಗೆ ಬುಕ್ ಆಗಿದ್ದಾನೆ.

ಇನ್ನೂ ಸರಿಯಾಗಿ ಮೀಸೆ ಬರದ, ದೇವರಾಜ್ ಮಗ ಪ್ರಜ್ವಲ್ ನಟಿಸಿದ 'ಸಿಕ್ಸರ್' ಹೇಳಿಕೊಳ್ಳುವ ಯಶಸ್ಸು ಪಡೆಯದಿದ್ದರೂ "ಈ ಹುಡುಗ ಪರವಾಗಿಲ್ಲ" ಎಂದು ಗಾಂಧಿನಗರಿಗರು ಹೇಳುತ್ತಿದ್ದಾರೆ. ಈ ಮಧ್ಯೆ 'ಜೋಗಿ'ಯ ವಿಲನ್ 'ಬಿದ್ದ' ಆದಿ ಲೋಕೇಶ್ ನಟಿಸಿದ 'ಪೂಜಾರಿ' ಕೂಡ ಮುಗ್ಗರಿಸಿದ್ದರೂ ಆತ ಚಿತ್ರರಂಗದಲ್ಲಿ ಉಳಿದುಕೊಳ್ಳುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.





ಈಗ 'ಕರಿಯ' ಚಿತ್ರದ ನಿರ್ಮಾಪಕ ಬಾಲರಾಜ್ ಆನೇಕಲ್ ತಮ್ಮ 16 ವರ್ಷದ ಮಗ ಸಂತೋಷ್‌ನನ್ನು 'ಗೊಲ್ಲ' ಚಿತ್ರದ ಮುಖಾಂತರ ನಾಯಕನಟನಾಗಿಸಲು ಹೊರಟಿದ್ದಾರೆ. ಈ ಚಿತ್ರಕ್ಕೆ ಬಾಲರಾಜ್ ಮೂರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿದ್ದಾರಂತೆ.

ಖಳನಟ ಸುಧೀರ್‌ರವರ ಪುತ್ರ ತರುಣ್ ಕೂಡ ಒಂದೆರಡು ಪೋಷಕ ಪಾತ್ರಗಳ ನಂತರ 'ವಿದ್ಯಾರ್ಥಿ' ಚಿತ್ರದಲ್ಲಿ ನಾಯಕ ನಟ ಪಟ್ಟವನ್ನು ಏರಿದ್ದಾನೆ. ಬಾಕ್ಸಾಫೀಸಿನಲ್ಲಿ 'ವಿದ್ಯಾರ್ಥಿ' ಫೇಲ್ ಆದರೂ ಗಾಂಧಿನಗರದವರ ದೃಷ್ಟಿಯಲ್ಲಿ ತರುಣ್ ಪಾಸಾಗಿದ್ದಾನೆ.




ಈ ನಡುವೆ ರಾಘವೇಂದ್ರ ರಾಜ್‌ಕುಮಾರ್ ರವರ ಮಗ ಕೂಡ ತೆರೆಮರೆಯಲ್ಲಿ ಹೀರೋ ಆಗಲು ಕಸರತ್ತು ಮಾಡುತ್ತಿದ್ದಾನೆ. ಇದೇ ತರಹದ ಸುದ್ದಿ ಜಗ್ಗೇಶ್ ಮನೆಯಿಂದ ಕೇಳಿಬರುತ್ತಿದೆ. ಜಗ್ಗೇಶ್ ಮಗ ಈ ವರ್ಷವೇ ನಾಯಕನಾಗಿ ನಟಿಸುವ ಸಾಧ್ಯತೆ ಇದೆ. 'ವೀರು' ಚಿತ್ರದಲ್ಲಿ ಬಾಲನಟನಾಗಿ ಈಗಾಗಲೇ ಒಂದು ಕೈ ನೋಡಿರುವ ಎಸ್. ನಾರಾಯಣ್ ಮಗ ಕೂಡ ಈ ವರ್ಷವೇ ಮರಸುತ್ತು... ಲಕ್ಷಣಗಳು ಕಾಣುತ್ತಿವೆ.



ರಾಜಾಜಿನಗರದಿಂದ ಬಂದಿರುವ ಸುದ್ದಿಯ ಪ್ರಕಾರ ಕ್ರೇಜಿ ಸ್ಟಾರ್ ರವಿಚಂದ್ರನ್ ಕೂಡಾ ಈ ಟ್ರೆಂಡ್‌ನಲ್ಲೇ ತಮ್ಮ ಮಗನನ್ನು ನಾಯಕನಾಗಿ ಕನ್ನಡಿಗರಿಗೆ ಪರಿಚಯಿಸಲು ಹವಣಿಸುತ್ತಿದ್ದಾರೆ.

ಈ ಹೊಸಬರ ಪ್ರವಾಹದಲ್ಲಿ ಎಷ್ಟು ಜನ ಕೊಚ್ಚಿಹೋಗುತ್ತಾರೋ? ಎಷ್ಟು ಜ... ಉಳಿದುಕೊಳ್ಳುತ್ತಾರೋ ಎಂಬುದನ್ನು ಕಾಲವ... ನಿರ್ಧರಿಸಬೇಕಾಗಿದೆ. ಒಂದು ಮಾತಂತೂ ಸ್ಪಷ್ಟ, ಹಳೆಯ ಮುಖಗಳನ್ನು ನೋಡಿ ನೋಡಿ ಬೇಸತ್ತ ಪ್ರೇಕ್ಷಕರಿಗೆ ಹೊಸ ಮುಖಗಳಂತೂ ಪರಿಚಯವಾಗಲಿವೆ.

ಈಗ ನೆರೆಯ ರಾಜ್ಯದ ರೌಡಿಗಳ ಆಗಮನ!



'ಕೊಳಲು ಖಡ್ಗವಾದರೆ?' ಎಂಬ ಕಿಕ್ಕರ್ ನೊಂದಿಗೆ 'ಗೊಲ್ಲ' ಚಿತ್ರದ ಜಾಹೀರಾತುಗಳು ಪ್ರಕಟಗೊಂಡಿವೆ. ಅಂದರೆ, ಈ ಚಿತ್ರ ಗೊಲ್ಲ ಸಮಾಜಕ್ಕೆ ಸಂಬಂಧಪಟ್ಟದ್ದು ಎಂದು ಸುಲಭವಾಗಿ ಊಹಿಸಬಹುದು. ಅಷ್ಟೆ ಅಲ್ಲ, ಇದರಲ್ಲಿ ಸಾಕಷ್ಟು ರಕ್ತಪಾತ ಇರುತ್ತದೆ ಎಂಬುದನ್ನು ಕೂಡ. ಆದರೆ ಆ ಚಿತ್ರದವರು ಹೇಳುವುದೇನೆಂದರೆ "ನಾಯಕ ಗೊಲ್ಲ ನಾಯಕಿ ಮುಸ್ಲಿಂ. ಇದು ಪ್ರೇಮಕಥೆ". ಹೀಗೂ ಇರುತ್ತೆ ಇವತ್ತಿನ ಪ್ರೇಮಕತೆಗಳು!

ಹಿಂದೆ 'ಕರಿಯ' ಚಿತ್ರದಲ್ಲಿ ಬೆಂಗಳೂರಿನ 27 ಕುಖ್ಯಾತ ರೌಡಿಗಳನ್ನು ಹಾಕಿಕೊಂಡು ನಿರ್ಮಿಸಿದ್ದ ಆನೇಕಲ್ ಬಾಲರಾಜ್ ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ವಿಷಯ ಏನೆಂದರೆ, ತಮ್ಮ ಹೊಸ ಚಿತ್ರದಲ್ಲಿ ಅವರು ರಾಜ್ಯದ ಗಡಿ ದಾಟಿ ಆಂಧ್ರ ಮತ್ತು ತಮಿಳುನಾಡಿನಿಂದಲೂ ಕುಖ್ಯಾತ ರೌಡಿಗಳನ್ನು ಕರೆತರುತ್ತಾರಂತೆ. "ಇದೊಂದು ದಾಖಲೆ ಆಗುತ್ತೆ" ಎನ್ನುತ್ತಾರೆ ಬಾಲರಾಜ್. ಹೀಗೂ ಇರುತ್ತೆ ಇವತ್ತಿನ ಕಾಲದ ದಾಖಲೆಗಳು!

ಮುಗಿಯಿತು ರ-ರ ಜಗಳ
ಆರಂಭವಾಯಿತು ಸಂ-ಸಂ ಕಿತಾಪತಿ

ರಮ್ಯಾ ಮತ್ತು ರಕ್ಷಿತಾ ನಡುವಿನ ಕೋಳಿ ಜಗಳ ಮುಗಿಯುವ ಹಂತ ತಲುಪಿರುವಾಗಲೇ ಸಂಜನಾ ಮತ್ತು ಸಂಜನಾ ಎಂಬ ಇಬ್ಬರು ನಟಿಯರ ನಡುವೆ ಪೈಪೋಟಿ ಶುರುವಾಗಿದೆ.

ಸಂಜನಾ ಗಾಂಧಿ 'ಮುಂಗಾರು ಮಳೆ' ಚಿತ್ರದ ನಾಯಕಿ. ಈ ಚಿತ್ರದ ಯಶಸ್ಸಿನ ನಂತರ ಆಕೆ ಜಗ್ಗೇಶ್ ಜೊತೆ 'ಕೋಡಗನ ಕೋಳಿ ನುಂಗಿತ್ತಾ' ಚಿತ್ರದಲ್ಲಿ ನಟಿಸಿದ್ದಾಳೆ. ಇನ್ನೂ ಎರಡು ಮೂರು ಆಫರ್‌ಗಳು ಆಕೆಗೆ ಬಂದಿವೆಯಂತೆ.





ಸಂಜನಾ ಎಂಬ ಹುಡುಗಿ ರವಿ ಶ್ರೀವತ್ಸ ನಿರ್ದೇಶನದ 'ಗಂಡ ಹೆಂಡತಿ' ಚಿತ್ರದಲ್ಲಿ ಅರೆನಗ್ನವಾಗಿ ನಟಿಸಿ ಲೈಮ್ ಲೈಟಿಗೆ ಬಂದಾಕೆ. ನಟನೆಗಿಂತ ಮಾತು ಮತ್ತು ವೈಯ್ಯಾರದಿಂದ ಗಮನ ಸೆಳೆದ ಈಕೆ ಈಗ ಓಂ ಪ್ರಕಾಶ್ ಪಾಳಯ ಸೇರಿದ್ದಾಳೆ. "ಈ ಹುಡುಗಿಯನ್ನು ರಕ್ಷಿತಾಳಷ್ಟು ಎತ್ತರಕ್ಕೆ ಬೆಳೆಸುತ್ತೇನೆ" ಎಂದು ಓಂ ಪ್ರಕಾಶ್ ಶಪಥ ಮಾಡಿದ್ದಾರಂತೆ. ಆ ಶಪಥದಿಂದ ಪಾಪ ಈ ಹುಡುಗಿಗೆ ಅದೇನು ಕಾದಿದೆಯೋ?

ಅಂತೂ ಈ ಇಬ್ಬರೂ ಸಂಜನಾಗಳು ಸದ್ಯಕ್ಕೆ ಚಿತ್ರರಂಗದಲ್ಲಿ ಸುದ್ದಿ ಸುಬ್ಬಕ್ಕರಾಗುತ್ತಿದ್ದಾರೆ.

ಮೂರನೆ ಅವತಾರ



ಈತ ನಾಯಕ ನಟನಾಗಿ ಸೋತಿದ್ದಾಯಿತು. ನಿರ್ಮಾಪಕನಾಗಿ ಹಲವಾರು ಬಾರಿ ಮುಗ್ಗರಿಸಿದ್ದೂ ಆಯಿತು. ಆದರೂ ಮರಳಿ ಯತ್ನವ ಮಾಡು ಎಂಬಂತೆ ಈಗ ಈತ ನಿರ್ದೇಶಕನಾಗಲು ಹೊರಟಿದ್ದಾರೆ. ಇಂತಹ ಸಾಹಸಕ್ಕೆ ಕೈಹಾಕುತ್ತಿರುವುದು ಆಟಕ್ಕಿಲ್ಲದ, ಲೆಕ್ಕಕ್ಕಿಲ್ಲದ ಮದನ್ ಮಲ್ಲು.

ಇವರ ಹೊಸ ಚಿತ್ರಕ್ಕೆ ಸುಪುತ್ರ ಮಯೂರ್ ಪಟೇಲನೇ ನಾಯಕ. ಇವರಿಬ್ಬರ ಈ ಹೊಸ ಜುಗಲ್‌ಬಂದಿ ಹೇಗಿರುತ್ತೆ ಎಂಬುದರ ಬಗ್ಗೆ ಗಾಂಧಿನಗರ ಮಾತ್ರ ತಲೆಕೆಡಿಸಿಕೊಂಡಿಲ್ಲ.

ಹುಟ್ಟುಹಬ್ಬಕ್ಕೆ 'ಭೂಪತಿ' ಗಿಫ್ಟ್



ಮುಂದಿನ ವಾರ ನಟ ದರ್ಶನ್ ಹುಟ್ಟು ಹಬ್ಬವಾದ್ದರಿಂದ ಅಂದೇ ಅವರು ನಟಿಸಿರು... 'ಭೂಪತಿ' ಚಿತ್ರವನ್ನು ಹೇಗಾದರೂ ಮಾ... ಬಿಡುಗಡೆ ಮಾಡಬೇಕೆಂದು ನಿರ್ಮಾಪಕ ಕೆಸಿಎ... ಚಂದ್ರಶೇಖರ್ ತರಾತುರಿಯಲ್ಲಿ ಅದನ್ನು ಮುಗಿ... ದ್ದಾರೆ. ಇದು ದರ್ಶನ್ ನಟಿಸಿರುವ 25ನೇ ಚಿ... ವಾದ್ದರಿಂದ ಅವರ ಅಭಿಮಾನಿಗಳು ಚಿತ್ರವನ... ಗೆಲ್ಲಿಸುತ್ತಾರೆಂಬ ಆಸೆ ಚಂದ್ರಶೇಖರ್‌ಗೆ. ಇ... ರೊಂದಿಗೆ ಅದೇ ದಿನ ದರ್ಶನ್ ಅಭಿನಯ... 'ಗಜ' ಎಂಬ ಚಿತ್ರ ಕೂಡ ಸೆಟ್ಟೇರಲಿದೆ.

ಹೋದವರ್ಷ ಇದೇ ಸಮಯದಲ್ಲಿ ದರ್ಶ... ನಟಿಸಿದ 'ಸುಂಟರಗಾಳಿ' ಮತ್ತು ಸುದೀಪ್ ನಟಿ... 'ಮೈ ಆಟೋಗ್ರಾಫ್' ಒಂದೇ ದಿನ ತೆರೆಕಂ... ಸ್ಪರ್ಧೆಗೆ ನಿಂತಿದ್ದವು. ಆಗ 'ಸುಂಟರಗಾಳಿ' ಸೋ... 'ಮೈ ಆಟೋಗ್ರಾಫ್' ಗೆದ್ದಿತ್ತು. ಈ ಬಾ... ಬರ್ಥಡೇ ಬಾಯ್ ದರ್ಶನ್ ಚಿತ್ರ ಬಿಡುಗ... ಆಗುತ್ತಿದ್ದರೆ, ಸುದೀಪ್ ತಮ್ಮ 'ನಂ. 7... ಶಾಂತಿನಿವಾಸ' ಚಿತ್ರದಲ್ಲಿ ಕೂಲಾಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar...